ವಿಧಾನಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಗಿದೆ.

(ಅನುಬಂಧ-1)

ಅಧ್ಯಕ್ಷರು : ಈಗ ಸದನವನ್ನು 3–45 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2 ಗಂಟೆ 51 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3–45 ಗಂಟೆಗೆ ಸಮಾವೇಶಗೊಳ್ಳಲು ನಿರ್ಣಯಿಸಿತು)

(ಸದನವು 4–08 ನಿಮಿಷಕ್ಕೆ ಸಮಾವೇಶಗೊಂಡಿತು ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು),

ಅಧ್ಯಕ್ಷರು : ಈಗ ವಿಧೇಯಕವನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳೋಣ.

(ಆ) ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕ 2006.

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ "2006 ನೇ ಇಸವಿಯ ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವ ಮಂಡಿಸಲ್ಪಟ್ಟಿತು.

ಶ್ರೀ ಬಸವರಾಜ ಹೊರಟ್ಟಿ : ಅಧ್ಯಕ್ಷರೇ, ಸಂವಿಧಾನ 191ರ ಅನುಚ್ಛೇದ 1ರಡಿ ಯಾವುದೇ ವಿಧಾನಸಭೆ ಪರಿಷತ್ತು ಸದಸ್ಯರು ಹೇಗೆ ಅನರ್ಹತೆ ಹೊಂದುತ್ತಾರೆ ಎಂದು ಹೇಳಲಾಗಿದೆ. ಒಂದನೇ ಖಂಡದಲ್ಲಿ ತಿಳಿಸಿರುವಂತೆ ಯಾವುದೇ ಸದಸ್ಯ ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಲಾಭದಾಯಕ ಹುದ್ದೆ ಹೊಂದಿಲ್ಲ ಆತನು ವಿಧಾನಮಂಡಲದ ಸದಸ್ಯನಾಗಲು ಅಥವಾ ಸದಸ್ಯನಾಗಿ ಆಯ್ಕೆ ಹೊಂದಲು ಅರ್ಹತೆ ಹೊಂದಿರುತ್ತಾನೆ. ಆದರೆ ರಾಜ್ಯ ಸರ್ಕಾರವು ಈ ರೀತಿ ಅನರ್ಹತೆಗೊಳಪಡದ ಹುದ್ದೆಯನ್ನು ಯಾವುದು ಒಂದು ಸ್ಪಷ್ಟವಾಗಿ ಕಾನೂನು ಮೂಲಕ ಘೋಷಿಸಬೇಕಾಗುತ್ತದೆ. ಕರ್ನಾಟಕದಲ್ಲಿ ಕರ್ನಾಟಕ ವಿಧಾನಮಂಡಲ ಸದಸ್ಯರು ಆಯ್ಕೆಯಾಗುವಾಗ ಯಾವ ಹುದ್ದೆ ಹೊಂದಿದ್ದರೂ ಅನರ್ಹತೆ ಹೊಂದುವುದಿಲ್ಲ ಎಂಬ ಅಂಶವನ್ನು ಸದರಿ

ಅಧಿನಿಯಮ 3ನೇ ಪ್ರಕರಣದಲ್ಲಿ ವಿವರವಾಗಿ ಹೇಳಲಾಗಿದೆ. ಈ ಅಧಿನಿಯಮ ಬಹಳ ಹಳೆಯದಿದ್ದು ಅದರಲ್ಲಿ ಕೆಲವು ನಿರುಪಯುಕ್ತ ಅಥವಾ ಚಾಲ್ತಿಯಲ್ಲಿರುವ ಹುದ್ದೆಗಳು ಒಳಗೊಂಡಿರುತ್ತವೆ. ಆದ್ದರಿಂದ ಈ ತಿದ್ದುಪಡಿ ತರುವುದು ಅವಶ್ಯಕ ಎಂಬ ವಿಷಯವನ್ನು ಈ ಸದನದ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಇದರ ಮೂರನೇ ಖಂಡದಲ್ಲಿ Village Defence party constituted under the (Karnataka) Village Defence parties Act, 1964 ಪ್ರಕಾರ office of the Secretaries of the District Development Boards constituted by the state Government. Office of the Adhyaksha and Upadhyaksha of the zilla panchayats and Pradhana and Upa-Pradhana of Mandal Panchayats, Karnataka zilla panchayats. Taluk Panchayat Samitis, Mandal Panchayats and Nyaya panchayats, APMC, Aided Educational institutions ಇವೆಲ್ಲ ಅದರಲ್ಲಿ ಬರಬೇಕಾಗುತ್ತದೆ. ಆ ದೃಷ್ಟಿಯಿಂದ ಇವೆಲ್ಲವನ್ನೂ ಇವತ್ತಿನ ಬಿಲ್‌ನಲ್ಲಿ ಅಳವಡಿಸಲಾಗಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಈ ಭೂಮಿ ಮೇಲೆ ಯಾವು ಯಾವುದನ್ನು ಬಿಟ್ಟಿದ್ದೀರಿ ಅದನ್ನಾದರೂ ಪಟ್ಟಿಯಲ್ಲಿ ಹೇಳಿ. ಎಲ್ಲಾ ಸೇರಿಸಿ ಬಿಟ್ಟಿದ್ದೀರಿ. ಅಯ್ಯೋ!

ಶ್ರೀ ಬಸವರಾಜ ಹೊರಟ್ಟಿ : ಮುಂದೆ ಯಾವ ರೀತಿಯಿಂದಲೂ ನ್ಯೂನತೆ ಉಳಿಯಬಾರದು ಹಾಗೂ ಎಲ್ಲಾ ರೀತಿಯ ಸಂಸ್ಥೆಗಳು ಇದರಲ್ಲಿ ಬರಬೇಕು ಎಂದು ಸೇರಿಸಿದ್ದೇವೆ. ಉದಾಹರಣೆಗೆ ಶಿಕ್ಷಣ ಸಂಸ್ಥೆಗಳು,ಅಲ್ಲಿ ಯಾವುದೇ ಲಾಭ ಇರುವುದಿಲ್ಲ ಆದರೂ ಒಂದೊಂದ್ಸಲ ಅಟ್ರಾಕ್ ಆಗಬಾರದು ಅನ್ನುವುದಕ್ಕೆ ಇಲ್ಲಿ ಸೇರಿಸಲಾಗಿದೆ. ಸವಿಸ್ತಾರವಾಗಿ ಚರ್ಚೆಯಾದ ಮೇಲೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಎನ್. ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು) : ಅಧ್ಯಕ್ಷರೇ ಈ ಬಿಲ್ಲನ್ನು ಬಹಳ ತರಾತುರಿಯಿಂದ ತರಲಾಗಿದೆ. ಈಗ ಕರ್ನಾಟಕದಲ್ಲಿ ಜೆಡಿಎಸ್ ಬಿಜೆಪಿಯ ಸಮಿಶ್ರ ಸರ್ಕಾರ ಇದೆ. ಯಾಕೋ ಯಡಿಯೂರಪ್ಪನವರಿಲ್ಲ, ಜಗದೀಶ್ ಶೆಟ್ಟರ್, ಅಶೋಕ ಕೇಡ್ರ್ಲಿ ರಾಷ್ಟ್ರ ಮಟ್ಟದಲ್ಲಿ ಈ ಬಿಲ್ಲನ್ನು ಪಾರ್ಲಿಮೆಂಟಿನಲ್ಲಿ ತಂದಾಗ ಅಲ್ಲಿ ವಿರೋಧ ಪಕ್ಷದ ನಾಯಕ ಅದ್ವಾನಿಯವರು ಇದಕ್ಕೆ ವಿರೋಧ ಮಾಡಿದ್ದಾರೆ. ಇಲ್ಲಿ ಬಿಜೆಪಿ ಆಡಳಿತದಲ್ಲಿ ಪಾಲುದಾರ ಪಕ್ಷ, ಇವತ್ತು ಅವರಿಗೂ ಇವರಿಗೂ ಪರಸ್ಪರ ಹೊಂದಾಣಿಕೆ ಇಲ್ಲ, ಹೊರಗಡೆ ಅವರು

ಹೇಳುವುದಿಲ್ಲ, ನಾವೆಲ್ಲರೂ ಒಂದಾಗಿದ್ದೇವೆ ಅನ್ನುತ್ತಾರೆ. ಸಮಿಶ್ರ ಸರ್ಕಾರದಲ್ಲಿ ಯಾವಾಗಲೂ ಒಂದಾಗಿದ್ದೇವೆ ಅಂತ ಹಾಡಬೇಕಾಗುತ್ತದೆ.

ಇವತ್ತು ರಾಷ್ಟ್ರಮಟ್ಟದ ಬಿಜೆಪಿ ಪಾರ್ಲಿಮೆಂಟಿನಲ್ಲಿ ಈ ಮಸೂದೆಗೆ ವಿರೋಧಿಸುತ್ತದೆ ಆದರೆ ಇಲ್ಲಿ ಯಡಿಯೂರಪ್ಪನವರು ಅದ್ವಾನಿಯವರಿಂದ ಆಗಲಿ, ಬೇರೆ ರಾಜ್ಯಘಟಕ ಮಾಡಿಕೊಂಡಿದ್ದಾರೋ ಏನೋ ಗೊತ್ತಿಲ್ಲ. ಇವತ್ತು ದ್ವಂದ್ವದ ಈ ಬಿಲ್‌ನ್ನು ತಂದಿದ್ದಾರೆ. ನಾನು ಅದರ ಖಂಡ ಇತ್ಯಾದಿಗಳಿಗೆ ಹೋಗುವುದಿಲ್ಲ. ತಿದ್ದುಪಡಿ ಬಗ್ಗೆ ರಮೇಶ್‌ಕುಮಾರ್ ಹೇಳುತ್ತಾರೆ. ತಾತ್ವಿಕವಾಗಿ ಇದರ ಹಿನ್ನಲೆ ಹೇಳ ಬಯಸುತ್ತಿದ್ದೇನೆ. ಎಷ್ಟು ತರಾತುರಿಯಿಂದ ಬಿಲ್ ತಂದಿದ್ದೀರಿ ಅಂದರೆ ನಿಮ್ಮ ಅಧಿಕಾರಿಗಳು ನಿಮ್ಮ ಮಾತು ಕೇಳುತ್ತಾ ಇಲ್ಲ. ಕನ್ನಡದಲ್ಲಿ ಇಂಗ್ಲೀಷ್‌ನಲ್ಲಿ ಬೇರೆ ಬೇರೆ ಇದೆ. ಕನ್ನಡದಲ್ಲಿರುವುದು ಇಂಗ್ಲೀಷ್‌ನಲ್ಲಿಲ್ಲ. ನೀವು ಕೆಲಸ ಮಾಡುತ್ತಿರುವಾಗ ನಿಮ್ಮ ಮಾತು ಅವರು ಕೇಳುತ್ತಲೂ ಇಲ್ಲ, ಇಂಗ್ಲೀಷ್‌ನಲ್ಲಿರುವುದು ಪರ್‌ಪೆಕ್ಟಾಗಿ ಕನ್ನಡದಲ್ಲೂ ತರಬೇಕು. ಅದರಲ್ಲಿ ಎಡವಿದ್ದಾರೆ. ಈಗಾಗಲೇ ಎರಡೂ ಸದನದಲ್ಲಿ ಚರ್ಚೆಯಾಗಿ ರಾಷ್ಟ್ರಪತಿಗೆ ಕಳಿಸಿದ್ದಾರೆ. The President has made certain observations. ಇದಕ್ಕೆ ರಾಷ್ಟ್ರಮಟ್ಟದಲ್ಲಿ ವ್ಯಾಪಕವಾದ ಚರ್ಚೆಯಾಗುತ್ತಿದೆ. ಅದಕ್ಕೆ ಪ್ರಧಾನಮಂತ್ರಿಗಳೂ ರಾಷ್ಟ್ರಪತಿಗಳನ್ನು ಭೇಟಿಯಾಗಿ ಇದರ ಬಗ್ಗೆ ಮಾಹಿತಿ ಕೊಟ್ಟಿದ್ದಾರೆ. ಇನ್ನೂ ಕೂಡ ಸಂಪುಟದಲ್ಲಿ ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿಲ್ಲ. ಬರುವ ಲೋಕಸಭೆಯಲ್ಲಿ ಚರ್ಚೆಯಾಗುತ್ತದೆ ಎಂದು ನಮಗೆ ಗೊತ್ತಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಕರ್ನಾಟಕದಲ್ಲಿ ಬಹಳ ತರಾತುರಿಯಿಂದ ಏಕೆ ಬಿಲ್ ತರುತ್ತೀರಿ? ಅದರ ಹಿನ್ನಲೆ ಗೊತ್ತಿದೆ.ಆದರೆ ಬಿಲ್ ತರುವುದರಲ್ಲಿ ಸರ್ಕಾರದ ಸ್ಪಷ್ಟ ನೀತಿಯೇನಿದೆ, ಎರಡೂ ಪಕ್ಷಗಳು ಒಪ್ಪಿಕೊಂಡು ಬಿಲ್ ತರಬೇಕಾಗುತ್ತದೆ. ನಮಗೆ ಸಮಜಾಯಿಷಬೇಕಾಗುತ್ತದೆ, ಆ ರೀತಿ ಬಡೆ ಯುತ್ತಾ ಇಲ್ಲ. ಇವತ್ತು ಬಿಎಸಿಯಲ್ಲಿ ಆಯಿತು. ಏಕೆ ಮುಂದೆ ಸಭೆ ಕರೆಯಬಹುದಿತ್ತಲ್ಲ; ಅಂದರೆ ಇಲ್ಲ ಇಲ್ಲ ಇವತ್ತೇ ಆಗಬೇಕು ಅಂತ ಬಹಳಷ್ಟು ಇವರೆಲ್ಲಾ ಹೇಳಿದರು. ಕಡೆಗೆ ಎಂ.ಪಿ. ಪ್ರಕಾಶರು ಹೇಳಿದ ಮೇಲೆ ಒಪ್ಪಿಕೊಂಡೆವು, ಒಳ್ಳೆಯದಾಗಲಿ ಅಂತ. ಎಂ.ಪಿ. ಪ್ರಕಾಶರೂ ಈ ಬಿಲ್ ಮೇಲೆ ಚರ್ಚೆ ಆಗಬೇಕು ಎಂದು ಹೇಳಿದ್ದಾರೆ. ಇದರ ಬಗ್ಗೆ ಇವತ್ತು ನಾನು ಹೇಳುವುದಿಷ್ಟೇ: ಜಾರ್ಖಂಡ್ ನಲ್ಲಿ ಬಿಜೆಪಿ ಸರ್ಕಾರ ಇದೆ. ಅಲ್ಲಿ ಶಾಸನಸಭೆಯಲ್ಲಿ ಇಂಥದ್ದನ್ನೇ ಬಿಲ್ಲನ್ನು ಪಾಸು ಮಾಡಿದಾಗ ಅಲ್ಲಿನ ರಾಜ್ಯಪಾಲರು ಮತ್ತೆ ವಾಪಸ್ ಕಳೂಹಿಸಿದ್ದಾರೆ. ಮತ್ತೆ ಪಾರ್ಲಿಮೆಂಟಿನಲ್ಲಿ ಪುನರ್ ಪರಿಶೀಲಿಸಬೇಕು ಅಂತ ವಿಷಯಗಳೇನು

ಹೇಳಿದ್ದಾರೆ. Whether there is a compre hensive criteria and whether the Bill ensured unifirmity in application of the office of profit., in sense. Whether any office exempted from office of profit. law was going to be profit in any otherr state or union Terriroty. ಇದಕ್ಕೆ ಏನು ಹೇಳಿದ್ದಾರೆ ಅಂದರೆ ಉತ್ತರಪ್ರದೇಶದಲ್ಲಿ ಜಯಾ ಬಚ್ಚನ್ ಅವರನ್ನು ಅನರ್ಹತೆಗೊಳಿಸಿದ ಮೇಲೆ, ಸುಪ್ರೀಂಕೋರ್ಟಿಗೆ ಹೋದರೂ ಕೂಡ ಸುಪ್ರೀಂಕೋರ್ಟ್ ಒಂದು ತೀರ್ಪು ಕೊಟ್ಟಿದೆ. ಜಯಾಬಚ್ಚನ್ ಅನರ್ಹತೆ ವಿಚಾರದಲ್ಲಿ ರಿಜೆಕ್ಟ್ ಮಾಡಬೇಕು ಎಂಬ ಮನವಿಯನ್ನು ಸುಪ್ರೀಂಕೋರ್ಟ್ ರಿಜೆಕ್ಟ್ ಮಾಡಿದೆ. ಸುಪ್ರೀಂ ಕೋರ್ಟ್ ತನ್ನ ವ್ಯೂದಲ್ಲಿ non acceptance of salary or any acceptance of a token salary will not protect against disqualification. ಈ ಬಗ್ಗೆ ಸುಪ್ರೀಂಕೋರ್ಟ್‌ನಲ್ಲಿ ತೀರ್ಪು ಇದೆ. ಇವತ್ತು ಲೋಕಸಭೆಯಲ್ಲಿ ಚರ್ಚೆಮಾಡಿದ ಮೇಲೆ ಈ ದೇಶದ ರಾಷ್ಟ್ರಪತಿಗಳು, ಯಾರ ಬಗ್ಗೆ ನಮಗೆ ಗೌರವ ಇದೆ ಅವರೂ ಕೂಡ ಪ್ರಧಾನ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಇವೆಲ್ಲ ಕೂಡ ಇವತ್ತು ಲೀಗಲ್ ಸ್ಕ್ರೂಟಿನಿ ಆಗಿ ಒಂದು ನಿರ್ಧಾರಕ್ಕೆ ಬರುವ ಬಗ್ಗೆ ದೇಶದಲ್ಲಿ ಚಿಂತನೆ ನಡೆದಿದೆ. ಇವರು ನಮ್ಮ ಮಾನ್ಯ ಹೊರಟ್ಟಿಯವರು ಏಕಾ ಏಕಿಯಾಗಿ ಇವತ್ತು ಕಾನೂನು ಮಂತ್ರಿಗಳಾಗಿದ್ದಾರೆ. ಇವತ್ತು ಬಿಲ್ ತರಬೇಕು ಎನ್ನತಕ್ಕ ರೀತಿಯಲ್ಲಿ ಇವತ್ತು ಬಿಲ್ ತಂದಿದ್ದಾರೆ. ಏನೊಂದು ತರಾತುರಿಯಲ್ಲಿ ಈ ಬಿಲ್ಲನ್ನು ತಂದಿದ್ದಾರೆ, ಇದರಲ್ಲಿ ಸ್ಪಷ್ಟತೆ ಇಲ್ಲ. ಏನು ಸರಿಯಾದ ರೀತಿಯಲ್ಲಿ ರಾಷ್ಟ್ರ ಮಟ್ಟದಲ್ಲಿ ಚರ್ಚೆ ನಡೆಯುತ್ತಿದೆ, ಅದೂ ತಮ್ಮ ಗಮನಕ್ಕೆ ಬಂದಿಲ್ಲ. ಇವತ್ತು ರಾಷ್ಟ್ರಮಟ್ಟದಲ್ಲಿ ಬಿಜೆಪಿ ವಿರೋಧ ಮಾಡುತ್ತಿದೆ. ಇಲ್ಲಿನ ಬಿಜೆಪಿ ಅಧಿಕಾರಕ್ಕೋಸ್ಕರ ಇದಕ್ಕೆ ಸಪೋರ್ಟ್ ಮಾಡುತ್ತಾರೆ. ಇವತ್ತು ಏನಾಗಿದೆ? ಇವತ್ತು ಅಧಿಕಾರ ಬರುತ್ತದೆ, ಹೋಗುತ್ತದೆ. ಇವತ್ತು ಅದರ ಬಗ್ಗೆ ನಮಗೇನೂ ಚಿಂತೆ ಇಲ್ಲ. ಬೇಕಾದಷ್ಟು ನಿಗಮ, ಮಂಡಲಿಗಳನ್ನು ಮಾಡಲಿ.ಮಂತ್ರಿ ಮಂಡಲದ ವಿಸ್ತರಣೆ ಮಾಡಲಿ. ಯಾರ್ಯಾರು ಶಾಸಕರಿಗೆ ಏನೇನು ಆಶ್ವಾಸನೆ ಕೊಟ್ಟಿದ್ದಾರೆ ಈಡೇರಿಸಲಿ. ಮತ್ತು ವಿಶೇಷವಾಗಿ ಮೊನ್ನೆ ವಿಧಾನ ಪರಿಷತ್ತಿನ ಚುನಾವಣೆ ಆದ ಮೇಲೆ ನಮ್ಮ ನಾಲ್ಕನೇ ಅಭ್ಯರ್ಥಿ ಏನು ಆಯ್ಕೆ ಆಗಿದ್ದಾರೆ ತಮಗೆ ಕೂಡ ಬಹಳ ಒಂದು ತರಹದ ವಿಷಾದ ಆಗಿರಬಹುದು.ಅದಕ್ಕೆ ಕರ್ನಾಟಕ ರಾಜ್ಯದ ರಾಜಕೀಯದಲ್ಲಿ ಹೊಸ ತಿರುವು ಆಗಿದೆ. ಇವತ್ತು political turn has taken place. ಇದೆಲ್ಲಾ ನೋಡಿದ ಮೇಲೆ ತರಾತುರಿ. ಅವರ ಸಭೆ ಹೇಗಾಗುತ್ತದೆ? ಅದರಲ್ಲೂ ತರಾತುರಿ ಪ್ರತಿಯೊಂದು ವಿಚಾರದಲ್ಲೂ ತರಾತುರಿ.

ಈಗ ಬಿಎಂಐಸಿ ಬಗ್ಗೆ ಕೂಡ ತರುತ್ತಿದ್ದರು. ಏಕೋ ನಿಲ್ಲಿಸಿದ್ದಾರೆ. ಮುಂದೆ ಬರತಕ್ಕ 16, 18ನೇ ತಾರಿಖೋ ತರಬಹುದು. ಆದರೆ ಇವತ್ತು ಕರ್ನಾಟಕ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಇದೆ.ವಿರೋಧ ಪಕ್ಷದಲ್ಲಿ ನಾವೆಲ್ಲರೂ ಇದ್ದೇವೆ. ಇವತ್ತು ತಾವು ಸರ್ಕಾರದ ಪರವಾಗಿ ತರತಕ್ಕಂಥ ಬಿಲ್ಲಿನ ಬಗ್ಗೆ ನಮಗೆ ಕನ್‌ವಿನ್ಸ್ ಆಗತಕ್ಕ ರೀತಿಯಲ್ಲಿ ತರಬೇಕಾಗಿತ್ತು. ಇವತ್ತು ರಾಷ್ಟ್ರಪತಿಗಳು ನಗರದಲ್ಲಿದ್ದಾರೆ.ಇವತ್ತು ಎಲ್ಲಾ ಕಡೆಗೆ ಕೂಡ ನಮ್ಮ ದೇಶದ ಪ್ರಧಾನ ಮಂತ್ರಿಗಳು ಕಳವಳವನ್ನು ವ್ಯಕ್ತಪಡಿಸುತ್ತಿದ್ದಾರೆ. ಇವತ್ತು ಸಿಪಿಎಂ ಪಕ್ಷ ಕಾಂಗ್ರೆಸ್ ಕೂಡಿ ಏನು ಬಿಲ್ ಬಗ್ಗೆ ಅನುಮೋದನೆ ಮಾಡಿದ್ದೇವೆ ಇವತ್ತು ಇದರಲ್ಲಿ ಇರತಕ್ಕ ಸಾಧಕ ಬಾಧಕ ಏನು ಇದೆ ಅದರ ಬಗ್ಗೆ ನಾವು ವಿಚಾರ ಮಾಡಬೇಕಾಗುತ್ತದೆ. ರಾಜಕೀಯವಾಗಿ ಮಾಡತಕ್ಕ ಬಿಲ್ ಏನು ಇದೆ ಇದು ಸರಿಯಾದ ರೀತಿಯಲ್ಲಿ ಅಲ್ಲ ಎನ್ನತಕ್ಕ ಮಾತನ್ನು ನಾನು ಹೇಳುತ್ತೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ತಂದ ಔಚಿತ್ಯವನ್ನು ಸನ್ಮಾನ್ಯ ಕಾನೂನು ಸಚಿವರು ಹೇಳಬೇಕಾಗಿತ್ತು ಎಂದು ಹೇಳುತ್ತೇನೆ. ಏಕೆಂದರೆ ಏನೋ ಆಯಿತು. ಕೇಂದ್ರ ಸರ್ಕಾರದವರು ಕೆಲವೊಂದು ಎಕ್ಸಂಪ್‌ಷನ್ಸ್ ಕ್ಲಾಸಸ್ ಅನ್ನು ಸೇರಿಸಿರಲಿಲ್ಲ. ಹಾಗಾಗಿ ಕೆಲವರು ಅನರ್ಹರಾದರು ಎಂದು ಹೇಳಿ ಅಲ್ಲಿ ದಿಢೀರ್ ಎಂದು ಒಂದು ಶಾಸನ ತರಬೇಕಾಗಿತ್ತು. ಕೆಲವರನ್ನು ಉಳಿಸಿಕೊಳ್ಳಬೇಕಾಗಿತ್ತು ಎಂದು ಹೇಳಿ ಮಸೂದೆ ತಂದರು. ಕರ್ನಾಟಕದ ಮಟ್ಟಿಗೆ ಹೇಳಬೇಕು ಎಂದರೆ, ಅವರೇನು ಇವತ್ತು ಪ್ರಸ್ತಾಪ ಮಾಡಿದ್ದಾರೆ; ಸರಿ ಸುಮಾರು ಎಲ್ಲಾ ಮೊದಲೇ ಇಲ್ಲಿ ಸೇರಿ ಹೋಗಿ ಬಿಟ್ಟಿತ್ತು. ಅಮೆಂಡ್ ಆಗಿ ಹೋಗಿತ್ತು 1956ರಲ್ಲಿ ಆಗಿತ್ತು. ಯಾರೂ ಡಿಸ್‌ಕ್ವಾಲಫೈ ಆಗುವಂತಹ ಸ್ಥಿತಿ ರಾಜ್ಯದಲ್ಲಿ ಇರಲಿಲ್ಲ ಸ್ವಲ್ಪ ತಾವು ಸಮಾಧಾನ ವಾಗಿ ಕುಳಿತು, ಇಲಾಖೆಯವರನ್ನು ಕರೆಸಿ, ಮಾತನಾಡಿ ಇಂತಹ ವಿಶೇಷ ಸದನ ಕರೆಯುವಂತಹ ಸ್ಥಿತಿಗೆ ತಾವು ಬರಬೇಕಾಗುತ್ತದೆ. ಎರಡನೇಯದು ಇವತ್ತು ಇಡೀ ರಾಜ್ಯದಲ್ಲಿ ಏನಾಗಿ ಬಿಡುತ್ತದೆ, ಏನೋ ಎಂಎಲ್‌ಎಗಳು ಯಾರ್‍ಯಾರೋ "ನಾವು ಡಿಸ್‌ಕ್ವಾಲಿಫೈ ಆಗಿ ಹೋಗಿ ಬಿಡುತ್ತಿದ್ದೆವೆನೋ? ದಿಢೀರ್ ಎಂದು ಒಂದು ಬಿಲ್ ತೆಗೆದುಕೊಂಡು ಬಂದು ಬಿಟ್ಟು ಇವತ್ತು ನಮ್ಮ ಸ್ಥಾನ ಉಳಿಸಿಕೊಳ್ಳಲಿಕ್ಕೆ ನಾವೊಂದು ಪ್ರಯತ್ನ ಮಾಡುತ್ತಿದ್ದೇವೆ. ಅದಕ್ಕೋಸ್ಕರನೇ ಎರಡು ದಿವಸ ವಿಶೇಷ ಶಾಸನ ಸಭೆ ಕರೆಯುಬೇಕು" ಎನ್ನುವ ಸ್ಥಿತಿ ನಿರ್ಮಾಣ ಆಯಿತು. ಅಕಾಸ್ಮಾತ್ ಒಂದೋ, ಎರಡೋ, ಮೂರೋ ಕ್ಲಾಸನ್ನು ನೀವು ಸೇರಿಸಬೇಕಾಗಿದ್ದರೆ, ಇನ್ನು 10,12 ದಿವಸಕ್ಕೆ ನೀವು ಇನ್ನೊಂದು ಅಸೆಂಬ್ಲಿ

ಕರೆಯುವವರು ಇದ್ದೀರಿ ಅವತ್ತೇ ಅಮೆಂಡ್‌ಮೆಂಟ್ ಬಿಲ್ ಅನ್ನು ಮಾಡಬಹುದಿತ್ತು. ನಾನು ಅವರ ಮಾತನ್ನು ಒಪ್ಪುವುದಿಲ್ಲ. ಕೇಂದ್ರ ಸರ್ಕಾರದಲ್ಲಿ ಬಿಲ್ ಪಾಸ್ ಆಗುವುದು, ರಾಷ್ಟ್ರಪತಿಯವರ ಅಂಗೀಕಾರ ಆಗುವುದು, ಬಿಡುವುದಕ್ಕೂ ನಮಗೆ ಸಂಬಂಧ ಇಲ್ಲ. ರಾಜ್ಯದ ಮಟ್ಟಿಗೆ ನೀವು ಮಾಡಿ ಕೊಳ್ಳಬಹುದಾಗಿತ್ತು. ಈಗಾಗಲೇ ಮಾಡಿ ಬಿಟ್ಟಿದ್ದೀರಿ. ವ್ಯತ್ಯಾಸ ಏನಾಗಿತ್ತು? ಮಂಡಲ್ ಪಂಚಾಯತ್ ಎಂದು ಇದ್ದುದ್ದು ಇವತ್ತು ಗ್ರಾಮ ಪಂಚಾಯತ್ ಎಂದು ಆಗಬೇಕಾಗಿತ್ತು. ಜಿಲ್ಲಾ ಬೋರ್ಡ್ ಎಂದು ಇದ್ದುದ್ದು ಜಿಲ್ಲಾ ಪರಿಷತ್ ಆಗಬೇಕಾಗಿತ್ತು. ತಾಲ್ಲೂಕು ಪಂಚಾಯತ್ ಸಮಿತಿ ಎಂದು ಆಗಬೇಕಾಗಿತ್ತು. ಇದು ಯಾವುವೂ ನಮ್ಮನ್ನು ಡಿಸ್‌ಕ್ವಾಲಿಫೈಗೆ ಅಟ್ರ್ಯಾಕ್ಟ್ ಮಾಡುತ್ತದೆ ಎಂದು ನಾನು ತಿಳಿದುಕೊಂಡಿರಲಿಲ್ಲ ಎರಡನೆಯದು ತಾವು ಓದಬೇಕು. ಈಗ ಇಂಟ್ರುಡ್ಯೂಸ್ ಮಾಡಿರುವುದೂ ಕೂಡ ಈಗಾಗಲೇ ಇರುವ ಅನೇಕ ವಿಚಾರಗಳು. ನೀವು ಹೇಳಿ ಬಿಟ್ಟಿದ್ದೀರಿ ಎಲ್ಲಿ ಹೇಳಿ ಬಿಟ್ಟಿದ್ದೀರಿ? ಸ್ಟ್ಯಾಚುಟರಿ ಬಾಡೀಜ್ ಎನ್ನುವ ಕಡೆ ಹೇಳಿದ್ದೀರಿ. " Statutory body means any corporation, board, company. Society or any other body of one or more persons, whether incorporated or not., established,registered or formed by or under any central Law or the law of the state for the time being in force or existing powers and functions under any such law" ಅಂದರೆ ಕೋಅಪರೇಟಿವ್‌ದೂ ಸೇರುತ್ತದೆ. ನಿಮ್ಮ ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಕೆಳಗಡೆ ರಿಜಿಸ್ಟರ್ ಆಗುವುದೂ ಸೇರುತ್ತದೆ. Almost all, whatever is existing in Karnataka, all that is included in the Act. ನೀವು ಈಗಾಗಲೇ ಅಮೆಂಡ್ ಮಾಡಿರುವ ಆಕ್ಟ್‌ನಲ್ಲಿ ಅದೆಲ್ಲಾ ಸೇರಿ ಬಿಟ್ಟಿತು. ನೀವು ಈಗ ತಿರುಗಿ ಒಂದು addendum ಇಶ್ಯೂ ಮಾಡುತ್ತೀರಿ. ನಾವು ಸಹಕಾರಿ ಸಂಘಗಳನ್ನು ಇದರ ವ್ಯಾಪ್ತಿಯಲ್ಲಿ ಸೇರಿಸುತ್ತೇವೆ ಎಂದು ಹೇಳಿ ಇಶ್ಯೂ ಮಾಡುತ್ತೀರಿ. ಸಹಕಾರಿ ಸಂಘಕ್ಕೂ ಕೂಡ ನಿಮ್ಮ ಕೋ ಆಪರೇಟಿವ್ ಲಾ ಆಫ್ ದಿ ಸ್ಟೇಟ್ ಕೆಳಗಡೆ ರಿಜಿಸ್ಟರ್ ಆಗಿರುವ ಸಂಘಗಳೇ. ಅದಕ್ಕೇನೂ ವಿಶೇಷವಾದಂತಹ ಸ್ಥಾನಮಾನಗಳು ಇರಲಿಲ್ಲ. ಅದು ಆಗಲೇ ಆಗಿರುವುದರಿಂದ ತಾವು ಲಾ ಸಚಿವರು ಯಾವುದಕ್ಕೋಸ್ಕರ ಈ ಮಸೂದೆಯನ್ನು ತಂದಿರಿ? ಇದನ್ನು ತಾವು ಎಕ್ಸ್ ಪ್ಲೈನ್ ಮಾಡಿ. What was the emergency of summoning the session itself .

ಎಂಬುದನ್ನು ತಾವು ಹೇಳಬೇಕಾಗಿತ್ತು. ಈ ವಿಶೇಷ ಶಾಸನಸಭೆಯನ್ನು ಯಾವುದೋ ಒಂದು ನಿರ್ದಿಷ್ಟ ಕಾರ್ಯಕ್ಕಾಗಿ ನಾವು ಕರೆದಿದ್ದೇವೆ ಎಂದು ಹೇಳಿ ಎರಡು ದಿವಸ ನಮ್ಮನ್ನೆಲ್ಲಾ ಇಲ್ಲಿ ಕರೆದ ಮೇಲೆ ಏನು ಅಂತಹ ಎಮರ್ಜೆನ್ಸಿ ಇತ್ತು? ಆಗಲೇ ಬೇಕಾದಂತಹ ಯಾವ ಪರಿಸ್ಥಿತಿ ರಾಜ್ಯದಲ್ಲಿ ಉದ್ಭವ ಆಗಿತ್ತು? ಇದು ಆಗದೇ ಮುಂದಕ್ಕೆ ಹೋಗಿದ್ದರೆ,ನಮಗ್ಯಾರಿಗಾದರೂ ಗಂಡಾಂತರ ಕಾದಿತ್ತಾ? ಅವರ ಮೆಂಬರ್‌ಶೀಫ್ ಹೋಗುತ್ತಿತ್ತಾ ಎಂಬುದರ ಬಗ್ಗೆ ಒಂದು ಕಡೆ ವಿಚಾರ ಆಗಬೇಕು ನಾನು ನಮ್ರತೆಯಿಂದ ತಮಗೆ ಕೇಳಿಕೊಳ್ಳುತ್ತೇನೆ. ತಾವಾದರೂ ಇಂತಹವನ್ನು ರಿವ್ಯೂ ಮಾಡಬೇಕು ಸಾರ್, ಶಾಸನ ಸಭೆ ಕರೆಯುವುದಕ್ಕೆ ಮೊದಲೇ what is the emergency ಎಂದು ತಾವು ಕೇಳಬಹುದಾಗಿತ್ತು. ಇದರಿಂದ ಶಾಸನಸಭೆಗಳ ಔಚಿತ್ಯವೇ ಹೋಗುತ್ತದೆ ಸಾರ್ ತಾವು ಅಧ್ಯಕ್ಷರು ನಗಬಾರದು.

ಅಧ್ಯಕ್ಷರು : ನಾವು ಹೇಗೆ ಕೇಳಲು ಆಗುತ್ತದೆ?

ಶ್ರೀ ಜೆ.ಸಿ. ಮಾಧುಸ್ವಾಮಿ : ನೋ ನೋ, ಸ್ಪೀಕರ್ ಸರ್ಕಾರ ಹೇಳಿದ ಹಾಗೆ ಕೇಳಬೇಕು ಎಂದು ಭಾವಿಸಿಕೊಂಡು ನಾನು ಈ ಮಾತನ್ನು ಆಡುತ್ತಿಲ್ಲ. ತಮ್ಮನ್ನು ಕನ್ಸಲ್ಟ್ ಮಾಡಿ ಶಾಸನ ಸಭೆ ಅಧಿವೇಶನ ನಿಗಧಿ ಮಾಡಬೇಕು. You are not bound by Government order. ತಾವು ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳಬೇಕು. ತಾವು ದೊಡ್ಡವರು, ಒಳ್ಳೆಯವರು ಎನ್ನುವ ಒಂದು ಕಾರಣಕ್ಕೆ ಇದು ನಡೆಯುವುದು ಬಿಟ್ಟರೆ ತಮ್ಮನ್ನು ಕನ್ಸ್‌ಲ್ಟ್ ಮಾಡಿ ಶಾಸನ ಸಭೆಯನ್ನು ಕರೆಯಬೇಕಾಗಿತ್ತು. ನಾನು ನಿಮಗೆ ಕೇಳುವುದು ಏನಾದರೂ ವಿಚಾರ ಇತ್ತಾ ವಿಶೇಷವಾಗಿ ಎರಡು ದಿವಸ ಈ ಶಾಸನಸಭೆ ಕರೆಯಲಿಕ್ಕೆ ಎಮರ್ಜೆನ್ಸಿ ಅಥವಾ ತುರ್ತು ಏನು ವಿಚಾರ ಇತ್ತು ಎಂದು ನಮಗೆ ನೀವು ಹೇಳಬೇಕಲ್ಲಾ. ಸದಸ್ಯರುಗಳಿಗೆ ಹೇಳಬೇಕಲ್ಲಾ "ಹೀಗೆ ನಾವು ವಿಶೇಷವಾದ ಒಂದು ಸಭೆ ಕರೆದಿದ್ದೇವೆ. ಇಂತಹ ತುರ್ತು ಪರಿಸ್ಥಿತಿ ಇತ್ತು" ಎಂದು ಹೇಳಬೇಕಾಗಿತ್ತು. ಹಾಗಾಗಿ ಮಾನ್ಯ ಕಾನೂನು ಸಚಿವರು ನೋಡಬೇಕು ತಾವೇನು ಹೇಳುವುದಕ್ಕೆ ಹೊರಟಿದ್ದೀರಿ, ಏನು ಹೇಳಿದ್ದೀರಿ? ಕರ್ನಾಟಕದ ಮಟ್ಟಿಗೆ ಅದೆಲ್ಲಾ ಸೇರಿ ಹೋಗಿ ಬಿಟ್ಟಿದೆ. ದುರಂತ ಏನಾಗಿದೆ ನಮ್ಮ ರಾಜ್ಯದ ಬಿಲ್‌ನಲ್ಲಿ ಸಭಾಪತಿಗಳು, ಸಭಾಧ್ಯಕ್ಷರು, ಉಪಾಧ್ಯಕ್ಷರು, ಉಪಸಭಾಧ್ಯಕ್ಷರು, ರಾಜ್ಯ ಮಂತ್ರಿಗಳು, ಉಪ ಮಂತ್ರಿಗಳು. ವಿರೋಧ ಪಕ್ಷದ ನಾಯಕರು ಅಥವಾ ವಿಧಾನ ಪರಿಷತ್ತಿನ ಸರ್ಕಾರದ ಮುಖ್ಯ ಸಚೇತಕರು ಹುದ್ದೆಗಳನ್ನು ಎಂದು ಇದೆ.

ಇವರು ಯಾರೂ ಎಂಎಲ್‌ಎ ಆಗದೇ ಆ ಸ್ಥಾನಕ್ಕೆ ಬರುವುದಕ್ಕೆ ಆಗುವುದಿಲ್ಲ ಸಾರ್. ಈಗ ನೀವು ಅಧ್ಯಕ್ಷರಾಗಿ ಕುಳಿತಿದ್ದೀರಿ. ಅದು ಆಫೀಸ ಆಫ್ ಪ್ರಾಫಿಟ್ ಎಂದು ಹೇಳಿ ನಿಮ್ಮನ್ನು ಎಂಎಲ್‌ಎ ಗಿರಿಯಿಂದ ತೆಗೆದರೆ ಐಎಎಸ್ ಆಫೀಸರ್ ಅವರನ್ನು ತಂದು ಕೂರಿಸುವುದಕ್ಕೆ ಆಗುತ್ತದಾ? ಯಾರನ್ನು ಕೂಡಿಸಬೇಕು ಎಂದು ಹೇಳಿ. If it is treated as office of profit.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಮಾಧುಸ್ವಾಮಿಯವರೇ, ಈಗ ನಿಮ್ಮ ಕುರ್ಚಿಗೆ ಗಂಡಾಂತರ ಬಂದಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಅವನು ಯಾವನೋ ಒಬ್ಬ ಮಹಾನುಭಾವ. ಅವನನ್ನು ಕರೆಸಿ ಸ್ವಾಮಿ ಒಂದು ಸಲ. ನಾವೆಲ್ಲಾ ನಮಸ್ಕಾರ ಮಾಡಿ ಬಿಡುತ್ತೇವೆ. ಅವತಾರ ಪುರುಷ ಅವನು.

SRI J.C. MADHUSWAMY : Unless you are an MLA. You are not empowered to occupy the seat ಎಂದಾಗ how can it be called as office of profit?

SRI K.R. RAMESH KUMAR : How he consumed this idea,God only knows.

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾರು ಈ ಐಡಿಯಾ ಕೊಟ್ಟರು ಹೇಳಿ. ನೀವು ಅಧ್ಯಕ್ಷರು ಹೇಳಿ. ಈಗ ನಿಮಗೆ ಗಂಡಾಂತರ ಬಂದಿದೆ. ಈಗ ನಾವೇನಾದರೂ ಬಿಲ್ ಪಾಸ್ ಮಾಡುವುದಿಲ್ಲ ಎಂದರೆ ತಾವು ಎಂಎಲ್‌ಎ ಗಿರಿ ಕಳೆದುಕೊಳ್ಳಬೇಕು. ಎಂಎಲ್‌ಎ ಗಿರಿ ಹೋದ ಮೇಲೆ ತಾವು ಅಲ್ಲಿ ಕುಳಿತುಕೊಳ್ಳುವ ಅರ್ಹತೆಯೂ ನಿಮಗೆ ಇಲ್ಲ. ಇದರಲ್ಲಿ ಯಾವುದು ಉಳಿದುಕೊಳ್ಳಬೇಕು ಎಂದು ನೀವೇ ಹೇಳಿ ಬಿಡಿ.

ಶ್ರೀ ಎಂ.ಪಿ. ಪ್ರಕಾಶ್ : ನಮಗೂ ಗಂಡಾಂತರ ಬಂದಿಲ್ಲ. ಮಂತ್ರಿಗಳಿಗೂ ಗಂಡಾಂತರ ಬಂದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೂ ಗಂಡಾಂತರ ಬಂದಿಲ್ಲ. ಇಲ್ಲಿ ಪ್ರಶ್ನೆ ಬಂದಿರತಕ್ಕದ್ದು ಇಷ್ಟೇ. ಅದರ ಅವಶ್ಯಕತೆ ಏನು ಇತ್ತು? ಅರ್ಜೆಂಟ್ ಏನು ಇತ್ತು ಎಂದು ತಾವು ಕೇಳುತ್ತಿದ್ದೀರಿ. ಅದಕ್ಕೆ Statement of objects ನಲ್ಲಿ ಹೇಳಿದ್ದಾರೆ. ನಮಗೆ ಬಹಳ ಕ್ಲಿಯರ್ ಆಗಿರತಕ್ಕದ್ದು, ಅರ್ಜೆನ್ಸಿ ಏನು ಇದೆ ಎಂದು ಹೇಳುತ್ತಾರೆ. The Karnataka Legislature (Prevention of Disqualification) Avt, 1956 (Karnataka Act No. 4 of 1957) ಅದರ

ಜೊತೆಗೆ ತಾವು ಉಳಿದಿದ್ದು ತಾವು ಹೇಳಿ. ನಾನು ಮಾತನಾಡುವಂತಹ ಸಂದರ್ಭದಲ್ಲಿ ಹೇಳುತ್ತೇನೆ.

SRI K.R. RAMESH KUMAR : Office of the Speaker, which is treated so high...

Interruptions

SRI G.V. SRI RAMA REDDY : What is the point you are going to explain?

ಶ್ರೀ ಎಂ.ಪಿ. ಪ್ರಕಾಶ್ : ಗವರ್ನಮೆಂಟ್ ಆಫ್ ಇಂಡಿಯಾ ಆಕ್ಟ್ 1956ನಲ್ಲಿ ಅದು ಇದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಮಗೆ ಗೊತ್ತಿದೆ. Even the salaries and perks of the office of Speaker- they are treated as charge.we don't debate on the floor of the House.

SRI M.P. PRAKASH : Government of India Act ನಲ್ಲಿ ಕೂಡ Speaker. Deputy Speaker, Chairman of the Rajyasabha, Vice Chairman, the ministers and everybody has been Categorised.

4.30 P.M.

ಶ್ರೀ ಜೆ.ಸಿ. ಮಾಧುಸ್ವಾಮಿ : ಅವರಿಗೆ ಬುದ್ಧಿ ಇಲ್ಲವೆಂದರೆ ನಮಗೆ ಇಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ : ಹಾಗೆನ್ನುವುದಾದರೆ, ನಾವು ಶಕ್ದರ್ ಅಂಡ್ ಕೌಲ್ ಪುಸ್ತಕವನ್ನು ಇಟ್ಟುಕೊಳ್ಳುವುದೇ ಬೇಕಾಗಿಲ್ಲ.

ಶ್ರೀ. ಜೆ.ಸಿ. ಮಾಧುಸ್ವಾಮಿ : ನೀವು ಹಾಗೆ ವಾದ ಮಾಡಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಇದು ಹೇಗೆ ಸರ್. ಕಾಮನ್‌ಸೆನ್ಸ್ ಹೇಳಿ ಸರ್. Can anybody else become the Speaker of the House? There is only one Assembly, one Speaker. Only the Member of this House can become the Speaker.

Sri M.P. PRAKASH : After all, law is a common sense. Therefore, we have exercised our common sense in order to prevent that. There is nothing that prevents the law to elaborate it.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಪ್ರಕಾಶ್‌ರವರುCStatement of Objects ಓದುವುದಕ್ಕೆ ಹೋದರು. ಆದರೆ ಅದರಲ್ಲೇನಿದೆ.? What is the point you have to say?

SRI J.C. MADHUSWAMY : What is there in objects? objects ಓದದೇ ಬಿಲ್ ಮೇಲೆ ನಾವು ಮಾತನಾಡುತ್ತೇವೆಯೇ?

SRI G.V. SRIRAMA REDDY : What is the point you have to explain to the house in the Objects 9 ಈ ಬಿಲ್‌ನಲ್ಲಿ Speaker and Deputy Speaker ಎಂದು mention ಮಾಡಿದ್ದಾರೆ. ಈಗ ಮಾಧುಸ್ವಾಮಿಯವರು ಹೇಳಿದರು. Without becoming an MLA, he cannot sit there, ಮತ್ತೆ ಅದಕ್ಕೆ special mention ಯಾಕೆ ಬೇಕಾಗಿತ್ತು? and no non-MLA can become the Speaker of the House.

ಶ್ರೀ ಬಿ.ಎಸ್. ಹೊರಟ್ಟಿ : ಲೋಕಸಭೆಯಲ್ಲಿ ಸ್ಪೀಕರ್‌ದ್ದು ಹೇಗೆ ಬಂತು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಶಾಂತಿನಿಕೇತನ ಟ್ರಸ್ಟ್‌ಗೆ ಅಧ್ಯಕ್ಷರಾಗಿದ್ದಾರೆ.

ಶ್ರೀ ಜೆ.ವಿ. ಮಾಧುಸ್ವಾಮಿ : ಸಾರಿ ಸಾರಿ ಈ ರೀತಿ intervene ಆಗಬಾರದು.

SRI K.R. RAMESH KUMAR : Office of the Speaker holding some other office. It is not the office of Speaker. It is the Speaker holding some other office.

SRI N. DHARMSINGH : You are a Law Minister. ನೀವು ಹಾಗೆ ಹೇಳಬಾರದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅವರು ಶಾಂತಿ ನಿಕೇತನ ಟ್ರಸ್ಟ್‌ಗೆ ಚೇರ್ಮನ್ ಆಗಿದ್ದಾರೆ ಎನ್ನುವುಕ್ಕೋಸ್ಕರ ಅವರು dis-qualify ಆಗಿದ್ದಾರೆಯೇ ಹೊರತು disqualification ಅನ್ನು ಇದಕ್ಕೋಸ್ಕರ ತಂದಿಲ್ಲ. He is holding the Chairmanship of Shanti Nikethan Trust.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, Statement of Objects ಓದದೇ ಇಲ್ಲಿ ಬಂದು ನಾವು ಮಾತನಾಡುತ್ತೀರೆಂದು ಏನು ಹೇಳಿದಿರಿ, ಕಾಮನ್‌ಸೆನ್ಸ್ ಇರುವ ಪ್ರತಿಯೊಬ್ಬರಿಗೂ ಗೊತ್ತಿದೆ. ಅವರು ಪಶ್ಚಿಮ ಬಂಗಾಲದಲ್ಲಿರುವ ಶಾಂತಿ ನಿಕೇತನ ಟ್ರಸ್ಟ್‌ಗೆ ಅಧ್ಯಕ್ಷರಾಗಿದ್ದರೆನ್ನುವ ಕಾರಣಕ್ಕಾಗಿ, he had attracted the dis-qualification lause.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನೀವು ಮತ್ತೆ ಅದನ್ನು mention ಮಾಡುವ ಅವಶ್ಯಕತೆ ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ : ಹಾಗಾದರೆ, ಅಮೆಂಡ್ ಮೆಂಟ್ ಮೂವ್ ಮಾಡಿ, ಇಲ್ಲವೇ ವಿತ್ ಡ್ರಾ ಮಾಡಿ.

ಶ್ರೀ ಕೆ. ಶ್ರೀನಿವಾಸಗೌಡ : ಅಧ್ಯಕ್ಷರೆ, ಇವೊತ್ತು ಸ್ಪೀಕರ್ ಎಂದು ಅದನ್ನು ಮಾಡಿರುವುದು ನನ್ನ ಪ್ರಕಾರ ಸರಿ ಇದೆ. ಕಾರಣ, ಇವೊತ್ತು ನೀವಿದ್ದೀರಿ, ನಾಳೆ ನಾನು ಅಧ್ಯಕ್ಷನಾಗಿ ಅಲ್ಲಿಗೆ ಹೋಗಿ ಕುಳಿತುಕೊಳ್ಳುತ್ತೇನೆ. ನಾನು ಎಂಎಲ್ಎ ಆಗಿ ಬೇರೆಯದರಲ್ಲಿ office of profit ನಲ್ಲಿದ್ದೇನೆ. ನನ್ನನ್ನು ಆಗ ಸ್ಪೀಕರ್ ಎಂದು ಮಾಡಿದಾಗ ಮಾತ್ರ ನನಗೆ exemption ಸಿಗುತ್ತದೆ. ಇವೊತ್ತು ನಮ್ಮ present Speakerಗೆ ಬರದೇ ಹೋಗಬಹುದು ಆದರೆ ನಾಳೆ ಸ್ಪೀಕರ್ ಆಗುತ್ತೇನೆ. ನನಗೆ office of profit ಇದೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇಲಿ ಸ್ಪೆಸಿಫಿಕ್ ಆಗಿ ಸ್ಪೀಕರ್ ಪೋಸ್ಟ್ ಬಗ್ಗೆ ಹೇಳುತ್ತಿದ್ದಾರೆ. ಬೇರೆಯದಕ್ಕೆ ಇಲ್ಲಿ ಕುಳಿತಿರುವುದಕ್ಕೆ ಹೇಳಿಲ್ಲ. ನೀವು ಅದನ್ನು ಅರ್ಥಮಾಡಿಕೊಂಡಿಲ್ಲ.

ಶ್ರೀ ಬಿ.ಎಸ್. ಹೊರಟ್ಟಿ : ಸ್ಪೀಕರ್ ಆದಂತಹವರು ಬೇರೆ ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದರೆ, ಎಂದು ಹೇಳಿದ್ದೇನೆ. ನೀವು ಬಹಳಷ್ಟು ವಾದ ಮಾಡಿದರೆ ನಾನೇನು ಹೇಳಲಿ? ಸ್ಪೀಕರ್ ಆದಂತಹವರು ಯಾವುದೇ ಸಂಸ್ಥೆಯಲ್ಲಿ ಅಧ್ಯಕ್ಷರಾಗಿದ್ದಾಗ.....

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಧ್ಯಕ್ಷ ಸ್ಥಾನ ಲಾಭದಾಯಕ ಸ್ಥಾನವೆಂಬ ಅಭಿಪ್ರಾಯದಲ್ಲಿ ತಾವು ಹೇಳಿದಿರಿ. ಅದು ಲಾಭದಾಯಕ ಅಲ್ಲವೆಂಬ ವಾದ ನಮ್ಮದು. ಅಧ್ಯಕ್ಷರಾಗಿರುವವರು ಮತ್ತೆ ಯಾವುದಾದರೂ ಲಾಭದಾಯಕ ಸ್ಥಾನ ಹೊಂದುವಂತಾದ್ದು ಆಕ್ಷೇಪ ಎನ್ನುವ ವಿಚಾರ ಬೇರೆ ಅಧ್ಯಕ್ಷ ಸ್ಥಾನ ಹೊಂದಿರುವುದು ಲಾಭದಾಯಕ ಪರಿಗಣಿಸುವುದು ತಪ್ಪು ಇದು ನಮ್ಮ ವಾದ, ಅಭಿಪ್ರಾಯ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲಿರುವ ಸ್ಪೀಕರ್, ವಿರೋಧ ಪಕ್ಷದ ನಾಯಕರು, ಸಚೇತಕರು, ಈ ಶಾಸನಸಭೆಯ ಸದಸ್ಯರಿಗೆ ಅನರ್ಹತೆ ಬಂದರೆ ಆ ಸ್ಥಾನಕ್ಕೆ ಬರಬೇಕು. ಆದರೆ, ಸ್ಪೀಕರ್ ಸ್ಥಾನಕ್ಕೆ ಬರುವುದಿಲ್ಲ. ಸ್ವಲ್ಪ ಅರ್ಥಮಾಡಿಕೊಳ್ಳಿ, ನೀವು ಡಿಸ್-ಕ್ವಾಲಿಫಿಕೇಶನ್ ಮಾಡುವುದು from the post of MLA ಎಂ.ಎಲ್.ಎ.ಗಿರಿಗೆ ಡಿಸ್-ಕ್ವಾಲಿಫಿಕೇಶನ್ ಬರಬೇಕು. ಎಂಎಲ್ಎ ಆಗದೇ ಈ ಸ್ಥಾನಕ್ಕೆ ಹೋಗುವುದಕ್ಕಾಗುವುದಿಲ್ಲವೆಂದು ನಾವು ಹೇಳುತ್ತಿರುವುದು.

If you bring them into this, ಅವರನ್ನು ಸ್ಪೀಕರ್ ಸ್ಥಾನ ಒಂದು office of profit ಎಂದರೆ. ಹಾಗಾದರೆ, ಸ್ಪೀಕರ್ ಒಬ್ಬರನ್ನು ಮಾಡುವುದು, ಬೆಳಿಗ್ಗೆ ಡಿಸ್-ಕ್ವಾಲಿಫೈ ಮಾಡುವುದು.

SRI M.P. PRAKASH : Can anybody other than the Member of the Assembly become Speaker? He cannot be. Therefore in the same sense,it is very specific. Suppose if you say, the Speaker post does not attract the disqualification, the Minister post and the Chief Secretary or Chief-Whip or the Minister, it will not attract the disqualification. Suppose, if you give the explanation it is not going to be bad in law.

ಶ್ರೀ ಜೆ.ಸಿ. ಮಾಧುಸ್ವಾಮಿ : ತಾವು ಯೀಲ್ಡ್ ಆಗಿ. ನಾನು ವಿಪ್ ಸೇರಿಸಿ ಹೇಳಿದೆ. ಡೆಪ್ಯುಟಿ ಮಿನಿಸ್ಟರ್ ಸೇರಿಸಿ ಹೇಳಲಿಲ್ಲ ನಿಮ್ಮ ಪೊಲಿಟಿಕಲ್ ಸೆಕ್ರೆಟರಿ ಮತ್ತು ಪಾರ್ಲಿಮೆಂಟರಿ ಸೆಕ್ರೆಟರಿ ಅವರುಗಳನ್ನು ಸೇರಿಸಿ ಹೇಳಲಿಲ್ಲ. Anybody can be madeMinister for a period of six months. Let me complete my argument.

SRI M.P. PRAKASH : I am very conscious to say it is Chief-Whip.

ಶ್ರೀ ಜೆ.ಸಿ. ಮಾಧುಸ್ವಾಮಿ : ನಾನು ಹೇಳಿದ್ದಲ್ಲ. ನಾನು ಹೇಳಿದ್ದನ್ನು ನೀವು ಹೇಳಿ ವಾದ ಮಾಡಿದರೆ ಹೇಗೆ? Whip, Opposition Leader, Deputy Speaker, Speaker ಆಗುವುದಕ್ಕಾಗುವುದಿಲ್ಲ. ನಮ್ಮ ಪೊಲಿಟಿಕಲ್ ಸೆಕ್ರೆಟರಿ ಅಥವಾ ಪಾರ್ಲಿಮೆಂಟರಿ ಸೆಕ್ರೆಟರಿ, ಒಬ್ಬ ಎಂಎಲ್ಎ ಅಲ್ಲದಿರುವವರು ಆಗಬಹುದು. ನಿಮ್ಮ ಡೆಪ್ಯೂಟಿ ಮಿನಿಸ್ಟರ್, ಒಬ್ಬ ಎಂಎಲ್ಎ ಅಲ್ಲದಿರುವವರೂ ಆಗಬಹುದು. ನಿಮ್ಮ ಮಿನಿಸ್ಟರ್ ಒಬ್ಬ ಎಂಎಲ್ಎ ಅಲ್ಲದಿರುವವರೂ ಆಗಬಹುದು Try to understand things. Any individual for six months can become a Minister ಎಂಎಲ್ಎ ಆಗಿ ಆರು ತಿಂಗಳಾಗಿರಬೇಕೆಂಬುದು ನಿಯಮ. ಆತ House Member ಆಗಬೇಕಾಗಿರುವುದು ಆರು ತಿಂಗಳೊಳಗೆ ಎಲೆಕ್ಟ್ ಆಗಿ ಸಿ.ಎಂ. ಆಗಬೇಕೆಂದು ಕಾನ್‌ಸ್ಟಿಟ್ಯೂಷನ್ ಹೇಳಿಲ್ಲ. But, these posts ನೀವೇನು office of profit ಎಂದು ಇಟ್ಟಿದ್ದೀರಿ, ಈ ಪೋಸ್ಟ್ ಎಂಎಲ್ಎ ಆದ ನಂತರವೇ ಅವರಿಗೆ ಸಿಗುವುದು. They cannot be dis-

qualified under the Act on the ground that he occupies an office, which is office of profit.

SRI M.P. PRAKASH : I will tell you. If a House is dissolved, he continues to be the Speaker also. Without being the Member of the dissolved House, he continues to be the Speaker. That is why he has to.

SRI J.C. MADHUSWAMY : The Whole Bill Pertains to the elected representatives of both the Houses. ಪಾರ್ಲಿಮೆಂಟ್ ಮತ್ತು ಅಸೆಂಬ್ಲಿ ಯಲ್ಲಿರುವ ಎಂಎಲ್‌ಎಗಳಿಗೆ ಸಂಬಂಧಿಸಿದಂತೆ ಮಾತ್ರ ಮಾಡಿರುವ ಬಿಲ್ ಇದಾಗಿದೆ Out side Assembly ಮಾಡಿರುವ ಬಿಲ್ ಇದಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈಗ House dissolve ಆಗುತ್ತದೆ. Dissolve ಆದಾಗಲೂ ಸ್ಪೀಕರ್ ಕಂಟಿನ್ಯೂ ಆಗಿರುತ್ತಾರೆ. But he ceases to become the MLA. Still he continues in the post.

SRI J.C. MADHUSWAMY : No. He will not attract disqualification. Dis-qualification of the Members of the House....

SRI D.R. PATIL : Dis-qualification is only for Membership.

SRI J.C. MADHU SWAMY : Members of the House. ಈ ಬಿಲ್ ಇರುವುದು ಅವರಿಗೆ ನೀವು ಹೀಗೆ ವಿತಂಡ ವಾದ ಶುರು ಮಾಡಿದರೆ ನಾವು ಎಲ್ಲಿಗೆ ಹೋಗುವುದು? Officer of profit ನಲ್ಲಿ ಎಂಎಲ್‌ಎ, ಎಂಎಲ್‌ಸಿ, ಹೌಸ್ ಸದಸ್ಯರಿಗೆ ಡಿಸ್-ಕ್ವಾಲಿಫೈ ಮಾಡಬೇಕೆಂಬ ಬಿಲ್ ಬಗ್ಗೆ ನಾವು ಚರ್ಚೆ ಮಾಡುತ್ತಿರುವುದು.

SRI M.P. PRAKASH : I may kindly draw your attention to Article 178. ನಾವೇ ಬೃಹಸ್ಪತಿಗಳೆಂದು ಭಾವಿಸಿಲ್ಲ. ನಾವು ನಿಮ್ಮ ಅನುಭವಗಳಿಂದಲೂ ಕಲಿಯಬೇಕಾಗುತ್ತದೆ. ಅಕಾಡೆಮಿಕ್ ಆಗಿ ಡಿಸ್‌ಕಸ್ ಮಾಡಬೇಕಾಗುತ್ತದೆ. Every Legislative Assembly of a State shall as soon as may be chosen two Members of the Assembly to be respectively Speaker, the Deputy Speaker thereon and so often the office of the Speaker or the Deputy Speaker becomes vacant, the Assembly shall chose another Member as the Speaker and the Deputy Speaker as the case may be. The vacation and the resignation of a removal from the

office of the Speaker or the Deputy Speaker. A Member holding his office of the Speaker or Deputy Speaker or the Assembly shall vacate....

ಶ್ರೀ ಜೆ.ಸಿ. ಮಾಧುಸ್ವಾಮಿ : ದಯವಿಟ್ಟು ಅಸೆಂಬ್ಲಿಯನ್ನು ದಾರಿ ತಪ್ಪಿಸಬೇಡಿ ಈ ತರಹ ನೀವು ದಾರಿ ತಪ್ಪಿಸುವ ಅಗತ್ಯವಿಲ್ಲ. You cannot divert the whole thing. ನೀವು ಬುದ್ಧಿವಂತರೆಂದು ನಮಗೆ ಗೊತ್ತು ನಾವು ಚರ್ಚೆ ಮಾಡುತ್ತಿರುವುದು. office of profit ನಾವು ಶಾಸನದ ಪ್ರಕಾರ ಹೇಗೆ ಎಂಎಲ್‌ಎ ಆಗಿ ಬರುತ್ತೇವೆಂಬುದನ್ನು ಬಿಟ್ಟರೆ, ಸ್ಪೀಕರ್ ಹೇಗಾಗುತ್ತಾರೆ. ಡೆಪ್ಯೂಟಿ ಸ್ಪೀಕರ್ ಹೇಗಾಗುತ್ತಾರೆ? ಯಾರು ವೆಕೇಟ್ ಆಗುತ್ತಾರೆ, ಯಾರು ಅಲ್ಲಿ ಬರಬೇಕು. ಅದರ ಬಗ್ಗೆ ಚರ್ಚೆ ಇಲ್ಲಿ ಇಲ್ಲ. This Bill pertains only to an elected Member who is MLA, MLC or MP, ಆತ ಇನ್ನೊಂದು ಯಾವುದಾದರೂ office of profit ನಲ್ಲಿ post hold ಮಾಡುತ್ತಿದ್ದಾನೆಂದರೆ, ಆತನಿಗಿರುವ ಅರ್ಹತೆ ಮತ್ತು ಅನರ್ಹತೆ ಬಗ್ಗೆ ಮಾತ್ರ ನಾವು ಚರ್ಚೆ ಮಾಡುತ್ತಿದ್ದೇವೆ. ನಾವು ನಿಮಗೆ ಇಂಪ್ರೆಸ್ ಮಾಡಿದ್ದು, ಈ ಪೋಸ್ಟ್‌ಗಳ ಬಗ್ಗೆ ತಾವು ಇಲ್ಲಿ ಏನು ಹೇಳಿದ್ದೀರಿ, ಆತ ಶಾಸನಸಭೆಯ ಸದಸ್ಯನಾಗದೆ. occupy ಮಾಡುವುದಕ್ಕೆ ಆಗದಿರು ವಂತಹ ಸ್ಥಾನ ನಾನು ಅದಕ್ಕೇ ಬಾಯ್ಬಿಟ್ಟು ಹೇಳಿದೆ. I did not take the word Deputy Minister Deputy Minister may be a non-MLA. He may be a non-MLC. ಆತನಿಗೆ ನೀವು ಡಿಸ್-ಕ್ವಾಲಿಫಿಕೇಶನ್ ತರಬೇಕು. Office of profit ಇದೆ, ಅಲ್ಲಿ ಡೆಪ್ಯೋಟಿ ಮಿನಿಸ್ಟರ್ ಆಗಬೇಡವೆಂದು ಹೇಳಬಹುದಿತ್ತು. ಈಗ ಅಮೆಂಡ್‌ಮೆಂಟ್ ಮಾಡು ತ್ತಿದ್ದೀರಿ. You are right. ಆದರೆ, ಈ ಪೋಸ್ಟ್ ಗಳನ್ನು ತಾವು ಮತ್ತೆ ಪ್ರಸ್ತಾಪ ಮಾಡಬಾರದಾಗಿತ್ತು ಎಂಬುದೇ ನನ್ನ ಅಭಿಪ್ರಾಯ.

ಎರಡನೆಯದಾಗಿCo-operative Institutions ಎಂದು ಈಗ ಒಂದು addendum issue ಮಾಡಿದ್ದೀರಿ. Statutory bodies ಕೆಳಗೆ ಹಿಂದಿನ Assembly ಅವೆಲ್ಲವನ್ನೂ ಕೂಡ ಸೇರಿಸಿ ಬಿಟ್ಟಿದೆ. ಮತ್ತೆ ಏಕೆ amendment ತರುತ್ತೀರಿ? ಸ್ವಲ್ಪ ನೀವು ಇದನ್ನು ನೋಡಿಕೊಳ್ಳಬೇಕಾಗಿತ್ತು. ಕರ್ನಾಟಕ ರಾಜ್ಯದಲ್ಲಿ ಮೊದಲೇ ಅದರ ಬಗ್ಗೆ amendment ಎಲ್ಲಾ ಆಗಿ ಹೋಗಿ ಬಿಟ್ಟಿದೆ. ಕೇಂದ್ರದಲ್ಲಿ ಅವರು Parliment ನಲ್ಲಿ enactment ಮಾಡಲಿಲ್ಲ, amendment ತರಲಿಲ್ಲ ಎಂದು disqualificationಗೆ amount ಆದರು ಎನ್ನುವಂತಹ ಕಾರಣಕ್ಕೆ ಸಾರಾಸಗಟಾಗಿ ಇಲ್ಲೂ ನೀವು ತರುವುದು ಸರಿಯಲ್ಲ ಈ ಕಾನೂನನ್ನು

ನೀವು ನೋಡಿದ್ದೀರಾ? ನೋಡಿರಲಿಲ್ಲವೇ? It is here.ಆAct ನಮ್ಮ ಹತ್ತಿರವೆ ಇದೆ. ಅವರು Statutory body ಎಂದು Define ಮಾಡಬೇಕಾದರೆ clear ಆಗಿ ಹೇಳಿದ್ದಾರೆ. ಮೂರನೆಯದಾಗಿ, ತಾವು ತಂದು ಬಿಟ್ಟಿದ್ದೀರಿ, ಸನ್ಮಾನ್ಯ Law Minister ರವರೇ, compensatory allowance ಎನ್ನುವಂತಹ ಪದವನ್ನು ತಾವು ಬಳಸಿದ್ದೀರಿ. ಇಲ್ಲೇನು ಮಾಡಿದ್ದೀರಿ? Travelling Allowance, Daily allowance, Sitting fee, Conveyance Allowance or House rent allowance ಎಂದು ಹೇಳಿದ್ದೀರಿ. ನಾನು ಮತ್ತು ಮಾನ್ಯ ಶ್ರೀನಿವಾಸಗೌಡರವರು ತಮಗೆ ಹೇಳುವುದೇನೆಂದರೆ, Co-operative Institutions ಅನ್ನು ಇದಕ್ಕೆ ಸೇರಿಸುವುದರಿಂದ Honorarium ಅನ್ನೂ ಸಹ ಇದಕ್ಕೆ ಸೇರಿಸಬೇಕಾಗಿತ್ತು. Honorarium draw ಮಾಡುತ್ತಾರೆ ಸಾರ್, ಎಲ್ಲಾ Federation, District level Institutions ನವರು ಅಥವಾ Federation ನವರು, Co-operative Bank ನವರು ಅಥವಾ Milk Union ನವರು, DCC Bank ನವರು, They draw honorarium ಒಂದು ಸಾವಿರ ಅಥವಾ ಒಂದೂವರೆ ಸಾವಿರ ರೂಪಾಯಿಗಳ Honorarium ಅನ್ನು ಅವರು ಡ್ರಾ ಮಾಡುತ್ತಾರೆ. "Honorarium ಅನ್ನು ನೀವು ತೆಗೆದುಕೊಂಡಿದ್ದೀಯ. It is exempted" ಎಂದು ಹೇಳಿ ಅವರನ್ನೆಲ್ಲಾ ತೆಗೆದು ಹಾಕುವಂತಾಗಬಾರದು.You have to include them. ಈಗ ನೀವು Compensatory Allowance ನಲ್ಲಿ allowance without salary, salary ಅಲ್ಲದ allowance ಎಂದು ಹೇಳಿದ್ದೀರಿ. ಅದಕ್ಕೆ Honorarium ಎಂದು. Co-operative Institutionsಗೆ fix ಮಾಡಿದ್ದರು. ಅದನ್ನಾರದೂ ಸೇರಿಸುವ ಕೃಪೆಯನ್ನು ತಾವು ಮಾಡಬೇಕು. ಎರಡನೆಯದಾಗಿ specific ಆಗಿ aided educational institutions, though they are registered under Deputy Registrar, State law affect ಆಗುತ್ತದೋ ಇಲ್ಲವೋ ಎಂದು ನೋಡಿ, ಅಲ್ಲೇನಾದರೂ Exemptions ಕೊಡಲಿಕ್ಕೆ ಪ್ರಯತ್ನ ಪಡಬಹುದೇ ಎಂದು ನೋಡಬೇಕು. Aided institution ಇದ್ದು, ಅಲ್ಲಿ ಯಾರಾದರೂ ಫಲಾನುಭವಿ ಇದ್ದರೆ, ಅವರೇನಾದರೂ salary ಯನ್ನು ಅಥವಾ Honorarium ಅನ್ನು draw ಮಾಡುತ್ತಿದ್ದರೆ, ಏನು ಮಾಡಬೇಕು ಎಂಬುದನ್ನು ನೀವು ತೀರ್ಮಾನ ಮಾಡಬೇಕು. Amendment ಗಳನ್ನು ತಾವು ಮಾಡಬೇಕು. ನನ್ನ ದೃಷ್ಟಿಯಲ್ಲಿ ಶಾಸಕರಾದವರು ಬೇರೆ ಗೌರವಾನ್ವಿತ ಹುದ್ದೆಗಳಲ್ಲಿ ಇರುವುದು ತಪ್ಪು ಎನ್ನುವಂತಹ ಭಾವನೆ ಇಲ್ಲ. ಸಂಘಗಳನ್ನು ಬೆಳೆಸಿರುತ್ತಾರೆ. ಸಂಸ್ಥೆಗಳನ್ನು ಬೆಳೆಸಿರುತ್ತಾರೆ. ಅವರು ಇರುವುದರಿಂದಲೇ ಆ ಸಂಘಗಳಿಗೆ ಮತ್ತು ಆ

ಸಂಸ್ಥೆಗಳಿಗೆ ಬೇಕಾದಷ್ಟು ಅನುಕೂಲಗಳು ಇರುತ್ತವೆ. ಹಾಗಾಗಿ ಇದಕ್ಕೆ ತಾವು exemption ತಂದಿರುವುದು ಸರಿ ಇದೆ. ಆದರೆ exemption ತರುವುದರ ಮೊದಲೇ, ಸ್ವಲ್ಪ Law Minister transfer ಗಲಾಟೆ ಬಿಟ್ಟು ಇಲ್ಲೆಲ್ಲಾದರೂ ಕುಳಿತುಕೊಂಡು ಓದಿ, ಏನೇನಿದೆ ಏನೇನಿಲ್ಲಾ ಎನ್ನುವುದರ ಬಗ್ಗೆ ಪರಿಶೀಲಿಸಿ ತಂದಿದ್ದರೆ, ನಮ್ಮ ಸಮಯ ಸ್ವಲ್ಪ ಉಳಿಯುತ್ತಿತ್ತು ಎಂದು ಹೇಳುತ್ತಾ ತಾವು ತಂದಿರುವ ಬಿಲ್ಲನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) : ಮಾನ್ಯ ಅಧ್ಯಕ್ಷರೆ, ಇಷ್ಟು ತುರ್ತು ಶಾಸನ ಸಭೆಯನ್ನು ಕರೆಯುವಂತಹ ಅಗತ್ಯ ಇರಲಿಲ್ಲ. ಏಕೆಂದರೆ ಈಗಾಗಲೇ ಶಾಸನ ಸಭೆಯನ್ನು ಮುಂದಿನ ತಿಂಗಳು ಅಂದರೆ ಜುಲೈ ತಿಂಗಳ ಮೊದಲನೇ ವಾರದಲ್ಲಿ ನೀವು ಕರೆಯಬೇಕಾಗಿರುವಂತಾದ್ದು ಇದ್ದೇ ಇದೆ. ಬಹುಶಃ ಈಗಿನ ಪ್ರಕಾರ 16ನೇ ತಾರೀಖು ಕರೆಯುತ್ತೇವೆ ಅನ್ನತಕ್ಕಂಥ ಸುದ್ದಿಯೂ ಸಹ ಇದೆ. ಅದು 20ಕ್ಕೆ ಹೋಯಿತು ಎಂದಿಟ್ಟುಕೊಳ್ಳೋಣ. ಇವತ್ತು 6ನೇ ತಾರೀಖು, 20ನೇ ತಾರೀಖೇನೂ ಬಹಳ ದೂರ ಇರಲಿಲ್ಲ, ಅಷ್ಟು ತರಾತುರಿಯಲ್ಲಿ ಎರಡು ದಿವಸ ಸಭೆ ಕರೆಯಬೇಕಾಗಿರಲಿಲ್ಲ ಈ ಸಭೆಯಲ್ಲಿ ಏನು ಚರ್ಚೆ ಮಾಡಬೇಕು ಎನ್ನುವಂತಾದ್ದೇ ನಿರ್ಧಾರವಾಗಿರಲಿಲ್ಲ, ಬಹಳ ಗೊಂದಲವಾಗಿ ನಿಮಗೊಂದು ಅನುಕೂಲ ಸಿಂಧು ಸಿಕ್ಕಿತ್ತು ನಿನ್ನೆ ರಾಜ್‌ಕುಮಾರ್‌ರವರು ಮತ್ತು ಕೆಲವರು ತೀರಿಕೊಂಡಿದ್ದರ ಬಗ್ಗೆ ಸಂತಾಪ ಸೂಚನೆ ಆಯಿತು. ನಿನ್ನೆ 12 ಗಂಟೆಯಾಯಿತು. ತರಾತುರಿಯಲ್ಲಿ ಮಾನ್ಯ ಮುಖ್ಯಮುಂತ್ರಿಗಳು ಬಂದರು. ಒಂದು ದಿವಸ ಮುಂದಕ್ಕೆ ಹಾಕಿ ಬಿಡೋಣ ಎಂದರು, ಸದನ ಮುಂದಕ್ಕೆ ಹಾಕಲಾಯಿತು. ಒಂದು ದಿವಸ ಮುಗಿದು ಹೋಯಿತು. ಇವತ್ತು ಬೆಳಿಗ್ಗೆ ಸದನ ಆರಂಭವಾಗಿ ಈಗ ಅರ್ಧ ದಿವಸ ಆಯಿತು. ನನಗನಿಸುತ್ತದೆ, ಇದು ಬಹಳ ಅತ್ಯಂತ ಆತುರವಾಗಿ ತಂದಂತಹ ಉದ್ದೇಶವಾದರೂ ಏನು? ಇದು ಬಹಳ ಪ್ರಾಮುಖ್ಯವಾಗಿ ಹೇಳಬೇಕು. ಪದೇ ಪದೇ ನಿಮ್ಮನ್ನು ಸದನ ನೀವೇ ಕರೆಯಬೇಕಾಗಿತ್ತು. ಎಂದು ಒತ್ತಾಯ ಮಾಡುತ್ತಿರುತ್ತೇವೆ. ಹೆಚ್ಚಾಗಿ ತಮಗೆ ಗೊತ್ತಿದೆ, ನಿಮಗೆ ಗೊತ್ತಿಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಸರ್ಕಾರ ಹೇಳಿದರು ಅಂತ ನಾನು ಕರೆದೆ ಎಂದು ನೀವು ಹೇಳುವುದಕ್ಕೆ ಸಾಧ್ಯವೇ ಇಲ್ಲ. ಸಂಪೂರ್ಣವಾಗಿ ಈ ಸದನ ಕರೆಯತಕ್ಕಂಥದ್ದು ತಮ್ಮ ಜವಾಬ್ದಾರಿ. ಒಂದು ರೀತಿ ತಾಂತ್ರಿಕವಾಗಿಯೂ ಇದು ಇಲ್ಲ ಯಾವುದೋ ಒಂದು ಶಿಷ್ಟಾಚಾರದ ಮೇಲೆ ಸರ್ಕಾರ ಕೇಳುತ್ತಾರೆ, ನೀವು ಕರೆಯಬೇಕಾಗುತ್ತದೆ. ಮತ್ತೆ ನಮ್ಮಲ್ಲಿ ವಿಧೇಯಕ ಆಗಿದೆ. ಒಂದು ವರ್ಷಕ್ಕೆ 65 ದಿವಸ ಕರೆಯಲೇ ಬೇಕು. ಯಾವ್ಯಾವ ತಿಂಗಳು ಶಾಸನ ಸಭೆ ಕರೆಯಬೇಕು

ಎಂದು ಈ ಸದನದಲ್ಲೇ ವಿಧೇಯಕ ಆಗಿದೆ. ಅದೇ ಪ್ರಕಾರ ನೀವು ಕರೆಯಲೇ ಬೇಕು. ಈಗಲೂ ಕರೆಯಬೇಕು. ನವೆಂಬರ್ ತಿಂಗಳಿನಲ್ಲೂ ನೀವು ಕರೆಯಲೇಬೇಕು. ಆದ್ದರಿಂದ ಈಗ ತರಾತುರಿಯಿಂದ ಈ ವಿಧೇಯಕ ತರತಕ್ಕಂಥ ಉದ್ದೇಶ ಏನಿತ್ತು? ಯಾರ ಮೂಗಿನ ಮೇಲೆ ತುಪ್ಪವನ್ನು ಹಚ್ಚಲಿಕ್ಕೆ ಇದನ್ನು ತರುತ್ತಿದ್ದೀರಿ ಎಂಬುದು ನನಗೆ ಅರ್ಥವಾಗಲಿಲ್ಲ ಬಹಳ ಜನ ನಾವು ಮಂಡಳಿಗೆ ಬರಬೇಕೆಂದು ಎನ್ನುತ್ತಿದ್ದಾರೆ. ಅವರೆಲ್ಲಾ ಬರಲಿ, ಸಂತೋಷ. ಅವರೆಲ್ಲಾ ಬರಬೇಕಾದವರೇ, ನಾನು ಅದನ್ನೇಲ್ಲಾ ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ ಅವರು ಬರಲಿ, ಬರತಕ್ಕಂಥ ಉದ್ದೇಶಕ್ಕೆ ನನ್ನದೇನೂ ವಿರೋಧ ಇಲ್ಲ. ಆದರೆ ಮಾನ್ಯ ಈಶ್ವರಪ್ಪನವರೇ, ಏನಾದರೂ ಸರ್ಕಾರದ ಒಳಗಡೆ ನಿಮಗೆ ಅತ್ಯಂತ ಅಪಾಯಕಾರಿಯಾದ ಬೆಳವಣಿಗೆ ಏನಾದರೂ ನಡೆದಿದೆಯೇ? ಆ ತರಹ ಏನಾದರೂ ಮಂತ್ರಿ ಮಂಡಲದಲ್ಲಿ ನಾನು ಇನ್ನೂ ಬಹಳ ಜನ ಮಂತ್ರಿಗಳಾಗುವವರು ಇದ್ದೇವೆ, ಮಂಡಳಿಗಳು, ನಿಗಮಗಳು ಅನೇಕ 40–50 ಇವೆ. ಎಲ್ಲರಿಗೂ ಮಾಡುತ್ತೇವೆ ಎಂದು ಹೇಳಿದಿರಿ, ಇನ್ನೂ ಮಾಡಲಿಲ್ಲ ಏನಾದರೂ ಈ ಸಮ್ಮಿಶ್ರ ಸರ್ಕಾರದಲ್ಲಿ ಗೊಂದಲ ಉದ್ಭವವಾಗಿ ಸರ್ಕಾರಕ್ಕೆ ಏನಾದರೂ ಅಪಾಯ ಒದಗತಕ್ಕಂಥ ಪರಿಸ್ಥಿತಿ ಏನಾದರೂ ನಿರ್ಮಾಣವಾಗಿತ್ತೇ? ಅದಕ್ಕೋಸ್ಕರ ಏನಾದರೂ ನೀವು ತರಾತುರಿಯಿಂದ ಈ ಒಂದು ಮಸೂದೆಯನ್ನು ತಂದಿರಾ ಎಂದು ನಮಗೆ ಎಲ್ಲೋ ಒಂದು ಕಡೆ ಅನುಮಾನ ಬರುತ್ತದೆ. ತಾವು ಈ ಸದನ ತಮ್ಮದು. ಈ ಸದನದ ಹೊಣೆಗಾರಿಕೆ, ಈ ಸದನದ ಅಧ್ಯಕ್ಷತೆ ತಮ್ಮದು. ತಾವು ಕರೆದು ಸರ್ಕಾರದವರು ಹೇಳಿದರೂ, ತಾವು ಮಾನ್ಯ ಮುಖ್ಯಮಂತ್ರಿಗಳನ್ನು ಕರೆದು, ನೀವು ಇವತ್ತು 5 ಮತ್ತು 6ನೇ ತಾರೀಖು ಕರೆಯತಕ್ಕಂಥ ಉದ್ದೇಶವಾದರೂ ಏನು ಅಥವಾ ಈ ಸಭೆ ಇನ್ನೇನಾದರೂ ಮುಂದಿನ ವರ್ಷ ಕರೆಯುತ್ತೀರಾ? ಸಭೆ ಕರೆಯುವುದೇ ಇಲ್ಲವೇ? ಎಂದು ಕೇಳಬೇಕಾಗಿತ್ತು. ಈ ಸಭೆ ತರಾತುರಿಯಿಂದ ಕರೆಯಲಾಗಿದೆ. ಹೋದ ವರ್ಷ ಕರ್ನಾಟಕದಲ್ಲಿ ಮಳೆಯ ಹಾನಿಯಿಂದ ನಡೆದಂತಹ ದೊಡ್ಡ ದುರಂತದ ಬಗ್ಗೆ ಚರ್ಚಿಸಲು ತುರ್ತು ಶಾಸನ ಸಭೆ ಕರೆಯಲಿಲ್ಲ ಅನೇಕ ವಿಚಾರಗಳು ಕರ್ನಾಟಕದಲ್ಲಿ ನಡೆದಿವೆ. ಅದಕ್ಕೆಲ್ಲಾ ತುರ್ತು ಶಾಸನ ಸಭೆ ಕರೆಯಲಿಲ್ಲ. ಇದಕ್ಕೆ ತುರ್ತು ಶಾಸನ ಸಭೆಯನ್ನು ಕರೆಯತಕ್ಕಂಥ ಉದ್ದೇಶವಾದರೂ ಏನಿತ್ತು ಎನ್ನುವುದೇ ಒಂದು ದೊಡ್ಡ ಸಮಸ್ಯೆ ಅದಕ್ಕೆ ತಾವು ಸರ್ಕಾರಕ್ಕೆ ಹೇಳಬೇಕಾಗಿತ್ತು "ಇಲ್ಲ, ಇದು ಬೇಕಾಗಿಲ್ಲ, ತುರ್ತು ಶಾಸನ ಸಭೆ ಆಗುವುದಿಲ್ಲ, ನಾವು ಮುಂದಿನ 20ನೇ ತಾರೀಖಿಗೂ ಅಥವಾ 22ನೇ ತಾರೀಖಿಗೋ ಸದನ ಕರೆಯುತ್ತೇವೆ. ಆಗ ನಾವು ಮಾಡೋಣ" ಎಂದು ಹೇಳಬಹುದಾಗಿತ್ತು. ಆದರೆ ಇದು ತುರ್ತು

ಶಾಸನ ಸಭೆ ಕರೆದಿರತಕ್ಕಂಥದ್ದು, ಈ ಸಭೆಯ ಘನತೆಗೇ ಅಗೌರವವಾಗಿದೆ. ಈ ಸಭೆಗೆ ಪೆಟ್ಟು ಬಿದ್ದಿದೆ. ಈ ಸಭೆಯನ್ನು ಸರ್ಕಾರ ಲಘುವಾಗಿ ತೆಗೆದುಕೊಂಡಿದ್ದಾರೆ. ಈ ಸಭೆಯನ್ನು ಅವರು ತಮ್ಮ ಸಮ್ಮಿಶ್ರ ಸರ್ಕಾರದ ಕಾರ್ಯಾಲಯ ಎಂದು ಮಾಡಿಕೊಳ್ಳಬಾರದು. ಈ ಸಭೆಗೆ ಒಂದು ಶಿಷ್ಟಾಚಾರ ಇದೆ, ಒಂದು ಶಕ್ತಿ ಇದೆ. ಒಂದು ಗೌರವ ಇದೆ. ನನಗೇನು ಈ ಶಾಸಕರು ಈ ಲಾಭದಾಯಕ ಹುದ್ದೆಗಳನ್ನು ಹೊಂದಬಾರದು ಎನ್ನತಕ್ಕಂಥ ವಿಚಾರವೇನೂ ಇಲ್ಲ. ಈಗ ನನಗೆ, ತಮಗೆ ಗೊತ್ತಿರಬಹುದು. ಈಗ ಐದು ವರ್ಷದ ಹಿಂದೆ ಯಾವುದೋ ರಾಜಕೀಯಕ್ಕೋಸ್ಕರವಾಗಿ ನಾನು ವಿಧಾನಪರಿಷತ್ತಿಗೆ ನಿಂತೆ. ಇದು ತಮ್ಮ ಗಮನಕ್ಕೆ ಬಂದಿರಬೇಕು. ಆಗ ಮಾನ್ಯ ಎಸ್.ಎಂ. ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದರು. ನಾನು ವಿಧಾನ ಪರಿಷತ್ತಿನ 10 ಜನರ ಸಹಿ ಹಾಕಿಸಿ ನಾಮಪತ್ರ ಸಲ್ಲಿಸಿದೆ. ನಾನು 11ನೇ ಅಭ್ಯರ್ಥಿ. ಇದು ಮಾನ್ಯ ಶಿವಕುಮಾರ್‌ರವರಿಗೆ ಗೊತ್ತು. ಕೊನೆ ಗಳಿಗೆಯಲ್ಲಿ ಮಾನ್ಯ ಕೃಷ್ಣಪ್ಪನವರನ್ನು ತಂದು ಹಾಕಿಸಿದರು. ಇಲ್ಲದಿದ್ದರೆ ನಾನೇ ಆಯ್ಕೆಯಾಗುತ್ತಿದ್ದೆ ಎಂದು ಕಾಣುತ್ತದೆ. ಅದು ಇರಲಿ, ಅದೇನೇ ಇರಬಹುದು. ಆ ಸಂದರ್ಭದಲ್ಲಿ ಹೇಗಾದರೂ ಮಾಡಿ ವಾಟಾಳ್ ನಾಗರಾಜ್‌ರವರನ್ನು ಹೊರಗಡೆ ಇಡಬೇಕು ಎಂದೇಳಿ, 1956ರ ಕಾನೂನನ್ನು ಆ ಸಂದರ್ಭದಲ್ಲಿ ಉಪಯೋಗಿಸಿ, ಇವರು ಲಾಭದಾಯಕ ಹುದ್ದೆಯನ್ನು ಹೊಂದಿದ್ದಾರೆ ಎಂದು ಹೇಳಲಾಯಿತು.xx

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಾಟಾಳ್‌ರವರನ್ನು ನಾನು ಗೌರವಿಸುತ್ತೇನೆ. ಅವರು Senior Member ಮತ್ತು ಅನುಭವಸ್ಥರಾಗಿದ್ದಾರೆ. ಆದರೆ ಒಬ್ಬ Returing Officer ಮೇಲೆ ಈ ರೀತಿಯಾಗಿ aspersions ಮಾಡಬಾರದು. Because, once he is a Returning Officer, he represents Election Commission. Nothing to do with Chief Minister, Minister or Shivakumar.ಯಾರೇ ಇರಬಹುದು. ಆದರೆ ಅವನು Election Commission ಅನ್ನು ನೇರವಾಗಿ Represent ಮಾಡುವುದರಿಂದ ಆ ಜಾಗದಲ್ಲಿ ಯಾರೇ Secretary ಗಳು ಇರಬಹುದು, ಹಿಂದೆ ಒಬ್ಬರು ಇರಬಹುದು, ಇವತ್ತು ಇನ್ನೊಬ್ಬರು ಇರಬಹುದು, ನಾಳೆ ಮತ್ತೊಬ್ಬರು ಬರಬಹುದು, ಆದರೆ ಅವರ ಹತ್ತಿರ ಶಕ್ತಿ ಇಲ್ಲ, ಧೈರ್ಯ ಇಲ್ಲ ಎಂದು ನಾವು ಹೇಳಿಕೊಳ್ಳುತ್ತಾ ಹೋದರೆ ತಪ್ಪಾಗುತ್ತದೆ. ನಾಳೆ ಈ ರೀತಿಯಾಗಿ, ಏಕೆಂದರೆ ಅವರು ಅಸಹಾಯಕರು, ಇಲ್ಲಿ ಯಾರಿದ್ದಾರೆ defend ಮಾಡಿಕೊಳ್ಳಲಿಕ್ಕೆ ಅಥವಾ ಇಲ್ಲಿ ಅವರ ಪರವಾಗಿ ಯಾರಾದರೂ ಸೆಕ್ರೆಟರಿ ಎದ್ದು ನಿಂತು ಹೇಳುವುದಕ್ಕಾಗುತ್ತದೆಯೇ? ಆದುದರಿಂದ ದಯವಿಟ್ಟು

ಅದನ್ನು expunge ಮಾಡಿಬಿಡಿ. ಈ ರೀತಿಯಾಗಿ ಅಸಹಾಯಕರ ವಿರುದ್ಧ ನಾವು ಪ್ರತಿಯೊಬ್ಬರೂ ಮಾತನಾಡಿಕೊಳ್ಳುತ್ತಾ ಹೋಗತಕ್ಕಂಥದ್ದು ಸರಿಯಲ್ಲ.

(ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ. ಎಂದು ಸೂಚಿಸುತ್ತದೆ.)

ಶ್ರೀ ವಾಟಾಳ್ ನಾಗರಾಜ್ : ಆಯಿತು ಮಾನ್ಯ ಖರ್ಗೆಯವರೆ. ಅದರ ಬಗ್ಗೆ ಬಹಿರಂಗವಾಗಿ ಹೇಳದಿದ್ದರೂ, ಅಂತರಂಗವಾಗಿ ತಾವು ಸಿಕ್ಕಾಗ, ಆಗ ಏನೇನು ರಾಜಕಾರಣ ನಡೆಯಿತು ಎಂದು ನಾನು ನಿಮಗೆ ಹೇಳುತ್ತೇನೆ. ಒಬ್ಬ ಚುನಾವಣಾಧಿಕಾರಿಯ ವ್ಯವಸ್ಥೆ ಬಗ್ಗೆ ನನಗೆ ನಂಬಿಕೆ ಇದೆ. xx ಮಾನ್ಯ ಅಧ್ಯಕ್ಷರೆ, ಇದು ತರಾತುರಿಯಲ್ಲಿ ತಂದಿರತಕ್ಕಂಥದ್ದು, ಇದು ಒಂದು ಎರಡನೇಯದು...

XX ಸನ್ಮಾನ್ಯ ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ.

ಅಧ್ಯಕ್ಷರು : ಚುನಾವಣಾಧಿಕಾರಿ ಬಗ್ಗೆ ಮಾತನಾಡಿದ್ದು ರೆಕಾರ್ಡ್‌ಗೆ ಹೋಗಬಾರದು. ಮಾನ್ಯ ಸದಸ್ಯರು ಚುನಾವಣಾಧಿಕಾರಿ ಬಗ್ಗೆ ಮಾತನಾಡಿದ್ದನ್ನು expunge ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಅದನ್ನು ತೆಗದು ಹಾಕಿಬಿಟ್ಟಿರಾ? ಹೋಗಲಿ ಬಿಡಿ, ಆಯಿತು ಬಿಡಿ. ಖರ್ಗೆಯವರು ಹೇಳಿದ ತಕ್ಷಣ ನೀವು ತೆಗೆದಿರಿ. ಸಂತೋಷ ಅದು ಒಂದು ಒಳ್ಳೆಯದಾಯಿತು.

ಅಧ್ಯಕ್ಷರು : ಅವರು ಹೇಳಿದರು ಎಂದಲ್ಲ ಅವರು ಹೇಳಿದ್ದು ಸರಿಯಾಗಿದೆ ಎಂದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಹಾಗಾದರೆ ಇದು ಒಂದು ಆಪಾದರೆ ತಮ್ಮ ಮೇಲೆ! ಆದ್ದರಿಂದ ಇದನ್ನೂ ತೆಗೆದುಹಾಕಬೇಕು !

ಶ್ರೀ ಕೆ.ಆರ್. ರಮೇಶ್ ಕುಮಾರ್ : ಹಾಗಾದರೆ ಪ್ರೆಸ್‌ಗೆ ಈ ರೀತಿಯ ಡೈರೆಕ್ಷನ್ಸ್ ಕೊಟ್ಟುಬಿಡಿ. ಅವರು ಹೀಗೆ ಹೇಳಿದರು. ಇವರು ಬೇಡ ಎಂದು ಹೇಳಿದರು, ಆಮೇಲೆ ನಾನು ಏನು ಬೇಡ ಎಂದು ಹೇಳಿದೆ, ಇವೆಲ್ಲವನ್ನು ಒಟ್ಟಿಗೆ ಬರೆದುಬಿಡಿ ಎಂದು ಹೇಳಿ!

ಅಧ್ಯಕ್ಷರು : ಮಾನ್ಯ ಖರ್ಗೆಯವರೇನು ಏನು ಹೇಳಿದರು, ಅದು ಸಕಾರಣವಾಗಿದೆ ಎಂದು ಅದನ್ನು ಎಕ್ಸಪಂಜ್ ಮಾಡಲು ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕೆಲವು ಸತ್ಯವನ್ನು ಹೇಳುವಾಗ ಕೆಲವರಿಗೆ ಹಿಡಿಸುವುದಿಲ್ಲ, ಅದಕ್ಕೆ ಏನೂ ಮಾಡುವುದಕ್ಕಾಗುವುದಿಲ್ಲ.

ಆದ್ದರಿಂದ ತಾವು ಅದನ್ನು ತೆಗೆದಿದ್ದೇನೆ ಎಂದು ಹೇಳಿದ್ದೀರಿ. ತಮ್ಮ ಮಾತನ್ನು ನಾನು ಮೀರಲು ಆಗುವುದಿಲ್ಲ. ಆದರೆ ಚುನಾವಣೆಯ ವ್ಯವಸ್ಥೆ ಇದೆಯಲ್ಲಾ ಚುನಾವಣೆಯ ಅಧಿಕಾರಿಯಾಗತಕ್ಕವರು ಪೂರ್ವಗ್ರಹಪೀಡಿತರಾಗಬಾರದು. ಇದನ್ನು ಹೇಳಲೇ ಬೇಕಾಗುತ್ತದೆ.ಇದು ಸ್ಪಷ್ಟ ಯಾರು ಆಗಿದ್ದಾರೆ ಬಿಡುತ್ತಾರೆ ಎಂಬುದಕ್ಕಿಂತ ಆ ರೀತಿ ಆಗಬಾರದು ಆ ದೃಷ್ಟಿಯಲ್ಲಿ ಒಂದು ಕಾಲದಲ್ಲಿ ನಡೆಯಿತು. ಅದರ ಬಗ್ಗೆ ನಾನು ಮಾತನಾಡಲು ಹೋಗುವುದಿಲ್ಲ.

ಅಧ್ಯಕ್ಷರು : ಮಾನ್ಯ ನಾಗರಾಜ್‌ರವರೆ, ಈ ದೇಶದ ಚುನಾವಣೆಯ ವ್ಯವಸ್ಥೆಯ ಬಗ್ಗೆ ಬೇಕಾದರೆ ಒಂದು ದಿವಸ ಸ್ಪೆಶಲ್ ಡಿಬೇಟ್ ಮಾಡಬಹುದು. ಯಾವ್ಯಾವ ರೀತಿಯಲ್ಲಿ ಬದಲಾವಣೆಯಾಗಬೇಕು ಎಂಬುದರ ಬಗ್ಗೆ ಡಿಬೇಟ್ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಅದರ ಬಗ್ಗೆ ಅನಂತರ ಮಾತನಾಡೋಣ. ಅದು ಲಾಭದಾಯಕ ಹುದ್ದೆಯಲ್ಲವೆಂದು ನಮ್ಮ ಕರ್ನಾಟಕ ಉಚ್ಚನ್ಯಾಯಾಲಯವೇ ನನ್ನ ಪರವಾಗಿ ಎತ್ತಿ ಹಿಡಿಯಿತು. ಅದು ತಮಗೂ ಗೊತ್ತಿರಬೇಕು. ಅಂದರೆ ಸತ್ಯವಾಗಿ ಏನು ನಡೆದಿದೆ ಎಂಬುದನ್ನು ಉಚ್ಚನ್ಯಾಯಾಲಯ ಎತ್ತಿ ಹಿಡಿದು ನನ್ನ ನಾಮಪತ್ರವನ್ನು ಸ್ವೀಕಾರ ಮಾಡಬೇಕೆಂದು ಹೇಳಿತು. ಆದಾದಮೇಲೆ ಅವರು ಹೋಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ತಡೆಯಾಜ್ಞೆಯನ್ನು ತಂದರು. ಇದು ಹೇಗೆ ನಡೆದುಕೊಂಡು ಬಂತು ಎಂದು ತಮಗೆ ಹೇಳುತ್ತೇನೆ. ಈ ವಿಧೇಯಕದಲ್ಲಿ ಲಾಭದಾಯಕ ಹುದ್ದೆಗಳು ಯಾವ್ಯಾವುವು?

ಶ್ರೀ ಬಿ.ಎಸ್. ಹೊರಟ್ಟಿ : ಮಾನ್ಯ ಅಧ್ಯಕ್ಷರೆ, ವಾಟಾಳ್ ನಾಗರಾಜ್‌ರವರು ಒಂದಾನೊಂದು ಕಾಲಕ್ಕೆ ವಿಧಾನಪರಿಷತ್ತನ್ನು ರದ್ದುಮಾಡಬೇಕೆಂದು ಮಾತನಾಡಿದ್ದರು. ಮತ್ತೆ ಅಲ್ಲಿಗೇ ಹೋಗಲು ಅವರು ಪ್ರಯತ್ನ ಮಾಡಿದರು!

ಶ್ರೀ ವಾಟಾಳ್‌ನಾಗರಾಜ್ : ಈ ಲಾಭದಾಯಕ ಹುದ್ದೆಗಳು ಯಾವ್ಯಾವುದು ಎಂಬುದನ್ನು ಮಾನ್ಯ ಕಾನೂನು ಸಚಿವರು ಸ್ವಲ್ಪ ಸ್ಪಷ್ಟಪಡಿಸಬೇಕು. ಅದರ ಲಿಸ್ಟ್ ಬೇಕು. ಅದರ ಬಗ್ಗೆ ತಾವು ಕೆಲವೊಂದನ್ನು ವೇಗವಾಗಿ ಹೇಳಿದಿರಿ. ಬಿಕ್ಷಾಭಿವೃದ್ಧಿ ಮಂಡಲಿ, ಅದು ಯಾವ ಲಾಭದಾಯಕ ಹುದ್ದೆ? ಅಲ್ಲಿಗೆ ಒಬ್ಬರನ್ನು ಛೇರ್ಮನ್ ಆಗುತ್ತಾರೆಂದರೆ ಅದು ಯಾವ ಲಾಭದಾಯಕ ಹುದ್ದೆ? ಭಿಕ್ಷಾಭಿವೃದ್ಧಿ ಮಂಡಳಿಯಲ್ಲಿ ಯಾವುದೇ ಲಾಭವಿಲ್ಲ ಅಲ್ಲಿ ಏನೇನೂ ಇಲ್ಲ ಅಲ್ಲಿಗೆ ಅಧ್ಯಕ್ಷ ಆಗುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಅಧ್ಯಕ್ಷರೆ, ಅವರು ಭಿಕ್ಷೆ ಬೇಡುವುದಿಲ್ಲ ಸಂಬಳ ತೆಗೆದುಕೊಳ್ಳುತ್ತಾರೆ.

ಶ್ರೀ ವಾಟಾಳ್‌ನಾಗರಾಜ್ : ಹುಚ್ಚಾಸ್ಪತ್ರೆ ಅಭಿವೃದ್ಧಿ ಮಂಡಳಿ ಅಲ್ಲಿ ಏನು ಸಿಗುತ್ತದೆ? ಖೈದಿಗಳ ಕ್ಷೇಮಾಭಿವೃದ್ಧಿ ಮಂಡಳಿ ಆದ್ದರಿಂದ ಯಾವುದು ಲಾಬದಾಯಕ ಹುದ್ದೆ ಎಂಬ ಬಗ್ಗೆ ಪಟ್ಟಿ ಮಾಡಬೇಕು. ಸುಮ್ಮನೆ ಸಿಕ್ಕಿದ್ದನೆಲ್ಲಾ ಹೇಳವುದಕ್ಕಾಗುವುದಿಲ್ಲ. ಲಾಭದಾಯಕ ಹುದ್ದೆಗಳು ಯಾವ್ಯಾವುದು ಎಂಬುದನ್ನು ತಾವು ಸ್ಪಷ್ಟಪಡಿಸಬೇಕು. ನಾನೇನು ಇದರ ಪರವೂ ಇಲ್ಲ, ವಿರುದ್ಧವೂ ಇಲ್ಲ, ತಾವು ತರಾತುರಿಯಲ್ಲಿ ತಂದಿರುವ ಇದನ್ನು ಸ್ಪಷ್ಟವಾಗಿ ವಿರೋಧ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರು (ಶ್ರೀ ಎನ್.ವೈ. ಗೋಪಾಲಕೃಷ್ಣ)ರವರು ಅಧ್ಯಕ್ಷ ಪೀಠವನ್ನಂಕರಿಸಿದರು

xx ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಅಧ್ಯಕ್ಷರೆ, ನಮ್ಮ ನಿಲುವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಸ್ಪಷ್ಟಪಡಿಸಿದ್ದಾರೆ. ಇವತ್ತು Karnataka legislature prevention of disqualification amendment bill ಏನಿದೆ ಇದನ್ನು ತರಾತುರಿಯಲ್ಲಿ ತರತಕ್ಕ ಅವಶ್ಯಕತೆ ಏನಿತ್ತು ಎಂಬುದು ನನ್ನ ಪ್ರಶ್ನೆ, ಈ ಬಿಲ್ಲನ್ನು ನಾವ್ಯಾರೂ ವಿರೋಧ ಮಾಡುತ್ತಿಲ್ಲ. ಆದರೆ ಇದರ ಅವಶ್ಯಕತೆ ಏನಿತ್ತು? ಕೇಂದ್ರ ಸರ್ಕಾರದಲ್ಲಿ ಇದನ್ನು ತರತಕ್ಕ ಅವಶ್ಯಕತೆ ಏಕೆ ಬಂತು ಎಂಬುದು ಎಲ್ಲರಿಗೂ ಗೊತ್ತು ಜಯಬಚ್ಚನ್‌ರವರು ಡಿಸ್‌ಕ್ವಾಲಿಫಿಕೇಷನ್ ಆದ ಮೇಲೆ ಅನೇಕ ಪಾರ್ಲಿಮೆಂಟ್ ಸದಸ್ಯರು ಡಿಸ್ ಕ್ವಾಲಿಫೈ ಆಗುತ್ತಾರೆ ಎಂಬ ಭಯದಿಂದ ಮತ್ತು ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂಬ ದೃಷ್ಟಿಯಿಂದ ಸರ್ವ ಪಕ್ಷ ಸಭೆ ಸೇರಿ ಒಪ್ಪಿಗೆ ಪಡೆದು ಅಲ್ಲಿ ಪ್ರಿವೆನ್‌ಷನ್ ಆಫ್ ಡಿಸ್‌ಕ್ವಾಲಿಫಿಕೇಷನ್ ಬಿಲ್ಲನ್ನು ತಂದರು. ಆ ರೀತಿ ತಂದು ಅದು ಪ್ರೆಸಿಡೆಂಟ್ ಅಸೆಂಟ್‌ಗೆ ಹೋಯಿತು. ಪ್ರೆಸಿಡೆಂಟ್‌ರವರು ಅದಕ್ಕೆ ಕ್ಲಾರಿಫಿಕೇಷನ್ ಕೇಳಿ ವಾಪಸ್ ಕಳುಹಿಸಿದ್ದಾರೆ. ಆ ಮಾತು ಬೇರೆ. ಆದರೆ ಇಲ್ಲಿ ಇವತ್ತು ಅಂತಹ ಅವಶ್ಯಕತೆ ಏನಿತ್ತು ಅಥವಾ

(xx ಸನ್ಮಾನ್ಯ ಸದಸ್ಯರಿಂದ ಪರಿಷ್ಕರಣಗೊಂಡಿದೆ)

ಏನಾದರೂ ಅನಾಹುತವಾಗುತ್ತಿತ್ತೇ ಈ ರೀತಿ ತರಾತುರಿಯಲ್ಲಿ ತಂದು ಏನಾದರೂ ಯಾರಿಗಾದರೂ ಸಹಾಯ ಮಾಡಬಹುದೇ ಏನು ಎಂಬ ಪ್ರಶ್ನೆ ನಮ್ಮ ಮುಂದೆ ಇದೆ. ಎರಡನೆಯದು, ನನಗೆ ಅನ್ನಿಸಿದ ಮಟ್ಟಿಗೆ ಅವರ ಆತ್ಮ ಸಾಕ್ಷಿಯಾಗಿ ಹೇಳಿಕೊಳ್ಳಬೇಕು. ಇವತ್ತು ಈ ಬಿಲ್ಲು ಎಲ್ಲರ ಹಿತದೃಷ್ಟಿಯಿಂದ,

ರಾಜ್ಯದ ಹಿತದೃಷ್ಟಿಯಿಂದ, ಶಾಸಕರ ಹಿತದೃಷ್ಟಿಯಿಂದ ನೇರವಾಗಿ ತಂದಂಥ ಬಿಲ್ಲಲ್ಲ. ಅವರು ಡಿಸ್‌ಕ್ವಾಲಿಫಿಕೇಷನ್ ಆಗುತ್ತಾರೆ ಆದುದರಿಂದ ಮಂಡಿಸಿದಂಥ ಬಿಲ್ಲಲ್ಲ. ಇದಕ್ಕೆ ವಿಶೇಷವಾದ ಅಧಿವೇಶನವನ್ನು ಕರೆದಿದ್ದಾರೆ. ಇದನ್ನು ತರಾತುರಿಯಲ್ಲಿ ತಂದಿದ್ದು ಏಕೆಂದರೆ, ಇದು ಜೆ.ಡಿ.ಎಸ್. ಮತ್ತು ಬಿ.ಜೆ.ಪಿ. ಇಬ್ಬರೂ ಸೇರಿ ಏನು ಜಂಟಿ ಸರ್ಕಾರ ರಚಿಸಿದ್ದಾರೆ, ಅದಕ್ಕೆ ಆದಷ್ಟು ಬೆಂಬಲ ಸಿಗಲಿ ಮತ್ತು Prevention of Disqualification Act ನ್ನು ತಂದು ಶಾಸಕರುಗಳಿಗೆ ಒಳ್ಳೊಳ್ಳೆಯ ಹುದ್ದೆಗಳನ್ನು ಕೊಟ್ಟರೆ ನಾವು ಬಹು ಕಾಲ ಸರ್ಕಾರವನ್ನು ನಡೆಸಬಹುದು ಎನ್ನತಕ್ಕ ದೃಷ್ಟಿಯಿಂದ ತಂದಿದ್ದಾರೆಯೇ ಹೊರತು ಶಾಸಕರಿಗೆ ಸಹಾಯ ಮಾಡಬೇಕು ಎಂಬ ದೃಷ್ಟಿಯಿಂದ ಅಲ್ಲ.

ಶ್ರೀ ಹೆಚ್.ಡಿ. ಬಸವರಾಜ್ : ಶಾಸಕರು ಅಧ್ಯಕ್ಷರಾಗಿ ಅಭಿವೃದ್ಧಿ ಕಾರ್ಯ ಮಾಡುವುದು ನಿಮಗೆ ಇಷ್ಟವಿಲ್ಲವೆ? ಅದನ್ನು ಸ್ಪಷ್ಟ ಮಾಡಿ. ಶಾಸಕರು ಅಧ್ಯಕ್ಷರಾದರೆ ಅಭಿವೃದ್ಧಿ ಕೆಲಸವನ್ನು ಚುರುಕುಗತಿಯಲ್ಲಿ ಮಾಡುತ್ತಾರೆ. ಆ ಉದ್ದೇಶದಿಂದ ಸರ್ಕಾರ ಇದನ್ನು ತಂದಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಏಕೆ ಕುಂಬಳಕಾಯಿ ಕಳ್ಳ ಎಂದರೆ ಇವರು ಹೆಗಲುಮುಟ್ಟಿಕೊಳ್ಳುವುದು? ಮಾನ್ಯ ಬಸವರಾಜ್‌ರವರೇ, ನಿಮಗೆ ಕೊಡುವುದಿಲ್ಲ, ನೀವು ಎಷ್ಟು ಪ್ರಯತ್ನ ಮಾಡಿದರೂ ನಿಮಗೆ ಸಿಗುವುದಿಲ್ಲ. ಇನ್ನೂ ಬಹಳಷ್ಟು ಜನರಿದ್ದಾರೆ!

ಶ್ರೀ ಎಂ.ಪಿ. ವೆಂಕಟೇಶ್ : ಕಾಂಗ್ರೆಸ್ ಸರ್ಕಾರದವರು ಅಧಿಕಾರ ಕಳೆದುಕೊಂಡರು. ಇವರು ಮುಂದೆ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಗ್ಯಾರೆಂಟಿಯಾಗಿದೆ. ಅದಕ್ಕೆ ತರಕಾರು ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅವರನ್ನು ಸ್ವಲ್ಪ ಕುಳಿತುಕೊಳ್ಳಲು ಹೇಳಿ ಇಲ್ಲದಿದ್ದರೆ ನಾನು ಹೇಳಬೇಕಾಗುತ್ತದೆ...... I don't like it.

ಶ್ರೀ ಎಂ.ಪಿ. ವೆಂಕಟೇಶ್ : ಇನ್ನು ಮುಂದೆ ಅವರು ಬರುವುದಿಲ್ಲವೆಂದು ಗೊತ್ತಾಗಿಬಿಟ್ಟಿದೆ. ಆದ್ದರಿಂದ ಇದಕ್ಕೆ ತಕರಾರು ಮಾಡುತ್ತಿದ್ದಾರೆ.

ಅಧ್ಯಕ್ಷರು : ವೆಂಕಟೇಶ್‌ರವರೇ, ಅವರು ಮಾತನಾಡಲಿ, ತಾವು ಕುಳಿತುಕೊಳ್ಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವರಂಥವರ ಹತ್ತಿರ ಬುದ್ಧಿಯನ್ನೇನು ಕೇಳುವುದು?

ಶ್ರೀ ಎಂ.ಪಿ. ವೆಂಕಟೇಶ್ : ಕಾಂಗ್ರೆಸ್ ಗೌವರ್ನಮೆಂಟ್‌ನ್ನು ಕಳೆದುಕೊಂಡು ಇನ್ನು ಪಕ್ಷ ಅಸ್ಥಿತ್ವಕ್ಕೆ ಬರುವುದಿಲ್ಲವೆಂದು ಈ ರೀತಿಯೆಲ್ಲಾ ತಕರಾರು ಮಾಡುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಮಾತನಾಡಿದರೆ ಅವರು..

ಶ್ರೀ ಹೆಚ್.ಡಿ. ಬಸವರಾಜ್ : ಇದರಲ್ಲಿ ಏನಿದೆ ಎಂಬುದನ್ನು ಹುಡುಕುವುದು ಬೇಡ. ಅಭಿವೃದ್ಧಿ ಕೆಲಸಕ್ಕೆ ಈ ಬಿಲ್ ಪೂರಕವಾಗುತ್ತದೆ. ಆ ದೃಷ್ಟಿಯಿಂದ ಸ್ವಾಗತ ಮಾಡೋಣ ಎಂದು ಹೇಳಿ. ಅದರಲ್ಲಿ ತಪ್ಪು ಹುಡುಕುವ ಪ್ರಯತ್ನವನ್ನೇಕೆ ಮಾಡುತ್ತೀರಾ ಪ್ರಗತಿಯ ದೃಷ್ಟಿಯಿಂದ ಇದರ ಅವಶ್ಯಕತೆ ಇದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಪ್ರಗತಿದೃಷ್ಟಿಯಿಂದ ಬೇಕಾಗಿದ್ದರೆ ಹೋದ ಸೆಕ್ಷನ್ ನಲ್ಲಿ ತರಬಹುದಿತ್ತು ಅಥವಾ ಮುಂದೆ ಬರತಕ್ಕ ಸೆಷನ್‌ನಲ್ಲಿ ತರಬಹುದಾಗಿತ್ತು. ವಿಶೇಷವಾದ ಸದನವನ್ನು ಕರೆದು ಮಂಡಿಸತಕ್ಕ ಅವಶ್ಯಕತೆ ಏನಿತ್ತು ಎಂಬುದು ನಮ್ಮ ಪ್ರಶ್ನೆ? ಈ ಬಿಲ್ಲಿಗೆ ಯಾರೂ ಕೂಡ ವಿರೋಧ ಮಾಡುತ್ತಿಲ್ಲ. ಆದರೆ ನಿಮ್ಮ intention ಏನಿದೆ ಅದು ಸರಿಯಿಲ್ಲ ಎನ್ನತಕ್ಕದ್ದನ್ನು ನಾನು ಹೇಳುತ್ತಿದ್ದೇನೆ. With what intention you are bringing this legislation is not good. That is to retain power ನೀವು ಯಾವುದೇ ರೀತಿಯಿಂದ ಇವೆಲ್ಲಾ ಸ್ಥಾನಮಾನಗಳನ್ನು ಶಾಸಕರುಗಳಿಗೆ ಕೊಟ್ಟು ಸರ್ಕಾರವನ್ನು ಉಳಿಸಿಕೊಳ್ಳಬೇಕು ಎಂಬ ದೃಷ್ಟಿಯಿಂದ ಈ ಬಿಲ್ಲನ್ನು ತಂದಿದ್ದೀರೇ ಹೊರತು ರಾಜ್ಯದ ಹಿತದೃಷ್ಟಿಯಿಂದ ಅಭಿವೃದ್ಧಿಯ ದೃಷ್ಟಿಯಿಂದ ಶಾಸಕರಿಗೆ ಶಕ್ತಿ ಕೊಡಬೇಕು ಎಂಬ ದೃಷ್ಟಿಯಿಂದ ಅಲ್ಲ, ಆ ಮಾತನ್ನು ಈವತ್ತು ನಾನು ಹೇಳುತ್ತಿದ್ದೇನೆ. ಆದ್ದರಿಂದ ಈ ರೀತಿ ತರಾತುರಿಯಲ್ಲಿ ತರತಕ್ಕ ಅವಶ್ಯಕತೆ ಇರಲಿಲ್ಲ. ಇಡೀ ರಾಜ್ಯ ನೀಡುತ್ತಿದೆ."ಇದೇನಪ್ಪ ಈ ಬಿಲ್ಲಿಗೋಸ್ಕರ ಸದನವನ್ನು ಕರೆಯಬೇಕಾಗಿತ್ತೆ? ಇದಕ್ಕೋಸ್ಕರ ಇವರೆಲ್ಲಾ ಸದನ ಸೇರಬೇಕಾಗಿತ್ತೇ ಇದರಿಂದ ರಾಜ್ಯಕ್ಕೆ ಏನು ಲಾಭವಾಯಿತು ಎನ್ನತಕ್ಕ ಪ್ರಶ್ನೆ ಸಹ ಉದ್ಭವಿಸುತ್ತದೆ. ನೀವು Central Government ರವರು ತಂದರು" ಎಂದು ಅದಕ್ಕೆ ಹೋಲಿಸಿಕೊಂಡು ಹೇಳುತ್ತಿದ್ದೀರಿ ಅವರು ಯಾವ circumstances ನಲ್ಲಿ ತಂದರು ಎಂಬುದು ತಮಗೆ ಗೊತ್ತಿದೆ. ಅಲ್ಲಿ ಯಾವ ರೀತಿಯಾಗಿ ಡಿಸ್ ಕ್ವಾಲಿಫಿಕೇಷನ್ ಆದರೆ, ಅದರ ವಾತಾವರಣ ಏನಾಗುತ್ತಿತ್ತು ಎನ್ನತಕ್ಕದ್ದು ಗೊತ್ತಿದೆ. ಆದರೆ ಇಲ್ಲಿ ಅಂಥ ವಾತಾವರಣ ಇರಲಿಲ್ಲ. ಆ ರೀತಿಯ ವಾತಾವರಣವನ್ನು ನೀವೆ ಸೃಷ್ಟಿ ಮಾಡಿಕೊಂಡು ಇವತ್ತು ಈ ಬಿಲ್ಲನ್ನು ತಂದು ಬೇಗ ಪಾಸ್ ಮಾಡಿ ಎಂದು ಕುಳಿತಿದ್ದೀರಲ್ಲಾ, ಇದು ಸರಿಯಲ್ಲ. ಅದಕ್ಕಾಗಿ ಇಂಥ ಬಿಲ್ಲನ್ನು 1956ರಲ್ಲೆ

ತಂದಿದ್ದಾರೆ. ನ್ಯಾಚ್ಯುರಲಿ, ಅನೇಕ ಸಂದರ್ಭ ಬಂದಾಗ ಆ ಶೆಡ್ಯೂಲ್‌ಗೆ ಯಾವ್ಯಾವ ಹುದ್ದೆಗಳನ್ನು ಸೇರಿಸಬೇಕು. ಎಂಬುದು ಸಹಜವಾಗಿ ಬರುತ್ತದೆ. ಇದೇನ್ನೂ ಹೊಸ ಬಿಲ್ಲಲ್ಲ ಆ ಬಿಲ್ಲಿಗೇ ತರತಕ್ಕ ಅಮೆಂಡ್ ಮೆಂಟ್. ಆದರೆ ಇದನ್ನು ಈ ಸಂದರ್ಭದಲ್ಲಿ ತರತಕ್ಕ ಔಚಿತ್ಯವೇನಿತ್ತು ರನ್ನತಕ್ಕ ಪ್ರಶ್ನೆಯೇ ಹೊರತು ಇದರಲ್ಲಿ ಬೇರೆ ಪ್ರಶ್ನೆ ಏನೂ ಇಲ್ಲ. ಈಗ ನಾವು ಏನಾದರೂ ಹೇಳಿದರೆ ಅವರಿಗೆ ಬಹಳ ಸಿಟ್ಟು. ಏಕೆಂದರೆ ಅವರಿಗೂ ಈಗ ಗೊತ್ತಾಗಿದೆ. ಮೊದಲೇ ಎರಡೂ ಪಕ್ಷಗಳಲ್ಲಿ ಕಾಂಟ್ರಡಕ್ಷನ್ ಇವೆ ಅವರ ತತ್ವವೇ ಬೇರೆ ಇವರ ತತ್ವವೇ ಬೇರೆ. ಆದರೂ ಕೂಡ ಒಂದು ಕಡೆ ಸೇರಿದ್ದಾರೆ. ಇದನ್ನು ಕೆಲವು ದಿವಸವಾದರೂ ಕಸರತ್ತು ಮಾಡಿ ನಡೆಸೋಣ. ಯಾವ ರೀತಿಯಾಗಿ ನಡೆಸುವುದು. ಅವರಿಗೆ ಒಂದು ಛೇರ್ಮನ್ ಕೋಡೋಣ. ಇವರಿಗೆ ಒಂದು ಅಧ್ಯಕ್ಷಗಿರಿ ಕೊಡೋಣ, ಅವರನ್ನು ಬೋರ್ಡ್‌ನ ಅಧ್ಯಕ್ಷರನ್ನಾಗಿ ಮಾಡೋಣ ಎಂದು ಹೇಳಿ ಇವೆಲ್ಲಾವನ್ನೂ ಮಾತನಾಡಿಕೊಂಡು ಪಾಪ ಇದನ್ನು ತಂದಿದ್ದಾರೆ.

5.00 ಪಿ.ಎಂ.

ಈ ಬಿಲ್ಲಿಗೇನೂ ನಮ್ಮ ವಿರೋಧವಿಲ್ಲ. ಆದರೆ ಅವರು ಆತ್ಮಸಾಕ್ಷಿಯಾಗಿ ಕೇಳಿಕೊಂಡರೆ ಅವರಿಗೇ ಗೊತ್ತಾಗುತ್ತದೆ, ಇದನ್ನು ನಿಜವಾಗಿಯೂ ಜನ ಹಿತ ದೃಷ್ಟಿಯಿಂದ ತಂದಿದ್ದಾರೆಯೇ ಅಭಿವೃದ್ಧಿ ದೃಷ್ಟಿಯಿಂದ ತಂದಿದ್ದಾರೆಯೇ ಅವರು ಅಥವಾ ಅವರು ಗದ್ದುಗೆಯನ್ನು ಉಳಿಸಿಕೊಳ್ಳುವುದ ಕ್ಕೊಸ್ಕರ ತಂದಿದ್ದಾರೆಯೇ ಎನ್ನುವುದನ್ನು ಅವರೇ ಸ್ಪಷ್ಟಪಡಿಸಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೆ, ಒಂದು ಬಹಳ ಪ್ರಮುಖವಾದಂತಹ ಪ್ರಶ್ನೆ, ಇವತ್ತು ಸಾಮಾನ್ಯ ಜನರು ಈ ಅಧಿವೇಶನದ ಬಗ್ಗೆ ಏನು ಅಂದುಕೊಳ್ಳುತ್ತಿದ್ದಾರೆ, ಅವರು ನಮಗೆ ಓಟು ಹಾಕಿ ಇಲ್ಲಿಗೆ ಕಳುಹಿಸಿದ್ದಾರೆ. ಅವರು ನಿರೀಕ್ಷೆ ಮಾಡುವುದು ಏನೆಂದು ಹೇಳಿದರೆ, "ನಮ್ಮ ವಿಚಾರಗಳ ಬಗ್ಗೆ ಅಧಿವೇಶನದಲ್ಲಿ ಚರ್ಚೆ ಮಾಡುತ್ತಾರೆ" ಎಂದು ಅವರು ನಿರೀಕ್ಷೆ ಮಾಡಿದ್ದಾರೆ. ಆದರೆ ನಾವು ಇಲ್ಲಿ ಸೇರಿಸತಕ್ಕಂತಹ ಅಧಿವೇಶನವನ್ನು ಅವರು ಅನುಮಾನ ಪಡುತ್ತಿದ್ದಾರೆ. ಮತ್ತು ನಮ್ಮನ್ನು ಅವಹೇಳನ ಮಾಡುತ್ತಿದ್ದಾರೆ. ಯಾವ ರೀತಿಯಲ್ಲಿ ಅವಹೇಳನ ಮಾಡುತ್ತಿದ್ದಾರೆಂದರೆ, ಶಾಸಕರ ಪದವಿಗಳನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೋಸ್ಕರ ವಿಶೇಷ ಅಧಿವೇಶನ ಕರೆದಿದ್ದಾರೆಯೇ ಹೊರತು, ರಾಜ್ಯದ ತುರ್ತು ಸಮಸ್ಯೆಗಳು ಬಂದಾಗ ವಿಶೇಷ ಅಧಿವೇಶನ ಇವರು ಕರೆಯಲಿಲ್ಲ. ಹಾಗಾದರೆ ನಾವು ಓಟು ಹಾಕಿ ಕಳುಹಿಸಿರತಕ್ಕಂತಹ ಶಾಸಕರ ಉದ್ದೇಶಗಳೇನು? ಅವರ ಕರ್ತವ್ಯಗಳೇನೂ

ಇವರನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಮಾತ್ರ ವಿಶೇಷ ಅಧಿವೇಶನ ಕರೆಯುತ್ತಾರೆ. ರಾಜ್ಯದಲ್ಲಿ ಬಂದಂತಹ ಗಂಡಾಂತರ ಪರಿಸ್ಥಿತಿ ಸಂದರ್ಭದಲ್ಲಿ ವಿಶೇಷ ಅಧಿವೇಶನ ಕರೆದಿರುವುದು ನನಗೆ ಜ್ಞಾಪಕ ಇಲ್ಲ, ಹಾಗಾಗಿ ಸಾಮಾನ್ಯ ಜನರು ನಮ್ಮನ್ನು ಯಾರು ಮತ ಹಾಕಿ ಇಲ್ಲಿಗೆ ಕಳುಹಿಸಿದ್ದಾರೆ. ಅವರ ಮುಂದೆ ನಮ್ಮನ್ನು ಅವಹೇಳನಕ್ಕೆ ಗುರಿ ಮಾಡತಕ್ಕಂತಹ ರೀತಿಯಲ್ಲಿ ಈ ಅಧಿವೇಶನವನ್ನು ಕರೆದಿದ್ದಾರೆ. ಈ ಬಿಲ್ಲನ್ನು ತರಬಾರದು ಎಂದು ನಾವೇನೂ ಹೇಳಲಿಲ್ಲ. ವಿಶೇಷ ಅಧಿವೇಶನವನ್ನು ಕರೆದು ತರತಕ್ಕಂತಹ ಔಚಿತ್ಯತೆ ಏನೆಂದು ಇವತ್ತು ಕೂಡ ಅವರು ಬಿಲ್ಲನ್ನು ಇಂಟ್ರಿಡ್ಯೂಸ್ ಮಾಡುವ ಸಂದರ್ಭದಲ್ಲಿ ಕೂಡ ಏನೂ ಹೇಳಲಿಲ್ಲ. ವಿಶೇಷ ಅಧಿವೇಶನ ಕರೆದು ಈ ಬಿಲ್ಲನ್ನು ಪಾಸು ಮಾಡಬೇಕೆಂಬ ಪ್ರಶ್ನೆ ಏನಿದೆ? ಅದನ್ನು ಇವತ್ತಿನವರೆಗೂ ಅವರು ಎಕ್ಸ್‌ಪ್ಲೇನ್ ಮಾಡಲಿಲ್ಲ. ಹಾಗಾಗಿ ಜನ ನಮ್ಮನ್ನು ಸಸ್ಪೆಕ್ಟ್ ಮಾಡತಕ್ಕಂಥದ್ದು, ನಮ್ಮ ಬಗ್ಗೆ ಗುಮಾನಿ ವ್ಯಕ್ತಪಡಿಸುವುದು ಏನೆಂದರೆ, ಈ ಅಧಿವೇಶನಕ್ಕೆ ಏನೋ ಸ್ವಾರ್ಥ ಮಾಲಫೈಡ್ ಇಂಟೆನ್‌ಷನ್ ಇದೆ. ಎನ್ನ ತಕ್ಕಂಥದ್ದು ಸ್ಪಷ್ಟವಾಗುತ್ತಿದೆ. ಇದು ಒಂದನೇ ಅಂಶ. ಎರಡನೇ ಅಂಶ, ನಾನು ನಿಮ್ಮನ್ನು ನಿರ್ದಿಷ್ಟವಾಗಿ ವಿನಂತಿಸಿಕೊಳ್ಳುತ್ತೇನೆ. ಮತ್ತು ಈ ಬಿಲ್ಲನ್ನು ಮಂಡಿಸಿದಂತಹ ಕಾನೂನು ಮಂತ್ರಿಗಳಿಗೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಇದನ್ನು ಬಿಲ್ಲಿನಿಂದ ತೆಗೆಯಿರಿ. ಛೇರ್ಮನ್, ಸ್ಪೀಕರ್, ಡೆಪ್ಯುಟಿ ಛೇರ್ಮನ್ ಮತ್ತು ಡೆಪ್ಯುಟಿ ಸ್ಪೀಕರ್ ಮತ್ತು ವಿಪ್ ಈ ಹುದ್ದೆಗಳನ್ನು ಈ ಬಿಲ್ ನಿಂದ ತೆಗೆಯಬೇಕು. ಏಕೆಂದರೆ, ಈ ಬಿಲ್ ಹೀಗೆಯೇ ಫಾಸ್ ಮಾಡಿ ಹೋದರೆ ಸಾಮಾನ್ಯ ಜ್ಞಾನ ಇರತಕ್ಕಂತಹವರು ಯಾರಾದರೂ ನಮ್ಮ ಬಗ್ಗೆ ನಗಾಡುತ್ತಾರೆ. ಈ ಬಿಲ್ ಪಾಸು ಮಾಡಿದಂತಹ ಶಾಸಕರಿಗೆ ಇಂತಹ ಕನಿಷ್ಟ ಬುದ್ಧಿಯೂ ಇಲ್ಲವಾ ಎನ್ನತಕ್ಕಂತಹ ರೀತಿಯಲ್ಲಿ ನಮ್ಮನ್ನು ಅವಹೇಳನ ಮಾಡುತ್ತಾರೆ. ಏಕೆಂದರೆ, ಇದು ನಮಗೆಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. without becoming a members of this house, nobody can become the speaker of the house. ಇಂತಹ ಸಣ್ಣ ವಿಚಾರವೂ ಈ ಶಾಸಕರ ಗಮನಕ್ಕೆ ಬರಲಿಲ್ಲವಾ ಎನ್ನತಕ್ಕಂತಹ ರೀತಿಯಲ್ಲಿ ನಗಾಡುತ್ತಾರೆ. ಕಾನೂನು ಪಂಡಿತರು ಬಿಡಿ ಸಾಮಾನ್ಯ ಜನ ನೋಡಿದರೂ ಕೂಡ ನಗಾಡುತ್ತಾರೆ, ಆದ್ದರಿಂದ ಅದಕ್ಕೆ ಅವಕಾಶ ಮಾಡಿ ಕೊಡದೆ ಈ ನಾಲ್ಕು-ಐದು ಹುದ್ದೆಗಳನ್ನು ಅಮದರೆ ಛೇರ್ಮನ್, ವಿಪ್, ಸ್ಪೀಕರ್, ಡೆಪ್ಯುಟಿ ಛೇರ್ಮನ್ ಮತ್ತು ಡೆಪ್ಯುಟಿ ಸ್ಪೀಕರ್‌ಅನ್ನು ಈ ಬಿಲ್ ನಿಂದ ದಯವಿಟ್ಟು ತೆಗೆಯಿರಿ. ಗೌರವವಾದರೂ ಉಳಿಯುತ್ತದೆ. ಯಾರಾದರೂ ಈ ಬಿಲ್ ನೋಡಿದರೆ ಪರವಾಗಿಲ್ಲ ಯಾರೋ ಬುದ್ದಿವಂತರು

ಇದ್ದಾರೆ,ಈ ಬಿಲ್ ಪಾಸ್ ಮಾಡಿದರು ಎನ್ನತಕ್ಕಂತಹ ಗೌರವವಾದರೂ ಇರುತ್ತದೆ. ಆ ಗೌರವಕ್ಕೂ ಧಕ್ಕೆ ತರಬೇಡಿ ಈ ಪದಗಳನ್ನು ತೆಗೆಯುವುದರಿಂದ ನಿಮಗೇನೂ ಅನಾಹುತವಾಗುವುದಿಲ್ಲ. ಯಾವ ಪ್ರತಿಷ್ಠೆಯ ಪ್ರಶ್ನೆಯೂ ಬರುವುದಿಲ್ಲ ಇದನ್ನು ದಯವಿಟ್ಟು ತೆಗೆಯಿರಿ, ಇದನ್ನು ತೆಗೆಯಬೇಕೆಂಬುದು ನನ್ನ ಅಭಿಪ್ರಾಯ. ಇನ್ನು ಮೂರನೆಯದು ಅಧ್ಯಕ್ಷರೆ, ಸನ್ಮಾನ್ಯ ಎಂ.ಪಿ. ಪ್ರಕಾಶ್‌ರವರು ಅಬ್ಜೆಕ್ಟೀವ್ಸ್ ಓದುವಾಗ ಏನೋ ಒಂದು ಪಾಯಿಂಟ್ ಇದೆ ಎಂದು ಹೇಳಿದರು. ಏನು ಪಾಯಿಂಟ್ ಎಂದು ಅವರು ಹೇಳಲಿಲ್ಲ. ಇರಲಿ ಆದರೆ ಇಲ್ಲಿ ಇನ್ನೊಂದು ಅವಹೇಳಕರವಾದ ಅಬ್ಜೆಕ್ಟ್ಸ್ ಇದೆ. ಏನೆಂದರೆ,

" The Government of India has reconsidered the issue regarding the consequencess of the member of the Parliament holding office of profit and passed the parliament (Prrevention of Disqualification) (Amendment) Bill, 2006

(Bill No. 44 of 2006). In view of the same.....

ಇದರ ಅರ್ಥ ತಂದಿದ್ದೇವೆ ಎಂದು ಹೇಳತಕ್ಕಂಥದ್ದು ನಿಮ್ಮ ಉದ್ದೇಶ ಆದರೆ, ಆ ಬಿಲ್‌ನ್ನು ಪ್ರೆಸಿಡೆಂಟ್ ವಾಪಸ್ ಕಳುಹಿಸಿದ್ದಾರೆ. ಈಗ ನೀವೇನು ಮಾಡುತ್ತೀರಿ. That central parliment Act has been sent back by the President. He has not given assent to it. Then what are you going to do now?

ಏನು ಮಾಡುತ್ತೀರಿ ನೀವು ಹಾಗಾದರೆ? ಯಾರು ಆ ಲಾ ಸೆಕ್ರೆಟರಿ ಮಹಾನುಭಾವರು ಅವರನ್ನು ಕರೆಸಿದರೆ ನಾವು ಆ ಮಹಾನುಭಾವರನ್ನು ನೋಡಬೇಕಾಗುತ್ತದೆ. what president of India has sent back that bill for reconsideration to the Parliament ನೀವು ಇವತ್ತು ಅದನ್ನು ಮೆನ್‌ಷನ್ ಮಾಡಿ ಅದಕ್ಕೋಸ್ಕರ ನಾವು ತಂದಿದ್ದೇವೆಂದು ಹೇಳಿದರೆ,ಈ ಬಿಲ್ಲನ್ನು ನೀವು ವಾಪಸ್ ತೆಗೆದುಕೊಳ್ಳಿ. Beacuse that Bill has not been accepted by the President of India. ನಾಳೆ ನೀವು ಇದನ್ನು ಗವರ್ನರ್‌ಗೆ ಕಳುಹಿಸುತ್ತೀರಿ. Governor quoting the same will send it back again. Then, what are you going to do?

ಮಾನ್ಯ ಮಾಧುಸ್ವಾಮಿಯವರು ಕಾಮನ್ಸ್‌ಸೆನ್ಸ್ ಎನ್ನತಕ್ಕಂತಹ ಪದವನ್ನು ಉಪಯೋಗಿಸಿದ್ದು ಈ ಕಾರಣಕ್ಕಾಗಿಯೇ. ಇದಕ್ಕೇನೂ ದೊಡ್ಡ ಕಾನೂನು ಪಂಡಿತರೇನೂ ಆಗಬೇಕಾಗಿಲ್ಲ. It is simple commonsense. ಇದನ್ನು ನೀವು

ಇದರಲ್ಲಿ ಏಕೆ ಸೇರಿಸಬೇಕಾಗಿತ್ತು? ದಯವಿಟ್ಟು ಅದನ್ನು ಆ ಅಬ್ಜೆಕ್ಟೀವ್ಸ್‌ನಲ್ಲಾದರೂ ತೆಗೆಯಬೇಕು, ಅಥವಾ ಈ ಬಿಲ್ಲನ್ನಾದರೂ ವಾಪಸ್ ತೆಗೆದುಕೊಳ್ಳಬೇಕು. Even if you say only because of that Bill, you brought this Bill, that Bill has not been passed so far, that Bill has not been given assent by the President of India. ಹಾಗಾದರೆ ಅದರ ಪ್ರಕಾರ ನಾವು ಈ ಬಿಲ್ ತಂದಿದ್ದೇವೆಂದು ನೀವು ಹೇಗೆ ಹೇಳುತ್ತೀರಿ? ಇದನ್ನು ದಯವಿಟ್ಟು ವಾಪಸ್ ತೆಗೆದುಕೊಳ್ಳಿ. ನಾಲ್ಕನೆಯದು. ನಿಮ್ಮ ಆಂತರಿಕ ವೈರುದ್ಯಗಳು ಈ ಬಿಲ್ಲನ್ನು ತರಲಿಕ್ಕೆ ಫೋರ್ಸ್ ಮಾಡಿವೆ. ಅಂತ Internal contradiction of the coalition Government has forced you to bring this Bill ಏನು ಇಂಟರ್ನಲ್ ಕಾಂಟ್ರಿಡಿಕ್ಷನ್? one of your partners is opposing this bill in the parliament. But here they are coalating this Bill This is the internal contradiction. To avoid this internal contradiction you brought this Bill and in result.

ಏನು ಅದರ ಅರ್ಥ ಎಂದು ಹೇಳಿದರೆ ನಿಮ್ಮ ಅಧಿಕಾರವನ್ನು ಉಳಸಿಕೊಳ್ಳುವುದಕ್ಕೋಸ್ಕರ ಈ ಬಿಲ್ಲನ್ನು ತಂದಿದ್ದೀರಿ ಎಂಬುದು ಸ್ಪಷ್ಟವಾಗಿದೆ, ಅದರ ಉದ್ದೇಶವನ್ನು ನೀವು ಎಕ್ಸ್‌ಪ್ಲೇನ್ ಮಾಡಲಿಲ್ಲ, ಆದರೆ, ಈ ರೀತಿಯಲ್ಲಿ ನೀವು ವಿಶೇಷ ಅಧಿವೇಶನವನ್ನು ಕರೆದು ಈ ಶಾಸನಸಭೆಗೆ ಇರತಕ್ಕಂತಹ ಘನತೆ ಗೌರವವನ್ನು ಕಡಿಮೆ ಮಾಡಿ, ಜನರ ಮುಂದೆ ನಮಗೆ ಅವಹೇಳನ ಮಾಡತಕ್ಕಂತಹ ಸ್ಥಿತಿಗೆ ನಮಗೆ ದಯವಿಟ್ಟು ತರಬಾರದು ಎಂದು ಹೇಳಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಪ್ರಕಾಶ್‌ರವರಿಗೆ ನಾನು ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಪದೇ ಪದೇ ನೀವು ಏಕೆ ನಿಮ್ಮ ಶಕ್ತಿಯನ್ನು ಕಳೆದುಕೊಳ್ಳುತ್ತೀರಿ? ಅವರು ಎಲಿಮಿನೇಷನ್ ಪ್ರೋಸೆಸ್ ಮಾಡಿ ಎಲಿಮಿನೇಟ್ ಮಾಡಿದ್ದಾರೆ. ಮತ್ತೆ ನೀವು ಅವರ ಸಹಾಯಕ್ಕೆ ಹೋಗುತ್ತಿದ್ದೀರಿ ಎಂದು ನಾನು ಏನು ಮಾಡಲಿ? ಈ ರೀತಿಯಾಗಿ ಸಹಾಯ ಮಾಡುವುದು ಸರಿಯಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಈಗ ಕೆಲವು ಆನ್ಸರ್ಸ್ ಮಾಡಬೇಕಾಗಿದೆ, ತಮಗೆ ಧನ್ಯವಾದಗಳು. ಸನ್ಮಾನ್ಯ ಅಧ್ಯಕ್ಷರೆ.....

SRI M. MALLIKARJUN KHARGE: ಅಧ್ಯಕ್ಷರೇ ಇದು ಕಡಿಮೆಗಿಂತ ಜಾಸ್ತಿ ಉದಾರತೆ ಆಯಿತು.

SRI K.R. RAMESH KUMAR : Allow us to have our say.

SRI M.P. PRAKASH : If it is necessary then I will also Intervene. But, certain points have already been raised. ಗೌವರ್ನಮೆಂಟ್ ನವರು ರಿಪ್ಲೇ ಕೊಡುತ್ತಾರೆ. ನಾನು ಒಬ್ಬ ಸದಸ್ಯನಾಗಿ ಹೇಳತಕ್ಕಂತಹ ಕೆಲವು ಮಾತುಗಳು ಇವೆ. ಆದ್ದರಿಂದ ಅವರು ನನಗೆ ಅವಕಾಶ ಮಾಡಿಕೊಟ್ಟಿದ್ದಾರೆ. ದಯವಿಟ್ಟು. Kindly bear with me.

SRI K.R. RAMESH KUMAR : Sir, generally when a Bill is taken up for discussion, in the House, it is presumed that the Members belonging to the Treasury Benches would be falling in line with the line of the Government. Such of us who differ from the views of the Treasary Benches will be first allowed to air our views. you, as an experienced person.,as a senior Member you could at best advise and assist your Minister when he is on his toes. I don't think, You are aware of all these things with all this if you still want to say "I would like to have my say" we will not come in your way. Is it fair?

SRI M.P. PRAKASH : I really appreciate your concern. But, the point is certain things have already gone there. I can also answer the whole thing after the debate.But, I am not the Government. The Government will certainly defend that.

SRI K.R. RAMESH KUMAR : Sir, But you have an obligation to be with the Government on the Bill. It is an official Bill. As a Member of the Treasury Benche you have no alternative but to fall in line If you have such intentions not to support the Bill we will be too glad to welcome you to our camp. It is a welcome gesture.

SRI M.P. PRAKASH : Thankyou sir. Thank you for your kind advise ಸನ್ಮಾನ್ಯ ಅಧ್ಯಕ್ಷರೇ, ಈ ಲಾಭದಾಯಕ ಹುದ್ದೆಯ ವಿಚಾರದಲ್ಲಿ ಏನು ಅವಸರ ಇತ್ತು ಯಾವ ಕಾರಣಕ್ಕಾಗಿ ತರಾತುರಿಯಲ್ಲಿ ಇಂತಹ ಕಾನೂನನ್ನು ತಂದಿದ್ದೀರಿ ಎನ್ನುವಂತಹ ಮೊದಲನೇ ಮೂಲಭೂತ ಪ್ರಶ್ನೆಯನ್ನು ಮಾನ್ಯ ಎಲ್ಲಾ ಹಿರಿಯ ಸದಸ್ಯರು ಎತ್ತಿದ್ದಾರೆ. ಒಂದು ಅರ್ಥದಲಿಲ್ಲ ಅದು ಸರಿ ಇರಬಹುದು. ಮತ್ತೊಂದು ಅರ್ಥದಲ್ಲಿ ಈ ಬಿಲ್ಲನ್ನು ತಂದಿರತಕ್ಕಂಥ ಉದ್ದೇಶವಿಷ್ಟು ಲಾಭದಾಯಕ

ಹುದ್ದೆಗಳು ಯಾವುದು ಎಂದು ಹೇಳುವಾಗ ಕೆಲವು ವಿಚಾರಗಳಲ್ಲಿ ತಪ್ಪು ಮಾಡಿ ಒಂದು ದೊಡ್ಡ ರಾಜಕೀಯ ಪಕ್ಷ ತನ್ನದೇ ಆದಂಥ ಕಾರಣಗಳಿಗಾಗಿ ಜಯಾ ಬಚ್ಚನ್ ರವರ ಕೇಸ್‌ನಲ್ಲಿ ಸೋತಂಥ ಸದಸ್ಯನ ಮೂಲಕ ಈ ಪ್ರಶ್ನೆಯನ್ನು ಎತ್ತಿದಾಗ ಅದು ಮುಂದೆ ತನಗೇ ತಿರುಗುಬಾಣವಾಗಬಹುದು ಎನ್ನುವಂಥ ಪರಿಕಲ್ಪನೆ ಆ ರಾಜಕೀಯ ಪಕ್ಷಕ್ಕೆ ಇಲ್ಲದೇ ಹೋಯಿತು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರು, ಅವರು ಅದರಿಂದ ಅನಾಹುತ ಏನಾಯಿತು ಎನ್ನತಕ್ಕಂತದ್ದನ್ನೂ ಕೂಡ ಪರಿಭಾವಿಸುತ್ತಾರೆಂದು ನಾನು ಅಂದು ಕೊಂಡಿದ್ದೇನೆ. ಜಯಾಬಚ್ಚನ್‌ರವರ ಕೇಸ್‌ನ್ನು ಮೋಹನ್‌ಕುಮಾರ್ ಎತ್ತಿರತಕ್ಕಂಥ ಸಂದರ್ಭದಲ್ಲಿ ಇಂಥದ್ದೇ ವಿಷಯ ತನಗೆ ತಿರುಗುಬಾಣವಾಗುತ್ತದೆ. ಎನ್ನತಕ್ಕಂಥ ವಿಷಯ ಅವರಿಗೆ ಗೊತ್ತಿರಲಿಲ್ಲ. ಅಲ್ಲಿ ಏನಾಗಿದೆ ಸುಪ್ರೀಂಕೋರ್ಟ್‌ನವರು ಕೊಟ್ಟಿರತಕ್ಕಂಥ ನಿರ್ಣಯ ನೀವು ಕಾಂಪನ್‌ಸೇಟರಿ ಅಲೋಯೆನ್ಸ್ ಎನ್ನತಕ್ಕಂಥ ಪದವನ್ನು ಬಳಸಿದ್ದರೂ ಕೂಡ if a post carries something which is receivable, merely it becomes a receivable, whether you have drawn the salary, whether you have utilised that privileges and perks with this provided for that particular post, you are entitled to become disqualified. Aprovision of that law will be attracted.

ಎಂದು ಸುಪ್ರೀಂಕೋರ್ಟ್‌ನವರು ಹೇಳಿ ಕಳುಹಿಸಿಬಿಟ್ಟರು. ಅದನ್ನು ಹೇಳಿದರು.

'It was held in the said case that the amount of money receivable by a person in connection with the office he holds is immaterial when deciding whether the office carried any priofit.

ಅದನ್ನು ಹೇಳುತ್ತಾ ಕೊನೆಗೆ ಅವರು ಏನು ಹೇಳುತ್ತಾರೆಂದರೆ.

" what is relevant is whether a pecuniary gain is recivable in regard to the office and not whether the pecuniary gain is, in fact, received or reccived negligibly." So, this is a new definition that has come.

ಈ ಸಂದರ್ಭದಲ್ಲಿ ತಾವೆಲ್ಲಾ ಹಿರಿಯರಿದ್ದಂಥವರೂ ಕೂಡ ಇದೀರಿ, ಮಾನ್ಯ ರಮೇಶ್ ಕುಮಾರ್‌ರವರು ಅಥವಾ ಮಲ್ಲಿಕಾರ್ಜುನ ಖರ್ಗೆಯವರು: ಹಿಂದೆ ನಾವು 1989ರಲ್ಲಿ ಸೋತಾಗ ನಮ್ಮವರು ಕೇವಲ 24 ಜನರು ಮಾತ್ರ ಗೆದ್ದುಬಂದಿದ್ದೆವು. ಆಗ ರಾಮಕೃಷ್ಣ ಹೆಗಡೆಯವರೂ ಕೂಡ ಸದಸ್ಯರಾಗಿ ಗೆದು ಬಂದಿದ್ದರು. ಅವರು 1989ರ ಸಾಲಿನಲ್ಲಿ ಯೋಜನಾ ಆಯೋಗದ

ಉಪಾಧ್ಯಕ್ಷರಾದರು. ಯಾರೇ ಒಬ್ಬರು ವಿರೋಧ ಪಕ್ಷದ ನಾಯಕರಾಗಬೇಕಾಗಿದ್ದರೆ ಸದನದ ಒಟ್ಟು ಸಂಖ್ಯೆಯ ಶೇಕಡ ಹತ್ತರಷ್ಟು ಇರಬೇಕು ಎನ್ನತಕ್ಕಂಥ ನಿಯಮವಿದೆ. ಅದಕ್ಕೆ ಸರಿಯಾಗಿ ನಾವು 24 ಜನರು ನಾವು ಇದ್ದೆವು. ರಾಮಕೃಷ್ಣ ಹೆಗಡೆಯವರು ಇದನ್ನು ಪರಿಭಾವಿಸಿಕೊಂಡೇ ಅದಕ್ಕೋಸ್ಕರ ರಾಜೀನಾಮೆಯನ್ನು ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದರು. ಆಗ ಎಸ್.ಎಂ. ಕೃಷ್ಣಾರವರು ವಿಧಾನಸಭಾಧ್ಯಕ್ಷರಾಗಿದ್ದರು. ರಾಜೀನಾಮೆಯನ್ನು ನೀವು ಕೊಟ್ಟರೆ ಚಂದ್ರೇಗೌಡರು ನಮ್ಮ ಪಕ್ಷದಿಂದ ಆಗ ವಿರೋಧ ಪಕ್ಷದ ನಾಯಕರಾಗಿದ್ದರು, ಅವರು ಈ ಅರ್ಹತೆಯನ್ನು ಕಳೆದುಕೊಳ್ಳುತ್ತಾರೆ ಎನ್ನತಕ್ಕಂಥ ಕಾರಣವಿದ್ದುದ್ದರಿಂದ ನೀವು ರಾಜೀನಾಮೆಯನ್ನು ಕೊಡಬೇಡಿ ಎಂದು ರಾಮಕೃಷ್ಣಹೆಗಡೆಯವರಿಗೆ ಹೇಳಿದೆವು. ಅವರು ರಾಜೀನಾಮೆಯನ್ನು ಕೊಡಲಿಲ್ಲ. ಯಾರೂ ಇದರ ಪ್ರಶ್ನೆಯನ್ನು ಮಾಡುವುದಕ್ಕೆ ಹೋಗಲಿಲ್ಲ. ಯಾರೂ ಇದನ್ನು ಪ್ರಶ್ನೆ ಮಾಡಲಿಲ್ಲವಾದ್ದರಿಂದ, ಅದು ಹಾಗೆಯೇ ಉಳಿಯಿತು. ಇಲ್ಲಿ ಜಯಾಬಚ್ಚನವರಿಗೆ ತಮ್ಮದೇ ಆದಂಥ ಕಾರಣಗಳಿಗಾಗಿ

ಶ್ರೀ ಕೆ.ಆರ್. ರಮೇಶ್ ಕುಮಾರ್ : ಏನಾಯಿತು ಹೇಳಿ. ರಾಮಕೃಷ್ಣ ಹೆಗಡೆಯವರು ಏನು ಮಾಡಿದರು ಹೇಳಿ. ರಾಮಕೃಷ್ಣ ಹೆಗಡೆಯವರನ್ನು ಇಲ್ಲಿ ಅಕ್ಸ್ ಪ್ಟೇ ಮಾಡಿರಲಿಲ್ಲ. He was not the leader of Opposition. He accepted the office of the Deputy Chairman of Planning Cemmission.

ಶ್ರೀ ಎಂ.ಪಿ. ಪ್ರಕಾಶ್ : ಅವರು ರಾಜೀನಾಮೆಯನ್ನು ಕೊಟ್ಟರೆ 24 ಸಂಖ್ಯೆ ಇದ್ದದ್ದು 23 ಆಗುತ್ತಿತ್ತು. 23 ಆದರೆ ಚಂದ್ರೇಗೌಡರು ವಿರೋಧ ಪಕ್ಷದ ನಾಯಕರು ಆಗುವುದಕ್ಕೆ ಅರ್ಹತೆ ಬರುತ್ತಿರಲಿಲ್ಲ.

ಶ್ರೀ ಜೆ.ವಿ. ಮಾಧುಸ್ವಾಮಿ : ಡೆಪ್ಯುಟಿ ಛೇರ್ಮನ್, ಪ್ಲಾನಿಂಗ್ ಕಮಿಷನ್‌ಗೆ ಇದ್ದದ್ದು ಕೊಶ್ಚನ್ ಆಯಿತು. ಲಕ್ಕೀಲೀ ರಾಮಕೃಷ್ಣ ಹೆಗಡೆಯವರು ಅವೊತ್ತು ಸ್ಯಾಲರಿಯಾಗಲಿ , ಹನರೋ ರಿಯಂ ಆಗಲಿ ಡ್ರಾ ಮಾಡಿಲ್ಲ ಎನ್ನುವ ಒಂದೇ ಕಾಂಟೆಕ್ಸ್ಟ್‌ನಲ್ಲಿ ಅವೊತ್ತು ಸ್ಥಾನ ಉಳಿಸಿಕೊಂಡರು. we were all members then.

ಶ್ರೀ ಎಂ.ಪಿ. ಪ್ರಕಾಶ್ : ಸರಿ ಸಾರ್ ನಾನು ಒಪ್ಪಿಕೊಳ್ಳುತ್ತೇನೆ. ಆ ಕಾರಣಕ್ಕಾಗಿ ಹೇಳುತ್ತಾ ಆವೊತ್ತಿನ ಕಾಲಕ್ಕೆ ಏನಾಗಿತ್ತು ಅಂದರೆ ಸುಪ್ರೀಂಕೋರ್ಟ್‌ನ obiter dicta ಏನು ಇರುತ್ತದೆ ಅದು ಬಹಳ ಸ್ಪಷ್ಟವಾಗಿ ಇರಲಿಲ್ಲ. ಇಲ್ಲೇನು ಹೇಳುತ್ತಾರೆ, in this particular case also, Jaya

Bachchan has not utilised any of the perks, privileges nor she has drawn even a rupee for the post in Film Development Corporation. But, even then, the Supreme Court says, "If the holder of the office chose not to receive, draw such emoluments, what is relevant is, whether a pecuniary gain is receivable in regard to the office and not whether the pecuniary gain is, in fact, received or received negligibly" Therefore, on that particular context, Jaya Bachachan was disqualified. Immediately, certain allegations were also made against many of the Members of Parliment including the Speaker,including the Chairman of the Commitee.

ಸೋನಿಯಾಗಾಂಧಿಯವರು ಆ ಕೂಡಲೇ ಅರ್ಥ ಮಾಡಿಕೊಂಡರು."ಈ ಕಾರಣದಿಂದ ನಾನು ರಾಜೀನಾಮೆ ಕೊಡುತ್ತೇನೆ." ಎನ್ನತಕ್ಕಂಥ ಮಾತನ್ನಾಡಿ ರಾಜೀನಾಮೆಯನ್ನು ಕೊಟ್ಟರು. ರಾಜೀನಾಮೆ ಕೊಟ್ಟ ಕಾರಣಕ್ಕಾಗಿ ಮತ್ತೆ ಚುನಾವಣೆ ಬಂತು, ಆ ಚುನಾವಣೆಯಲ್ಲಿ ಮತ್ತೆ ಅವರು ಗೆದ್ದುಬಂಧರು. ಆಗ ಎಲೆಕ್ಷನ್ ಕಮೀಷನ್ ಏನು ಹೇಳಿತ್ತೆಂದರೆ, "In case of Mrs. Sonia Gandhi, the whole thing becomes infructuous, because she has resigned the post. She is no more the Member of the House. There fore, the petition which is pending against her is infructuous" ಎನ್ನತಕ್ಕಂಥ ಮಾತನ್ನು ಹೇಳಿದರು. They quoted Jayalalitha' case also. ಜಯಲಲಿತಾರವರ ಬಗ್ಗೆ ತಮಿಳುನಾಡಿನಲ್ಲಿ ಇಂಥದ್ದೇ ಒಂದು ಪ್ರಸಂಗ ಬಂದಂಥ ಸಂದರ್ಭದಲ್ಲಿ, The House itself was dissolved when the matter was pending. Therefore, the Election Commission has held that it is infructuous.

ಇದೇ ರೀತಿಯಾಗಿ ಇರುವುದರಲ್ಲಿ ಕಾನ್ಟ್ರಡಿಕ್ಷನ್ಸ್‌ಗಳಿರುತ್ತವೆ, ಅದನ್ನು ಈ ಸಂಧರ್ಭದಲ್ಲಿ ಹೇಳಬೇಕಾಂಥ ಅಗತ್ಯವಿಲ್ಲ. ಆದರೆ ಇಲ್ಲಿ ಅವಸರದಲ್ಲಿ ತರತಕ್ಕಂಥದ್ದರ ಕಾರಣವೇನು ಎಂದರೆ ಜಾರ್ಖಂಡ್‌ನಲ್ಲಿ ತಂದರು; ಉತ್ತರ ಪ್ರದೇಶದಲ್ಲಿ ತಂದರು, ಮಂದೆ ಭವಿಷ್ಯದಲ್ಲಿ ಆಗತಕ್ಕಂಥ ಕೆಲವು ನೇಮಕಾತಿಗಳಿಗೆ ಸಂಬಂಧಪಟ್ಟಂತೆ, ಈಗ ಏನಾದರೂ ಕೂಡ ಈ ಕಾನೂನು ಮೂಲಕವಾಗಿ ಅತಂತ್ರ ಸ್ಥಿತಿ ಅಥವಾ ಅನರ್ಹತೆ ಆಗುವ ಸಂದರ್ಭ ಬರಬಹುದು ಎನ್ನುವ ಕಾರಣಕ್ಕಾಗಿಯೇ ನಾವು ಈ ಒಂದು ಕಾನೂನನ್ನು

ತಂದಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು, ನೀವು ಇದನ್ನು ತರುವುದರ ಮೂಲಕವಾಗಿ ನಿಮ್ಮ ಶಾಸಕರನ್ನು ಸಂತೃಪ್ತರನ್ನಾಗಿಟ್ಟು ನಿಮ್ಮ ಅಧಿಕಾರವನ್ನು ಉಳಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡುತ್ತಿದ್ದೀರಿ ಎನ್ನುವ ಮಾತನ್ನು ಹೇಳಿದರು. It is not a Presidential form of democracy.

ಶ್ರೀ ಎಂ. ಮಲ್ಲಿಖಾರ್ಜುನ ಖರ್ಗೆ : ಸತ್ಯವೋ ಅಲ್ಲವೋ ಹೇಳಿ ಸಾರ್.

ಶ್ರೀ ಎಂ.ಪಿ. ಪ್ರಕಾಶ್ : ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಕ್ಲಾರಿಫೈ ಮಾಡುತ್ತೇನೆ. I will come to that point. It is not a Presidential form of democracy like in America.ಅಲ್ಲಿ ಅವರು ಡೆಮಾಕ್ರಟಿಕ್ ಆಗಿರತಕ್ಕಂಥ ಪ್ರೆಸಿಡೆಂಟ್ ರಿಪಬ್ಲಿಕನ್ ಪಾರ್ಟಿಯನ್ನು ಮಿನಿಸ್ಟರ್ ಆಫ್ ಸ್ಟೇಟ್ ಎಂದು ಅವರು ಮಾಡಿಕೊಳ್ಳಬಹುದು. ಆದರೆ ಇಲ್ಲಿ ಪಾರ್ಲಿಮೆಂಟರಿ ಸಿಸ್ಟಂ ಆಫ್ ಡೆಮಾಕ್ರಸಿಯೊಳಗೆ ಪಕ್ಷ ಅಧಿಕಾರದಲ್ಲಿರುತ್ತದೆ. ಎಷ್ಟೇ ನಮಗೆ ಬೇಕಾಗಿರತಕ್ಕಂಥ ಬಹಳ ಪರಿಣಿತರಾಗಿರುವವರಿದ್ದರೂ ಕೂಡ ಅವರನ್ನು ವಿರೋಧ ಪಕ್ಷದಲ್ಲಿದ್ದವರಲ್ಲಿ ಯಾರನ್ನೂ ಕೂಡ ನಾವು ಮಂತ್ರಿ ಮಾಡಿಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆಂದರೆ ಆ ಪಕ್ಷ ಆಧಾರಿತವಾಗಿರ ತಕ್ಕಂಥ ಒಂದು ಪ್ರಜಾಪ್ರಭುತ್ವದ ವ್ಯವಸ್ಥೆಯನ್ನು ನಾವು ಈಗ ತಂದಿದ್ದೇವೆ. ನಾವು ನೀವು ಎಲ್ಲರೂ ಕಲೆತು ನಮ್ಮ ನಮ್ಮ ಸರ್ಕಾರಗಳು, ಸುಸ್ಥಿತಿಯಲ್ಲಿ ಇರಬೇಕು ಎಂದು ಬಯಸುವುದು ನಮ್ಮ ಆಸೆ. ಇದು ಪ್ರಜಾಪ್ರಭುತ್ವ, ಯೋಚನೆ ಮಾಡತಕ್ಕಂಥದ್ದು. ಆ ಕಾರಣಕ್ಕಾಗಿಯೇ,ನಮ್ಮಲ್ಲಿರತಕ್ಕಂಥ ಕೆಲವು ಶಾಸಕರಿಗೆ ನಾವು ಅಧಿಕಾರವನ್ನು ಕೊಟ್ಟೆವು ಎಂದು ತಕ್ಷಣವೇ ಅಪಮಾನಕ್ಕೆ ಗುರಿಯಾಗುತ್ತೇವೆ ಎಂದಲ್ಲ. ಅವಮಾನಕ್ಕೆ ಒಳಗಾಗುತ್ತವೆ ಈ ಪದವನ್ನು ಬಳಸುವುದರಿಂದ ಎಂದು ತಾವೇನು ಹೇಳಿದಿರಿ, ಅಷ್ಟು ಸೂಕ್ಷ್ಮ ಆಗಬೇಕಾದಂಥ ಕಾರಣವೇನಿಲ್ಲ, ಪ್ರತಿಯೊಬ್ಬ ಶಾಸಕನಿಗೂ ಕೂಡ ತನ್ನ ಜವಾಬ್ದಾರಿಯ ಜೊತೆಗೆ ಕೆಲವು ಬೋರ್ಡ್, ನಿಗಮ, ಮಂಡಳಿ ಅಥವಾ ಯಾವುದೇ ಸಹಕಾರಿ ಸಂಘಗಳ ಅಪೆಕ್ಸ್ ಬಾಡಿ, ಅಲ್ಲಿಯೂ ಕೂಡ ಅಧ್ಯಕ್ಷರಾಗಿ ತಮ್ಮ ಕಾರ್ಯಕ್ಷಮತೆಯನ್ನು ತೋರಿಸಿಕೊಳ್ಳುವುದಕ್ಕೆ ಅವರಿಗೆ ಅವಕಾಶವನ್ನು ಕಲ್ಪಿಸಿ ಕೊಡಬಹುದು. ನಾವು ನಮ್ಮ ಶಾಸಕರಿಗೇನಾದರೂ ಅಧಿಕಾರವನ್ನು .....

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವ್ಯಾರೂ ನಿಗಮ, ಮಂಡಳಿಗಳ ಛೇರ್ಮನ್ ಆಗಬಾರದು ಎನ್ನುವ ಪ್ರಶ್ನೆಯೇ ಇಲ್ಲ. ನಾನು ಹೇಳಿದ್ದೇನೆಂದರೆ, ಈ ಕಾರಣಕ್ಕೋಸ್ಕರ ತುರ್ತು ಅಧಿವೇಶನವನ್ನು ಕರೆದು ಈ ಬಿಲ್‌ನ್ನು ಪಾಸ್

ಮಾಡುವುದರಿಂದ ಸಾಮಾನ್ಯ ಜನರ ದೃಷ್ಟಿಯಲ್ಲಿ ಏನು ಅನ್ನಿಸುತ್ತದೆಂದರೆ ಶಾಸಕರ ಲಾಭಕೋಸ್ಕರ ಸದನವನ್ನು ಕರೆದಿದ್ದಾರೆಯೇ ಹೊರತು ನಮಗೋಸ್ಕರ ಕರೆದಿಲ್ಲವೆನ್ನುವ ಭಾವನೆ ಬರುತ್ತದೆ ಎಂದು ಹೇಳಿದೆನೇ ಹೊರತು ಬೇರೆ ದೃಷ್ಟಿಯಲ್ಲಿ ನಾನು ಅದನ್ನು ಹೇಳಲಿಲ್ಲ. ಇವರು ಏನು ಹೇಳುತ್ತಿದ್ದಾರೆ, ಪ್ರತಿಭೆ ಪ್ರದರ್ಶನ ಮಾಡುವುದಕ್ಕೆ ಅವಕಾಶ ಇರಬೇಕು ಎಂದು ಹೇಳುತ್ತಿದ್ದಾರೆ. ಈಗ 20ನೇಯ ತಾರೀಖು ಕರೆದಿದ್ದೀರಿ, ಇವೊತ್ತು 6ನೆಯ ತಾರೀಖು, ಇನ್ನು 14 ದಿವಸದಲ್ಲಿ ಪ್ರತಿಭೆ ಪ್ರದರ್ಶನ ಮಾಡದಿದ್ದರೆ ಏನಾದರೂ ಅನಾಹುತವಾಗಿ ಬಿಡುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ನಾನು ಪ್ರತಿಭೆ ಎನ್ನುವ ಶಬ್ದವನ್ನೇ ಉಪಯೋಗಿಸಿಲ್ಲ. ನೋಡಿ ನೀವು, ಪ್ರತಿಭೆ ಎಂದು ಎಲ್ಲಿದೆ? ನಿಮ್ಮ ಮನಸ್ಸಿನಲ್ಲಿ ಏನಿದೆ ಅದನ್ನೇ ಮಾತನಾಡುತ್ತೀರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನೀವು ಹೇಳಿದ್ದು.

ಶ್ರೀ ಎಂ.ಪಿ. ಪ್ರಕಾಶ್ : ಏನಂತ, ಏನಂತ ಹೇಳಿದೆ? ಪ್ರತಿಭೆ ಎನ್ನತಕ್ಕಂಥ ಪ್ರಶ್ನೆಯೇ ಇಲ್ಲ.

ಶ್ರೀ ಜಿ.ವಿ. ರಾಮರೆಡ್ಡಿ : ನೀವು ಹೇಳಿದ್ದು, ಶಾಸಕರಾಗಿ ಇನ್ನೂ ಹೆಚ್ಚು ಸಮರ್ಥವಾಗಿ ಕೆಲಸ ಮಾಡುವುದಕ್ಕೆ ಆಗುತ್ತದೆ ಎಂದು.

ಶ್ರೀ ಎಂ.ಪಿ. ಪ್ರಕಾಶ್ : ಹೌದು, ಹೌದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅದಕ್ಕೆ 14 ದಿವಸಗಳಲ್ಲಿ ಪ್ರಳಯವೇನೂ ಆಗುತ್ತಿರಲಿಲ್ಲ. 14 ದಿವಸ ತಡವಾಗಿದ್ದರೆ ನಿಮ್ಮ ಸಾಮರ್ಥ್ಯವನ್ನು ತೋರಿಸಿಕೊಳ್ಳುವುದಕ್ಕೆ ತಡೆಯಾಗಿ ಏನೂ ಪ್ರಳಯವೇನೂ ಆಗುತ್ತಿರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಅದಕ್ಕೆ ಉತ್ತರಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಈ 14 ದಿವಸದಲ್ಲಿ ಏನು ತುರ್ತು ಬರುತ್ತದೆ. ಕೇಂದ್ರ ಸರ್ಕಾರದವರು ತಂದ ಬಿಲ್‌ನ್ನೂ ಕೂಡ ರಾಷ್ಟ್ರಪತಿಗಳು ವಾಪಸ್ ಕಳೂಹಿಸಿದ್ದಾರೆ. ಹೀಗಿರುವಾಗ ಇಲ್ಲಿ ಅಂತ ಬಿಲ್ ತರಬಹುದೇ?

ಶ್ರೀ ಎಂ.ಪಿ. ಪ್ರಕಾಶ್ : ತಪ್ಪೇನಿದೆ? ಇದು ತತ್ವ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ವಿರೋಧ ಮಾಡುತ್ತಿಲ್ಲ. ಆದರೆ ಈಗಲೇ ಇದರ ಅರ್ಜೆನ್ಸಿ ಏನು?

SRI M.P. PRAKASH : I am answering that question.

SRI G.V. SRIRAMA REDDY : What is the urgency for this bill? We are not opposing this ನಾವು ಇದನ್ನು ವಿರೋಧ ಮಾಡುತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಹೇಳುತ್ತೇನೆ. kindly listen to me.

SRI G.V. SRIRAMA REDDY : We are not opposing. what is the urgency of this Bill? ಅದನ್ನು ಹೇಳಿ ನನಗೆ.

ಶ್ರೀ ಎಂ.ಪಿ. ಪ್ರಕಾಶ್ : ಅದನ್ನೇ ನಾನು ಹೇಳುತ್ತೇನೆ. ತಾವು ದಯವಿಟ್ಟು ಕುಳಿತುಕೊಳ್ಳಿ. ಇಲ್ಲಿ 14 ದಿವಸಗಳ ಪ್ರಶ್ನೆ ಅಲ್ಲ. 14 ದಿವಸವಾದ ಮೇಲೆ ಅಂಥ ತುರ್ತು ಈ ಬಿಲ್ ತರುವುದಕ್ಕೆ ಏನು ಬರುತ್ತದೆ? ಇಲ್ಲಿ ಪ್ರಶ್ನೆ ಏನು ಬರುತ್ತದೆ ಎಂದರೆ ಕೇಂದ್ರ ಸರ್ಕಾರದವರು ಈಗಾಗಲೇ ವಾಪಸ್ ಕಳುಹಿಸಿದ್ದಾರೆ ಎನ್ನತಕ್ಕಂಥ ವಿಷಯ ಪ್ರಸ್ತಾಪ ಮಾಡಿದಿರಿ. President has not rejected the Bill.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಮಾನ್ಯ ಪ್ರಕಾಶ್‌ರವರೇ ಒಂದ್ನಿಮಿಷ, ಶಾಸಕರಲ್ಲಿ ಇರತಕ್ಕಂಥ ಒಂದು ಪ್ರತಿಭೆ, ಚೈತನ್ಯ, ಅವರ ಒಂದು ವಿಶಿಷ್ಟ ಗುಣಗಳನ್ನು ರಾಜ್ಯದ ಹಿತದೃಷ್ಟಿಯಿಂದ ಉಪಯೋಗ ಮಾಡಿಕೊಳ್ಳುವುದಕ್ಕೆ ಇದೊಂದು ಅವಕಾಶವಾಗುತ್ತದೆ ಎನ್ನುವ ಮಾತನ್ನು ಹೇಳಿದಿರಿ. As M.P. Prakash touch your soul, I think, ನಿಮಗೂ ನಮಗೂ ಇನ್ನು ಆಗಬೇಕಾದ್ದೇನೂ ಇಲ್ಲ. ನಾವು ಸಾಕಷ್ಟು ನೋಡಿ ಬಿಟ್ಟಿದ್ದೇವೆ. ಇವತ್ತಿನ ರಾಜಕೀಯ ವ್ಯವಸ್ಥೆಯೊಳಗೆ ಎಫಿಷಿಯೆನ್ಸಿ, ಕಾಂಪಿಟೆನ್ಸ್, ಯೋಗ್ಯತೆ ಪ್ರಾಮಾಣಿಕತೆ, ದಕ್ಷತೆ ಇವುಗಳನ್ನು ಆಧರಿಸಿ do we put people in position? ನಾನು ಹೇಳುವುದೇನೆಂದರೆ ತಾವು ಟ್ರೆಜರಿ ಬೆಂಚ್ ಸದಸ್ಯರಾಗಿ ಡಿಫೆಂಡ್ ಮಾಡುವಾಗ ಹೇಳುವ ಮಾತು ಔಪಚಾರಿಕವಾಗಿ ಬೇರೆ. ನಾನು ಅಕಾಡೆಮಿಕ್ ಇಂಟರೆಸ್ಟ್‌ಗೆ ಕೇಳುತ್ತಿದ್ದೇನೆ. Honestly, subjecting you and to self - introspection,do you agree with me that it is only a formality that you speak?

SRI M.P. PRAKASH : Sir, I will certainly disagree with my friend however laudable his intentions may be.

ನಾನು ಒಂದು ವಿಷಯ ಪ್ರಸ್ತಾಪ ಮಾಡುತ್ತೇನೆ. ಅಕಾಡೆಮಿಕ್ ಇಂಟರೆಸ್ಟ್‌ನಲ್ಲಿ ಚರ್ಚೆ ಮಾಡಬೇಕೆಂದು ಈ ವಿಚಾರದಲ್ಲಿ ಶೈಕ್ಷಣಿಕವಾಗಿ ಕಲಿಯಬೇಕು ತಿಳಿದುಕೊಳ್ಳಬೇಕೆನ್ನುವ ಕಾರಣಕ್ಕೆ ಎಂದು ಮಾತನಾಡುತ್ತಿದ್ದೇನೆ. ಈಗ ಒಂದು ವಿಷಯವನ್ನು ತಮ್ಮ ಮುಂದೆ ಇಡುತ್ತೇನೆ. ಈ ವ್ಯವಸ್ಥೆ ಏನಾಗಿದೆ ಎನ್ನುವುದು ಬೇರೆ ವಿಷಯ ಅದರಲ್ಲಿ ನಾವೇ ಅರ್ಹರು, ಇನ್ನೊಬ್ಬರು ಅನರ್ಹರು ಅದರ ವಿಚಾರಗಳು ಬೇರೆ. ಆದರೆ ಇಲ್ಲಿ ಬಂದಿರತಕ್ಕಂಥಾದ್ದು, ಮಾನ್ಯ ಶ್ರೀರಾಮರೆಡ್ಡಿ

ಯವರನ್ನು ಬಂದು ಕುಳಿತುಕೊಳ್ಳಿ ಎಂದು ಏಕೆ ಹೇಳಿದೆ ಎಂದರೆ "ನಾವು ಕೆಲವು ಉತ್ತರ ಕೊಡುತ್ತೇವೆ ನಿಮ್ಮಿಂದ ಕಲಿಯಬೇಕಾದ್ದು ಬೇಕಾದಷ್ಟಿದೆ. ತಾವು ಕೇಳಿಕೊಳ್ಳಿ" ಎಂದು ಕರೆದೆ ಅಷ್ಟೆ, ಇನ್ನು ಬೇರೆ ಕಾರಣಕ್ಕಾಗಿ ಕರೆಯಲಿಲ್ಲ. ಇದರಲ್ಲಿ ಏನೂ ತಪ್ಪಿಲ್ಲ. ಎಲ್ಲರೂ ಒಬ್ಬರಿಗೊಬ್ಬರು ಕಲಿಯೋಣ. ನಿಮ್ಮಿಂದ ನಾವು, ನಮ್ಮಿಂದ ನೀವು ಎಲ್ಲರಿಗೂ ಕಲಿಯೋಣ. ಇಲ್ಲಿ ಬಂದಿರತಕ್ಕಂಥ ಪ್ರಶ್ನೆ ನಮ್ಮ ಶಾಸಕರಿಗೆ ಸ್ಥಾನಮಾನವನ್ನು ಕಲ್ಪಿಸಿ ಕೊಡಬೇಕು ಎನ್ನತಕ್ಕಂಥಾದ್ದೇ ಉದ್ದೇಶ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಿರಿಯರು, ಅಲ್ಲಿ ಡಿಸ್‌ಕ್ವಾಲಿಫಿಕೇಷನ್ ಆಗಿ ಸೋನಿಯಾ ಗಾಂಧಿಯವರು ರೆಸಿಗ್ನೇಷನ್ ಕೊಟ್ಟ ತಕ್ಷಣವೇ, ಚುನಾವಣೆಯಲ್ಲಿ ಅವರು ಗೆದ್ದು ಬಂದ ತಕ್ಷಣ ಲೋಕಸಭೆಯನ್ನು ತತ್‌ಕ್ಷಣವಾಗಿ ಕರೆಯಬೇಕಾದಂತಹ ಅವಶ್ಯಕತೆ ಏನಿತ್ತು? ಕರೆಯಬೇಕಾ ದಂತಹ ಅವಶ್ಯಕತೆ ಅವರಿಗೆ ಇತ್ತು. ಏಕೆ? ಕಾಂಗ್ರೆಸ್‌ನಿಂದ 40 ಜನ ಎಂಪಿ ಗಳಾಗಿರತಕ್ಕಂಥವರು ಇಂತಹ ಲಾಭದಾಯಕ ಹುದ್ದೆಗಳಲ್ಲಿದ್ದರು.

(ಗೊಂದಲ)

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಪಾಯಿಂಟ್ ಆಫ್ ಆರ್ಡರ್ ಸಾರ್ 40 ಜನ ಸಂಸತ್ ಸದಸ್ಯರು ಏನಿದ್ದರು ಅವರು ಕಾಂಗ್ರೆಸ್‌ನವರಲ್ಲ, ಹತ್ತು ಬಿಜೆಪಿಯವರು ಇದ್ದರು, ಕಮ್ಯುನಿಷ್ಟ್‌ನವರು ಇದ್ದರು, ಬೇರೆ ಬೇರೆ ಪಕ್ಷದವರು ಇದ್ದರು. 40 ಜನ ಕಾಂಗ್ರೆಸ್ ಎಂಪಿಗಳಲ್ಲ. ಇದು ತಪ್ಪು ಮಾಹಿತಿ.

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಇಲ್ಲೇನೂ ಸಮಸ್ಯೆ ಉದ್ಭವವಾಗಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಮ್ಮ ಗಮನಕ್ಕೆ ಒಂದು ವಿಚಾರವನ್ನು ತರುವುದಕ್ಕೆ ಇಷ್ಟಪಡುತ್ತೇನೆ, ಏಕೆಂದರೆ ನಮ್ಮ ಗೆಳೆಯರು ನಮ್ಮನ್ನು ತಪ್ಪು ತಿಳಿದು ಕೊಳ್ಳುವುದು ಬೇಡ. ಲೋಕಸಭೆಯ ಅಧಿವೇಶನಗಳು ಕ್ಯಾಲೆಂಡರ್ ಪ್ರಕಾರ ನಿರ್ದಿಷ್ಟವಾಗಿರುತ್ತದೆ. ಇಂತಿಂತಹ ತಾರೀಖಿಗೆ ಲೋಕಸಭೆ ಸೇರಬೇಕು ಎಂದು ಆಗಿರುತ್ತದೆ. No emergent session was convened. Programme of Lok Sabha was also scheduled. ಇಲ್ಲಿ ಹಾಗೆ ಆಗಲಿಲ್ಲ ಎಂದು ಹೇಳಿದೆ.

(ಗೊಂದಲ)

ಶ್ರೀ ಡಿ.ಕೆ. ಶಿವಕುಮಾರ್ : ಮುಂದೆ ಯಾವಾಗ ಲೋಕಸಭೆ ಕರೆಯುತ್ತಾರೆಂದು ಲಾಸ್ಟ್ ಡೇ ಅನೌನ್ಸ್ ಮಾಡುತ್ತಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಅಲ್ಲಿ ಪ್ರಾಬ್ಲಂ ಇತ್ತು ಎನ್ನುವುದರ ಜೊತೆಗೆ ಕರ್ನಾಟಕದಲ್ಲಿ ಅಂತಹ ತುರ್ತು ಅವಶ್ಯಕತೆ ಇರುವುದಿಲ್ಲ. Because, already Bill is there. 89 ಮತ್ತು 91 ಅಮೆಂಡ್ ಮೆಂಟ್ ಪ್ರಕಾರ ಇಲ್ಲಿ ಎಲ್ಲವೂ ಎಗ್ಸಂಪ್ಟ್ ಆಗಿಬಿಟ್ಟಿದೆ. ಎಮರ್ಜೆನ್ಸಿ ಸೆಕ್ಷನ್ ಕರೆಯುವಂತಹ ಪರಿಸ್ಥಿತಿ ನಿರ್ಮಾಣವಾಗಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಇಲ್ಲಿ ಯಾವ ರೀತಿ ಕಾನೂನು ಇತ್ತು, ಅಲ್ಲಿ ಕೂಡ ಕಾನೂನು ಇತ್ತು. ಆದರೆ ಅಲ್ಲಿ ಒಂದು ತುರ್ತಾದಂತಹ ಪರಿಸ್ಥಿತಿ ಇತ್ತು. ಒಂದು ಅವರಿಗೆ ಅದೃಷ್ಟ ಏನೆಂದರೆ ಮಾನ್ಯ ರಮೇಶ್ ಕುಮಾರ್ ಅವರು ಹೇಳಿದಂತೆ ಕ್ಯಾಲೆಂಡರ್ ಆಫ್ ಇವೆಂಟ್ಸ್ ಹಾಕಿದ್ದರು. ವಿಶೇಷ ಅಧಿವೇಶನವನ್ನು ಇದಕ್ಕಾಗಿ ಕರೆದಿರಲಿಲ್ಲ. ಆದರೆ ನಾವು ಈಗ ಕರೆದಿರುವುದಕ್ಕೆ ಕಾರಣ ಜಾರ್ಖಂಡ್‌ನಲ್ಲಿ ಆಯಿತು, ಉತ್ತರ ಪ್ರದೇಶದಲ್ಲಿ ಆಯಿತು. ಮುಂದೆ ಬರತಕ್ಕಂಥ ಸಂದರ್ಭಗಳಲ್ಲಿ ಇಲ್ಲಿಯೂ ಕೂಡ ಅನೇಕ ಶಾಸಕರುಗಳು ಇದ್ದಾರೆ, ಅವರು ಕೋ-ಆಪರೇಟಿವ್ ಅಪೆಕ್ಸ್ ಬಾಡಿಯೊಳಗೆ ಅಧ್ಯಕ್ಷರಾಗಿದ್ದಾರೆ. ಹಾಗೂ ಸದಸ್ಯರಾಗಿದ್ದಾರೆ. ಅಂತಹವರ ವಿರುದ್ಧ ಯಾರಾದರೂ ಕೂಡ ದುರುದ್ದೇಶದಿಂದ ಅರ್ಜಿ ಕೊಡಬಹುದು. ಅವರ ಶಾಸಕತ್ವವನ್ನು ಅನರ್ಹಗೊಳಿಸಿ ಎನ್ನುವುದನ್ನು ತರಬಹುದು. ಆ ಕಾರಣಕ್ಕಾಗಿ ಅವರ ಹೆಸರನ್ನು ನಾನು ಹೇಳಬೇಕಾದ್ದಂತಾದ್ದು ಏನಿಲ್ಲ. ಇವತ್ತು ಶಾಸನ ಸಭೆಯಲ್ಲಿ ಅನೇಕರು ಶಾಸಕರುಗಳು ಜಿಲ್ಲಾ ಬ್ಯಾಂಕ್‌ಗಳಲ್ಲಿ ಅಧ್ಯಕ್ಷರಾಗಿದ್ದಾರೆ. ಅಪೆಕ್ಸ್ ಬ್ಯಾಂಕುಗಳ ಅಧ್ಯಕ್ಷರಾಗಿದ್ದಾರೆ. ರಾಷ್ಟ್ರೀಯ ಅಪೆಕ್ಸ್ ಬ್ಯಾಂಕುಗಳ ಅಧ್ಯಕ್ಷರಾಗಿದ್ದಾರೆ. ಆದುದರಿಂದ ಆ ರೀತಿ ಆಗಿರುವಂತಹ ನಿರ್ದೇಶಕರುಗಳೂ ಕೂಡ ಅನರ್ಹರಾಗಬಹುದು ಎಂದೇಳಿ ತಕರಾರು ಮಾಡಿ ಯಾರಾದರೂ ಕೊಟ್ಟರೆ ಅವರಿಗೆ ಅಪಾಯವಾಗಬಹುದು ಎನ್ನುವ ಕಾರಣಕ್ಕಾಗಿ ನಾವು ಈ ಒಂದು ತುರ್ತು ಅಧಿವೇಶನವನ್ನು ಕರೆದಿದ್ದೇವೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆಲ್‌ರೆಡಿ ಕರ್ನಾಟಕದಲ್ಲಿ ಇದೆ ಅದು.

ಶ್ರೀ ಎಂ.ಪಿ. ಪ್ರಕಾಶ್ : ಇದೆ ಸಾರ್. ತಾವು ಪ್ರತಿ ಶಬ್ದಕ್ಕೆ ಹೀಗೆ ಆಕ್ಷೇಪಣೆ ಮಾಡಿದರೆ ಹೇಗೆ? ತಾವು ಬರೆದುಕೊಳ್ಳಿ, ಸ್ಪಷ್ಟೀಕರಣ ಸಂದರ್ಭದಲ್ಲಿ ಹೇಳಿ ನಾನು ಹೇಳುತ್ತೇನೆ. ಕಾನೂನಿನಲ್ಲಿ ಸ್ಪಷ್ಟತೆ ಇರಬೇಕು ಎನ್ನುವುದು ಮೊದಲನೇ ಅಪೇಕ್ಷಣೀಯವಾದಂತಹ ವಿಚಾರ. There should not be any ambiguity and it should be specific.ಅದು ಬಹಳ ನಿರ್ದಿಷ್ಟವಾಗಿರಬೇಕು ಎನ್ನುವ ಕಾರಣಕ್ಕೆ ಡೆಫನೇಷನ್ ಕಾಲಂನಲ್ಲಿ ಕೊಟ್ಟಿರತಕ್ಕಂಥ ಕಮಿಟಿ statutorily or

otherwise constituted ಎನ್ನತಕ್ಕಂಥ ಮಾತನ್ನು ಹೇಳಿ annibus ಆಗಿ ಎಲ್ಲಾ ತೆಗೆದುಕೊಳ್ಳುವಾಗ ಇದನ್ನು ಕೂಡ ಸೇರಿಸಿ ಸ್ಪೆಸಿಫಿಕ್ ಆಗಿ ಹೇಳುವುದರಿಂದ ಯಾವ ತಪ್ಪೂ ಇಲ್ಲ, ಯಾವ ಅಚಾತುರ್ಯ ಕೂಡ ಆಗುವುದಿಲ್ಲ. ಅನೇಕ ಸಂದರ್ಭದಲ್ಲಿ ಕಾನೂನನ್ನು ಸ್ಪಷ್ಟೀಕರಣಗೊಳಿಸುವುದರ ಮೂಲಕವಾಗಿ ಅದಕ್ಕೊಂದು ನಿರ್ದಿಷ್ಟ ಸ್ವರೂಪ ಬರುತ್ತದೆ. ನಿರ್ದಿಷ್ಟ ಸ್ವರೂಪ ಬಂದಾಗ ನ್ಯಾಯಾಂಗ ಇದರ ಬಗ್ಗೆ ಯಾವುದೇ ತರವಾದಂತಹ ತೀರ್ಮಾನ ತೆಗೆದುಕೊಳ್ಳುವಾಗ ಕಾನೂನು ಉದ್ದೇಶವನ್ನು ಅದು ಗ್ರಹಿಸಿಕೊಡುತ್ತದೆ. ಈ ದೃಷ್ಟಿಯಿಂದ ನಮ್ಮ ಕಾನೂನನ್ನು ತಂದಿತರತಕ್ಕಂಥಾದ್ದು ಅವರು ಹೇಳಿದಂತೆ 16 ದಿವಸದ ಮೇಲೆ ತರಬಹುದಾಗಿತ್ತಲ್ಲಾ ಎಂದರೆ ಹೇಗೆ? 16 ದಿವಸದ ಮೇಲೆ ತಂದ ತಕ್ಷಣವೇ ತುರ್ತು ಪರಿಸ್ಥಿತಿ ಹೊರಟು ಹೋಗಿ ಬಿಡುತ್ತಿತ್ತಾ? ಮತ್ತೆ ಆಗ ಬಹಳ ಅವಶ್ಯಕತೆ ಇರುತ್ತಿತ್ತಾ? ಆಗ ಈ ಕಾನೂನು ಇರಲಿಲ್ಲವಾ? ಮತ್ತೆ ಏಕೆ ತರಬೇಕಾಗಿತ್ತು? ನನ್ನನ್ನು ವಿತ್ತಂಡವಾದ ಎಂದು ಅವರು ಕರೆದರು. ಸನ್ಮಾನ್ಯ ಉಪಾಧ್ಯಕ್ಷರೆ, ಸ್ಪೀಕರ್ ಎನ್ನುವಂತಹ ಒಬ್ಬ ವ್ಯಕ್ತಿ ಶಾಸಕನಾದಾಗ ಮಾತ್ರ ಸ್ಪೀಕರ್ ಆಗುತ್ತಾನೆ ಎನ್ನುವುದು ನಿಜ. ಅದೇ ರೀತಿ ಸೋಮನಾಥ ಚಟರ್ಜಿಯವರೂ ಕೂಡ ಲೋಕಸಭಾ ಸದಸ್ಯರಾದ ಕಾರಣಕ್ಕೆ ಅವರು ಸ್ಪೀಕರ್ ಆದರು. ಆದರೆ ಅವರು ಅನರ್ಹತೆಗೆ ಒಳಗಾಗುತ್ತಿದ್ದರು. ಏಕೆ ಅನರ್ಹತೆಗೆ ಒಳಗಾಗುತ್ತಿದ್ದರು? ಅದಕ್ಕಾಗಿ ಸ್ಪೆಸಿಫಿಕ್ ಆಗಿ ಈ ಒಂದು ಅಮೆಂಡ್‌ಮೆಂಟ್‌ನಲ್ಲಿ Shanthinikethan Development Authority is a body constituted under the West Bengal Town and Country Planning Development Act, 1971, West Bengal Act, 1913/1979. ಎನ್ನುವುದನ್ನು ಸ್ಪೆಸಿಫಿಕ್ ಆಗಿ ಬರೆದರು. ಏಕೆ ಬರೆದರು ಎಂದರೆ ಇಲ್ಲಿ ನಾಳೆ ಉಪಾಧ್ಯಕ್ಷರಾಗಿ ಇರುವಂತಹ ತಾವು, ನಿಮ್ಮ ಕಾರ್ಯಕ್ಷಮತೆಯನ್ನು ಉಪಯೋಗಿಸಿಕೊಳ್ಳಬೇಕು ಎಂದು ನಾಳೆ ಸರ್ಕಾರ ಯಾವುದಕ್ಕಾದರೂ ನಿಮ್ಮನ್ನು ನೇಮಕಾತಿ ಮಾಡುತ್ತದೆ. ಈ ರೀತಿ ನೇಮಕಾತಿ ಮಾಡಿದತಕ್ಷಣ ನೀವು ಅನರ್ಹರಾಗುತ್ತೀರಿ.ಸ್ಪೀಕರಿಗೂ ಕೂಡ ಅಂತಹ ಗುರುತರವಾದಂತಹ ಹುದ್ದೆಯನ್ನು ಕೊಡಬಹುದು. ಮಾನ್ಯ ಸೋಮನಾಥ ಚಟರ್ಜಿಯವರು 20 ವರ್ಷಗಳಿಗಿಂತ ಮುಂಚಿತವಾಗಿ ಅಲ್ಲಿ ಇರತಕ್ಕಂಥವರು. ರವೀಂದ್ರ ನಾಥ್ ಟಾಗೂರ್‌ರವರು ಸ್ಥಾಪನೆ ಮಾಡಿದಂತಹ ಈ ಒಂದು ವಿಶ್ವವಿದ್ಯಾಲಯಕ್ಕೆ ಅಕಾಡೆಮಿಕ್ ಆಗಿ ಮತ್ತು ಈ ವಿಚಾರಗಳಲ್ಲಿ ಸಂಪೂರ್ಣವಾಗಿ ಪರಿಪೂರ್ಣತೆ ತರುವಂತಹ ಒಂದು ವಿದ್ಯಾಸಂಸ್ಥೆಗೆ ಸಂಬಂಧಪಡುವಂತಹ ಅಲ್ಲಿಯ ಪ್ರಾಧಿಕಾರವನ್ನು ಸಂಪೂರ್ಣವಾಗಿ ಹತೋಟಿಗೆ

ಇಟ್ಟುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಅವರನ್ನು ನೇಮಕಾತಿ ಮಾಡಿರತಕ್ಕಂಥಾದ್ದು. ಅವರ ನೇಮಕಾತಿ ಆಗಿದೆ ಎನ್ನುವ ಕಾರಣಕ್ಕಾಗಿ ಸುಪ್ರೀಂಕೋರ್ಟ್‌ನವರು ಜಯಾಬಚನ್ ಜಡ್ಜ್ ಮೆಂಟ್‌ನಲ್ಲಿ ಏನು ಹೇಳಿದರು? The moment it becomes receivable it attracts the disqualification clause,ಎನ್ನುವಂತಹ ಮಾತನ್ನು ಹೇಳಿದರು. ಅಲ್ಲಿವರೆಗೆ ಕೂಡ ಯಾವುದೇ court receivable also become a part of it, ಎನ್ನುವಂತಹ ಮಾತನ್ನು ಹೇಳಿರಲಿಲ್ಲ. ಹಿಂದೆ ಎರಡು ಮೂರು ಸಂದರ್ಭದಲ್ಲಿ ಹೇಳಿದ್ದರೂ ಕೂಡ, even a mere entitlement, it automatically becomes attracted.

ಶ್ರೀ ಜೆ.ಸಿ. ಮಾಧುಸ್ವಾಮಿ : ಸಾರ್, ಈ ಬಿಲ್, holding the Deputy Speakers office ಎಂಎಲ್‌ಎ ಡಿಸೆಕ್ವಾ ಲೆಫೈ ಆಗಬಾರದು ಎಂದು ಎಗ್ಸಂಪ್ಟ್ ಮಾಡುತ್ತಿರುವುದು ನೀವು. ತಾವು ಸ್ವಲ್ಪ ಈ ಕಡೆ ನೋಡಬೇಕು ಯಾವ್ಯಾವ ಆಫೀಸ್‌ಗಳನ್ನು exempts ಮಾಡಿದ್ದೀರಿ ಪ್ಲೀಸ್ ಓದಿ ಸಾರ್ ನೀವು. ಆ ಪೋಸ್ಟ್‌ಗೆ ಹೋದವರು ಎಂಎಲ್‌ಎ ಗಿರಿಯಿಂದ ಡಿಸ್‌ಕ್ವಾಲಿಫೈ ಆಗಬಾರದು ಎಂದಿದೆ. ಡೆಪ್ಯೂಟಿ ಸ್ಪೀಕರ್ ಬೇರೆ ಕಡೆ ಇದ್ದು ಡಿಸ್ ಕ್ವಾಲಿಫೈ ಆಗುವುದು, courtbasically as a Member of the House, ನಾವು ಹೇಳುತ್ತಿರುವುದೇನೆಂದರೆ ಆ ಪೋಸ್ಟ್‌ಗೆ ಕುಳಿತುಕೊಂಡರೆ ಡಿಸ್ ಕ್ವಾಲಿಫಿಕೇಷನ್ ಎಗ್ಸಂಪ್ಟ್ ಮಾಡುತ್ತೇವೆ ಎಂದು ಹೇಳಿದ್ದೀರಿ ನೀವು.

ಶ್ರೀ ಎಂ.ಪಿ. ಪ್ರಕಾಶ್ : ಲೋಕಸಭೆಯಲ್ಲಿ ಇರುವಂತಹ ಸ್ಪೀಕರ್ ಅವರು ಡಿಸ್ ಕ್ವಾಲಿಫೈ ಆಗುತ್ತಾರೆ ಎನ್ನುವ ಆತಂಕ ಏಕೆ ಉಂಟಾಯಿತು?

SRI J.C. MADHUSWAMY : He will be disqualified from the post of MP ಪಾರ್ಲಿಮೆಂಟ್ ಮೆಂಬರ್ ಶಿಫ್ ಹೋಗುತ್ತದೆ ಅವರಿಗೆ ಆಟೋಮೆಟಿಕಲ್ ಸ್ಪೀಕರ್‌ಶೀಫ್ ಹೋಗುತ್ತದೆ ಅವರಿಗೆ

SRI M.P. PRAKASH : It is not like that; It is not like that constitutional deadlock.

(ಗೊಂದಲ)

ಶ್ರೀ ಬಸವರಾಜ್ ಹೊರಟ್ಟಿ : ನೋಡಿ ನೀವು 178 ಓದಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಸೋಮನಾಥ ಚಟರ್ಜಿಯವರನ್ನು ಸ್ಪೀಕರ್ ಎಂದೇಳಿ ಅರ್ಹತೆ ಮಾಡಿದ್ದಾರೋ ಅಥವಾ ಲೋಕಸಭೆ ಸದಸ್ಯರು ಎನ್ನುವ ಕಾರಣಕ್ಕೆ ಅವರನ್ನು ಅನರ್ಹತೆ ಮಾಡಿದ್ದಾರೋ ಎಂದು ಹೇಳಿ. ಅವರು ಇನ್ನೂ ಅನರ್ಹತೆ ಹೊಂದಿಲ್ಲ ಲೋಕಸಭೆ ಸದಸ್ಯರಾಗಿ

ಅನರ್ಹರು ಎಂದೇ ಹೊರತು, ಸ್ಪೀಕರ್ ಆಗಿ ಅನರ್ಹರು ಎಂದಲ್ಲ ಪ್ರಶ್ನೆ ಇರತಕ್ಕಂಥಾದ್ದು. It is no way cocerned.

ಶ್ರೀ ಎಂ.ಪಿ. ಪ್ರಕಾಶ್ : ನೀವು ನಾನು ಹೇಳುವಂತಹ ವಾದವನ್ನು ಒಪ್ಪದೇ ಇರಬಹುದು. ದಯವಿಟ್ಟು ನನಗೆ ಅವಕಾಶವನ್ನು ಕಲ್ಪಿಸಿಕೊಡಿ. ನಾನು ಏನು ಹೇಳುತ್ತೇನೆಂದರೆ ಅವರು ಸಂಸದರಾಗಿ ಅನರ್ಹತೆ ಪಡೆದುಕೊಂಡು ಅವರು ಹೊರಟು ಹೋಗಿಬಿಡುತ್ತಾರೆ. ಸ್ಪೀಕರ್ ಪೊಜಿಷನ್‌ನಲ್ಲಿ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಯಾವಾಗ ಉಳಿಯುತ್ತಾರೆ.178ರ ಕೆಳಗೆ ಕಾನ್ಸ್‌ಟಿಟ್ಯೂಷನ್ ಒಳಗೆ ಏನು ಮಾಡಿದ್ದಾರೆ ಎಂದರೆ If the House is dissolved, the Speaker continues to be there.

SRI J.C. MADHU SWAMY : Yes, That is the point. He will not be the Member of the House.

5.30 PM

SRI M.P. PARKASH : That is why I am saying. The House is not going to be dissolved. Why are you asking in that fashion? you are an intelligent person. You are a lawyer by profession. He is going to be disqualified as a Member of the Parliment. But the House will not be dissolved. 178ರಲ್ಲಿ ಒಂದು ಪ್ರಾವಿಷನ್ ಕೊಡುತ್ತಾರೆ, ಅವರು ಮುಂದುವರೆಯ ಬೇಕು ಎಂದು If the House is dissolved then he continues.

SRI D.K. SHIVAKUMAR : That is the constitutional right given.

ಶ್ರೀ ಹೆಚ್. ಆಂಜನೇಯ : ಅವರು ಮಾತನಾಡಲು ಬಿಡಿ. ಏಕೆ ತೊಂದರೆ ಮಾಡುತ್ತೀರಿ?

(ಗೊಂದಲ)

ಶ್ರೀ ಹೆಚ್.ಡಿ. ಬಸವರಾಜು : ನಿಮ್ಮ ಅಭಿಪ್ರಾಯವನ್ನು ನಾನು ಕೇಳಿದ್ದೇನೆ ಎಂದು ಒಂದು ಹಂತದಲ್ಲಿ ಅವರು ಹೇಳಿದ್ದಾರೆ.

ಶ್ರೀ ಹೆಚ್. ಆಂಜನೇಯ : ಅವರು ಸಮಾಧಾನವಾಗಿ ಮಾತನಾಡಲು ಬಿಡಿ.

ಶ್ರೀ ಹೆಚ್.ಡಿ. ಬಸವರಾಜು : ಒಂದು ಹಂತದಲ್ಲಿ ಹಿರಿಯ ಸದಸ್ಯರಾದಂಥ ಎಂ.ಪಿ. ಪ್ರಕಾಶ್ ರವರು ಹೇಳಿದ್ದಾರೆ, ನಿಮ್ಮ ವಾದವನ್ನು ನಾನು ಕೇಳಿದ್ದೇನೆ,

ನನ್ನ ವಾದವನ್ನೂ ಕೇಳಿ. ಅವರ ವಾದ ಮಂಡನೆಗೆ, ಅವರ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಅವರಿಗೆ ಅವಕಾಶ ಸಿಗಬೇಕು. ಒಂದೊಂದು ಹೆಜ್ಜೆ ಹೆಜ್ಜೆಗೂ ನೀವು ಈ ರೀತಿ ನಿಂತುಕೊಂಡು ಅಡ್ಡಿಪಡಿಸಿದರೆ ಅವರು ತಮ್ಮ ವಾದವನ್ನು ಹೇಗೆ ಮಂಡಿಸಲಿಕ್ಕೆ ಸಾಧ್ಯವಿದೆ? ಅವರ ವಿಚಾರವನ್ನು ಮಂಡನೆ ಮಾಡಲಿಕ್ಕೆ ಸಾಧ್ಯವಿದೆ?

ಶ್ರೀ ಎಂ.ಪಿ. ಪ್ರಕಾಶ್ : ಅದರ ಜೊತೆಗೆ, the decorum of the House and dignity of the House ನಲ್ಲೂ ಕೂಡ one should not have a very derisive law for smile. You may not agree with that ನಾನು ಹೇಳಿದಂಥ ಅರ್ಗ್ಯೂಮೆಂಟ್ ನಿಮಗೆ ಹಿಡಿಸಲಿಲ್ಲವೆಂದರೆ ಅದಕ್ಕೆ derisive laughter ಕೊಡತಕ್ಕಂಥಾದ್ದು ಸರಿಯಾದುದಲ್ಲ. sIt is not in conformity with the dignity of the member of the House also. ನಾವೆಲ್ಲರೂ ಬಹಳ ಪರಿಣಿತರು ಎಂದು ಅಂದುಕೊಂಡುಬಿಟ್ಟಿದ್ದೇವೆ. ನನ್ನ ಮಟ್ಟಿಗೆ ನಾನೇ ಬೃಹಸ್ಪತಿ ಎಂದು ತಿಳಿದುಕೊಂಡು ಈ ಮಾತನ್ನು ಹೇಳುವಂಥಾದ್ದು ಆಗಿದ್ದರೂ ಕೂಡ ಅದನ್ನು ನೀವು ಒಪ್ಪದೇ ಇರಬಹುದು. Coming to Article 179 "Vacation and resignation or removal from the office of the Speaker and Deputy Speaker....." ಎಂದೆಲ್ಲಾ ಹೇಳಿ, "Provided further that, whenever the Assembly is dissolved, the Speaker shall not vacate his office until immediately before the first meeting of the Assembly after the dissolution" ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ, ಇಲ್ಲಿ ಸೋಮನಾಥ ಚಟರ್ಜಿಯವರು ಲೋಕಸಭಾ ಸದಸ್ಯತ್ವಕ್ಕೆ ಯಾವಾಗ ಅನರ್ಹರಾಗುತ್ತಾರೆ ಆಗ ಹೌಸ್ ಡಿಸಾಲ್ಟ್ ಆಗುವುದಿಲ್ಲ. ಆದ್ದರಿಂದ, ಅವರು ಸ್ಪೀಕರ್ ಆಗಿ ಮುಂದುವರೆಯುತ್ತಾರೆ ಎನ್ನತಕ್ಕಂಥಾದ್ದು ವಿತಂಡವಾದ. ಅಕಸ್ಮಾತ್ ಹೌಸ್ ಏನಾದರೂ ಡಿಸಾಲ್ವ್ ಆಯಿತು ಎಂದರೆ ಸೋಮನಾಥ ಚಟರ್ಜಿ will continue. ಇದು ಇಲ್ಲಿರತಕ್ಕಂಥ ಕಾನ್ಸ್‌ಟಿಟ್ಯೂಷನ್. ನಮ್ಮ ಅಲ್ಪ ಬುದ್ಧಿಗೆ ತಿಳಿದಿರತಕ್ಕಂಥ ಅಭಿಪ್ರಾಯವಿದು. ಇದರ ಬಗ್ಗೆ ಬೇರೆ ಅಭಿಪ್ರಾಯ ಇಟ್ಟುಕೊಂಡಿದ್ದರೆ ತಾವು ಇಟ್ಟುಕೊಳ್ಳಬಹುದು. ಅದಕ್ಕೆ ನಾವೇನೂ ಅಡ್ಡ ಬರುವುದಿಲ್ಲ. ಇಲ್ಲಿ ಅನೇಕ ಜಡ್ಜ್‌ಮೆಂಟ್‌ಗಳೂ ಕೂಡ ಇದೇ ತರಹದಲ್ಲಿ ಇವೆ. ಈ ಕಾನೂನನ್ನು ತರುವುದರ ಮೂಲಕವಾಗಿ ನಮ್ಮ ಸರ್ಕಾರ ಸುಭದ್ರವಾಗಿ ಇರಬೇಕು ಎಂದು ನಾವು ಯಾವುದೇ ಸಂಕೋಚದಿಂದ ಅಥವಾ ಮುಜುಗರದಿಂದ ಹೇಳುವುದಿಲ್ಲ. ಹಿಂದಿನ ಸರ್ಕಾರಗಳು, ಕೇಂದ್ರ ಸರ್ಕಾರ

ಅಥವಾ ಪ್ರತಿಯೊಂದು ಸರ್ಕಾರ ಮಾಡಿದಂತೆ ಸಂಸದೀಯ ವ್ಯವಸ್ಥೆಯಲ್ಲಿ ನಮ್ಮ ಪಕ್ಷದ ಶಾಸಕರುಗಳಿಗೆ ಜವಾಬ್ದಾರಿಗಳನ್ನು ಕೊಡತಕ್ಕಂಥಾದ್ದನ್ನು ಮಾಡುತ್ತೇವೆ. ಅದೇ ರೀತಿ ವಿರೋಧ ಪಕ್ಷದಲ್ಲಿಯೂ ತುಂಬಾ ಚೆನ್ನಾಗಿದ್ದಂಥವರು ಇದ್ದರೆ ಅವರೂ ಆಗಬಹುದು. ಉದಾಹರಣೆಗೆ ಹೇಳುವುದಾದರೆ, ನಮ್ಮ ಡಿ.ಆರ್. ಪಾಟೀಲ್‌ರವರು ಎಪಿಎಂಸಿ ಯಲ್ಲಿ ಉಪಾಧ್ಯಕ್ಷರಾಗಿದ್ದಾರೆ. ಅವರು ನಿಜವಾಗಿಯೂ ಕೂಡ ಕಳಕಳಿ ಇರತಕ್ಕಂಥ ಒಬ್ಬ ಮಾನ್ಯ ಸದಸ್ಯರು. ನಾಳೆ ನಮ್ಮಂಥವರು ಯಾರಾದರೊಬ್ಬರುಹೋಗಿ ಒಂದು ಅರ್ಜಿಯನ್ನು ಕೊಟ್ಟು ಅವರನ್ನು ಡಿಸ್‌ಕ್ವಾಲಿಫೈ ಮಾಡಿ ಎಂದರೆ ಹೇಗಾಗುತ್ತದೆ? ಹಾಗಾಗಿ ನಮಗೆ ಇದರ ಬಗ್ಗೆ ಅವಸರವಿದೆ.ಮಾನ್ಯ ಶ್ರೀನಿವಾಸಗೌಡರು ಇವತ್ತು ಇಫ್ಕೋದ ಅಧ್ಯಕ್ಷರಾಗಿದ್ದಾರೆ, ಮಾರ್ಕೆಟಿಂಗ್ ಫೆಡರೇಷನ್ನಿನ ಅಧ್ಯಕ್ಷರಾಗಿದ್ದಾರೆ. ನಮ್ಮಂಥವರು ಯಾರಾದರೂ ಅರ್ಜಿ ಕೊಟ್ಟು ಅದರಿಂದ ಡಿಸ್ ಕ್ವಾಲಿಫೈ ಆಗಬೇಕೆಂದರೆ, ಅದು ಅನ್ಯಾಯ. ಆ ಕಾರಣಕ್ಕಾಗಿಯೇ ಈಗ ನಾವು ಈ ಕಾನೂನನ್ನು ತಂದಿದ್ದೇವೆ. ಇದನ್ನು ತರಾತುರಿಯಲ್ಲಿ ಆತುರವಾಗಿ ತರಬೇಕಾದ ಅಗತ್ಯವಿರಲಿಲ್ಲ ಎನ್ನವುದು ನಿಮ್ಮ ಅಭಿಪ್ರಾಯ. ಈ ರೀತಿ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದು, ಅದು ಹೌದು. ನೀವು ಹೇಳಿದಂತೆ ಇದನ್ನು ನಿಮ್ಮ ಅನುಕೂಲಕ್ಕಾಗಿ ಮಾಡುತ್ತಿದ್ದೀರಿ ಎಂದರೆ, ಲೋಕಸಭೆಯಲ್ಲಿ ನೀವು ಇದನ್ನು ತಂದದ್ದು ಇದೇ ಕಾರಣಕ್ಕಾಗಿಯೇ. ಇಲ್ಲದಿದ್ದರೆ, ನಿಮ್ಮ 40 ಮಂದಿ ಸದಸ್ಯರು ಹೊರಟು ಹೊಗುತ್ತಿದ್ದರು. ಲೆಫ್ಟ್ ಪಾರ್ಟಿಯ 15 ಜನ ಸದಸ್ಯರು ಹೊರಟು ಹೋಗುತ್ತಿದ್ದರು. ಬಿಜೆಪಿಯಲ್ಲೂ ಕೂಡ 30 ಜನ ಸದಸ್ಯರು ಹೋಗುತ್ತಿದ್ದರು. ಆ ಕಾರಣಕ್ಕಾಗಿಯೇ, ಅಲ್ಲೂ ಕೂಡ ಇದನ್ನು ತಂದರು. ಆದರೆ ಅಲ್ಲಿ ಅವರು ವಿಶೇಷ ಅಧಿವೇಶನವನ್ನು ಕರೆದಿರಲಿಲ್ಲ ಅಷ್ಟೇ ಅದನ್ನು ಬಿಟ್ಟರೆ, ಉಳಿದ ಯಾವ ಪ್ರಶ್ನೆ ಕೂಡ ಇಲ್ಲಿ ಬರುವುದಿಲ್ಲ. ಆದ್ದರಿಂದ ಸ್ಪೀಕರ್ ಎನ್ನುವ ಪದವನ್ನು ಇಲ್ಲಿ ಸೇರಿಸಿರತಕ್ಕಂಥಾದ್ದು ಸಮಂಜಸವಾಗಿರತಕ್ಕಂಥಾದ್ದು ಮತ್ತು ಇನ್ನುಳಿದ ಕೋ-ಆಪರೇಟಿವ್ ಇನ್ಸ್ ಟಿಟ್ಯೂಷನ್ಸ್ ಎನ್ನುವುದನ್ನು ನೀವು ಸೇರಿಸಿದ್ದೀರಿ ಎನ್ನುವದಕ್ಕೆ ಎಲಾಬೊರೇಷನ್ ಇರಬೇಕು, ಸ್ಪಷ್ಟೀಕರಣ ಇರಬೇಕು, There should not be any scope for ambiguity ಎನ್ನುವ ಕಾರಣಕ್ಕಾಗಿಯೇ ಅದನ್ನು ಅವರು ರೀ-ಇಟರೇಟ್ ಮಾಡಿದ್ದಾರೆ, ರೀ-ಇಟರೇಟ್ ಮಾಡಿದ ತಕ್ಷಣ ಅದು ಕಾನೂನು ತಪ್ಪಾಗುತ್ತದೆ ಎಂದು ತಾವು ಭಾವಿಸಿಕೊಳ್ಳಬೇಕಾದಂಥ ಅಗತ್ಯವಿಲ್ಲ. ಕೆಲವು ಸದಸ್ಯರು ಮಾತನಾಡುವಾಗ ರಾಷ್ಟ್ರಪತಿಯವರು ವಾಪಸ್ಸು ಕಳುಹಿಸಿದ್ದಾರೆ ಎನ್ನುವ ಮಾತನ್ನು ಹೇಳಿದರು. He has not rejected the Bill. ಅವರು

ವಾಪಸ್ಸು ಕಳುಹಿಸಿದ್ದಾರೆ ಅಷ್ಟೇ. ವಾಪಸ್ಸು ಕಳುಹಿಸಿರತಕ್ಕಂಥ ಸಂದರ್ಭದಲ್ಲಿ ಬಹಳ ವಿಷಯಗಳು ನಮಗೆ ಗೊತ್ತಾಗಲಿಲ್ಲ. ನಮಗೆ ಮಾಧ್ಯಮದ ಮೂಲಕವಾಗಿ ತಿಳಿದಿದ್ದು ಏನೆಂದರೆ, the definition of Office of Profit should be one and the same with respect to all the States. ಇಲ್ಲದಿದ್ದರೆ ಒಬ್ಬರಿಗೊಬ್ಬರಿಗೆ ತಪ್ಪು ಅಭಿಪ್ರಾಯಗಳು ಸೃಷ್ಟಿಯಾಗುತ್ತವೆ ಎನ್ನತಕ್ಕಂಥಾದ್ದು ಒಂದು , ಅಲ್ಲದೇ, ಪೂರ್ವಾನ್ವಯವಾಗಬಾರದು ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಸುಪ್ರೀಂಕೋರ್ಟ್ ಅನೇಕ ಡಿಸಿಷನ್‌ಗಳೂ ಕೂಡ ಇವೆ. If you are taking away certain of the favours or other privileges by any enactment with a retrospective effect, " it is bad in law" ಎಂದು ಹೇಳುತ್ತಾರೆ. Suppose you confer other things, then it becomes a good law also.ಆದ್ದರಿಂದ ಇಲ್ಲಿ ನಾವು ಇವರಿಗೆ ಕೊಟ್ಟಿರತಕ್ಕಂಥ ಸವಲತ್ತುಗಳನ್ನು ನಾವು ವಾಪಸ್ಸು ತೆಗೆದುಕೊಳ್ಳುತ್ತೇವೆ ಪೂರ್ವಾನ್ವಯದಿಂದ ಎನ್ನುವ ಮಾತು ಏನಿದೆ ಅದು ತಪ್ಪಾಗುತ್ತದೆ ಎನ್ನುವ ಮಾತನ್ನೂ ಕೂಡ ಸುಪ್ರೀಂ ಕೋರ್ಟ್ ಹೇಳುತ್ತದೆ. ಅದೇ ದೃಷ್ಟಿಯಿಂದ ತಾವು ಯೋಚನೆ ಮಾಡಿದರೆ ಬಿಜೆಪಿಯ ವಕ್ತಾರರಾದ ಜಯಂತ ಮಲ್ಹೋತ್ರ ಕೇಸ್‌ನಲ್ಲಿ ಅವರು ರಾಜೀನಾಮೆ ಕೊಟ್ಟು ಚುನಾವಣೆಗೆ ನಿಂತರು ಆ ಸಂದರ್ಭದಲ್ಲೂ ಕೂಡ ಈ ವಿಚಾರ ಬಂದಾಗ It is a pre-election arrangement. Therefore, the Election Commission has no option and no opinion to tender. ಎಂದು ಹೇಳಿದರು. ಜಯಾ ಬಚ್ಚನ್‌ರವರ ಕೇಸ್‌ನಲ್ಲಿ ಏನು ಹೇಳಿದರು ಎಂದರೆ "It is receivables. Therefore, she is entitled to be attracted under Article 103(1) ಸೋನಿಯಾ ಗಾಂಧಿಯವರ ವಿಚಾರ ಬಂದಾಗ ಏನು ಹೇಳಿದರು. ಏಂದರೆ "She has already resigned the post, there is no question for us to intervene and then it becomes infructuous.Then, what happens to the money, emoluments and privileges ahe has received?

ಆ ಬಗ್ಗೆ ಏನನ್ನೂ ಹೇಳುವುದಕ್ಕೆ ಹೋಗಲಿಲ್ಲ. ಆದರೆ ಅದು ತಪ್ಪಾಯಿತು ಎಂದು ಗೊತ್ತಾದ ತಕ್ಷಣವೇ ಪಾರ್ಲಿಮೆಂಟಿನಲ್ಲಿ ಈ ಒಂದು ಕಾನೂನನ್ನು ತಂದರು. ಅದರಲ್ಲಿ ಏನು ಹೇಳುತ್ತಾರೆ ಎಂದರೆ: " The Office of the Chairman, President, Vice- President, Principal Secretary, Chair-person, Trustee by whatever name called of any Trust whether public or private not being a body specified in the schedule....."

because she was the Chairman and Managing Trustee of the Indira Gandhi Art Foundation, or something like that.

"The Officer of the Chairman or Dy. Chairman or the Principal Secretary, by whatever name called, any statutory or non-statutory bodies specifired in the schedule..."

ಈ ರೀತಿಯಾದಂಥ ಮಾತನ್ನು ಹೇಳುವುದಕ್ಕೆ ಕಾರಣವೇನಿತ್ತು ಎಂದರೆ ಮೊದಲು ಎಮಾಲ್ಯುಮೆಂಟ್‌ಗಳನ್ನು ತೆಗೆದುಕೊಂಡಿರತಕ್ಕಂಥವರು. ಅಂದರೆ ಕಾನೂನುಬದ್ಧವಾಗಿದೆ ಎಂದು ಪರಿಭಾಷಿಸಿಕೊಂಡು ನಾವು ಸಂಬಳವನ್ನು ತೆಗೆದುಕೊಂಡಿರುತ್ತೇವೆ, ಭತ್ಯೆಗಳನ್ನು ತೆಗೆದು ಕೊಂಡಿರುತ್ತೇವೆ. ಈಗ ನಮ್ಮಂಥವರನ್ನು ಅನರ್ಹಗೊಳಿಸಿದ ತಕ್ಷಣ, ನೀವು ತೆಗೆದುಕೊಂಡಿ ರುವುದನ್ನು ವಾಪಸ್ಸು ಕಟ್ಟಿ ಎನ್ನುವುದು ಆಗಬಾರದು ಎನ್ನತಂಥ ಕಾರಣಕ್ಕಾಗಿಯೇ ಅದು infructuors ಎಂದು ಹೇಳುತ್ತಾ, ಅದಕ್ಕೆ ಈ ಕಾನೂನಿನ ಮೂಲಕ ರಕ್ಷಣೆಯನ್ನು ಕೊಟ್ಟರು. ಇವತ್ತು ಇದೇ ಕಾರಣಕ್ಕಾಗಿಯೇ ನಾವು ಇಂಥ ಒಂದು ಕಾನೂನನ್ನು ಅನಿವಾರ್ಯವಾಗಿ ತರಲೇಬೇಕಾಗಿದೆ. ಇದರಲ್ಲಿ ಇಂಟರ್ನಲ್ ಕಾಂಟ್ರೋಡಿಕ್ಷನ್ಸ್ ಇದೆ ಎನ್ನುವ ಮಾತನ್ನು ಹೇಳಿದರು, ಅಂಥ ಇಂಟರ್ನಲ್ ಕಾಂಟ್ರೋಡಿಕ್ಷನ್ಸ್ ಏನೂ ಇಲ್ಲ. ಏಕೆಂದರೆ ಅಲ್ಲಿ ಪ್ರೆಸೆಡೆಂಟ್ ವಾಪಸ್ಸು ಕಳುಹಿಸುವಾಗ ಏನು ಹೇಳಿದರು. ಅಂದರೆ " You can not create two sets of members in the same parliamant" ಎನ್ನತಕ್ಕಂಥ ಮಾತನ್ನು ಹೇಳಿದರು. ಅಲ್ಲಿ ಏನು ಮಾಡಿದ್ದಾರೆ ಎಂದರೆ, ಲೋಕಸಭೆಯಲ್ಲಿರತಕ್ಕಂಥ ಸದಸ್ಯರು ಇಂಥ ಒಂದು ಲಾಭದಾಯಕ ಹುದ್ದೆಗಳನ್ನು ತೆಗೆದುಕೊಳ್ಳುವುದರ ಮೂಲಕ ಅವರು ಅನರ್ಹತೆಯಿಂದ ಹೊರಗುಳಿಯುತ್ತಾರೆ. ಆದರೆ ರಾಜ್ಯಸಭಾ ಸದಸ್ಯರಾದವರೇನಾದರೂ ರಾಜ್ಯ ಸರ್ಕಾರದಲ್ಲಿರತಕ್ಕಂಥ ಇಂಥ ಲಾಭದಾಯಕ ಹುದ್ದೆಗಳಲ್ಲಿ ಅಧ್ಯಕ್ಷರಾಗಿದ್ದಾರೆ ಅವರು ಅನರ್ಹಗೊಳ್ಳುತ್ತಾರೆ.ರಾಜ್ಯಸಭಾ ಸದಸ್ಯರಿಗೆ ಒಂದು ಮಾಪನ, ಲೋಕಸಭಾ ಸದಸ್ಯರಿಗೆ ಮತ್ತೊಂದು ಮಾಪನ ಇಡತಕ್ಕಂಥಾದ್ದು ಸರಿಯಾದುದಲ್ಲ. You cannot create two sets of members in the same Parliament ಎನ್ನುವ ಕಾರಣಕ್ಕಾಗಿ ಅವರು ಅದನ್ನು ವಾಪಸ್ಸು ಕಳುಹಿಸಿದರು. ರೆಟ್ರಾಸ್ಪೆಕ್ಟಿವಿಟಿ ಎನ್ನತಕ್ಕಂಥಾದ್ದರ ಬಗ್ಗೆ ಕೂಡ ಬೇಕಾದಷ್ಟು ಉದಾಹರಣೆಗಳು ನಮ್ಮ ಮುಂದೆ ಇವೆ. ಪೂರ್ವಾನ್ವಯ ಮಾಡಿದಿರಿ ಎನ್ನುವ ಕಾರಣಕ್ಕಾಗಿ, ಪೂರ್ವಾನ್ವಯ ಮಾಡುವುದು ತಪ್ಪು ಎನ್ನುವ ಪ್ರಶ್ನೆಯೂ ಬಂದಿಲ್ಲ. ಡೆಫನೀಷನ್ ಆಗಿರಬೇಕು ಎನ್ನುವುದಕ್ಕೆ ಕೇಂದ್ರ

ಸರ್ಕಾರದವರು ಇನ್ನೂ ಒಂದು ಯೋಚನೆಯನ್ನು ಮಾಡುತ್ತಿದ್ದಾರೆ, ಹಿರಿಯರಾದಂಥ ಸನ್ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರಿಗೆ ಈ ಎಲ್ಲಾ ವಿಚಾರಗಳು ಗೊತ್ತಿರುತ್ತದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಏಕೆಂದರೆ, ಕಾಂಗ್ರೆಸ್ಸಿನಲ್ಲಿ ಅಲ್ಲಿ ಏನು ನಡೆಯುತ್ತದೆ ಎನ್ನುವ ವಿಚಾರದಲ್ಲಿ ಹಿರಿಯರಾಗಿರತಕ್ಕಂಥ ಅವರ ಸಲಹೆಯನ್ನೂ ಕೂಡ ಕೇಂದ್ರದವರು ಪಡೆದಿರಬಹುದು ಎಂದು ಭಾವಿಸಿದ್ದೇನೆ ಅಥವಾ ಪಡೆಯದಿರಲೂಬಹುದು. ಈಗ ಅಲ್ಲಿ ಯಾವ ಪ್ರಶ್ನೆ ಬರುತ್ತದೆ ಎಂದರೆ, 111ರ ಕೆಳಗೆ ಮತ್ತೆ ಅವರಿಗೆ ವಾಪಸ್ಸು ಕಳುಹಿಸಬೇಕಾಗುತ್ತದೆ. ಪ್ರೆಡಸಿಡೆಂಟ್‌ರವರಿಗೆ ಇರತಕ್ಕಂಥ ಅಧಿಕಾರವೇನು? ನಮ್ಮ ಕಾನ್ಸ್ಟಿ ಟ್ಯೂಷನ್‌ಗೆ ಮೊರಾರ್ಜಿ ದೇಸಾಯಿಯವರ ಕಾಲದಲ್ಲಿ ಆದಂಥ ಅಮೆಂಟ್‌ಮೆಂಟ್ ಇದು. ಆ್ಯಕ್ಟಿಂಗ್ ಪ್ರೆಸಿಡೆಂಟ್ ಆಗಿದ್ದಂಥ ದಿವಂಗತ ಬಿ.ಡಿ. ಜತ್ತಿಯವರು, ಬಹುಮತದ ಅಭಿಪ್ರಾಯಕ್ಕೆ ಒಪ್ಪಿಗೆ ಕೊಡದೇ, ಅವರನ್ನು ಪ್ರಧಾನ ಮಂತ್ರಿಯಾಗಿ ಕರೆಯಲಿಲ್ಲ ಎನ್ನುವ ಸಂದರ್ಭದಲ್ಲಿ ಜಾರ್ಜ್ ಫರ್ನಾಂಡಿಸ್‌ರವರ ನೇತೃತ್ವದಲ್ಲಿ ರಾಷ್ಟ್ರಪತಿ ಭವನವನ್ನು ಮುತ್ತಿಗೆ ಹಾಕಿದರು. ಹಾಗೆ ಮುತ್ತಿಗೆ ಹಾಕಿದಂಥ ಸಂದರ್ಭದಲ್ಲಿ ಅವರು ಅಸೆಂಟ್ ಕೊಟ್ಟರು. ಅವರನ್ನು ಫ್ರೈಂ ಮಿನಿಸ್ಟರನ್ನಾಗಿ ಮಾಡಿದರು. ಆ ಸಂದರ್ಭದಲ್ಲಿ ಒಂದು ಅಮೆಂಡ್‌ಮೆಂಟನ್ನು ತಂದರು. Any advice tendered by the Council of Ministers is binding on the President. 111ರ ಕೆಳಗೆ ಈಗ ಅದನ್ನು ವಾಪಸ್ಸು ಕಳೂಹಿಸತಕ್ಕಂಥಾದ್ದಕ್ಕೆ ಅಲ್ಲಿ ಏನು ಹೇಳುತ್ತಾರೆಂದರೆ, "Assent to Bill" Article 111 of the Constitution of India:

"When a Bill has been passed by the Houses Parliament it shall be presented to the President who shall declare either that he assents the Bill or that he with holds assent thereon"

"Withholds" -he cannot a reject.

Further the Article says:

" Provided that the President may as soon as possible after the presentation to him of a Bill for assent, return the Bill if it is not a money bill to the House with a message requesting that they will reconsider the Bill or any specified provisions thereof, and in particular, will consider the desirability of introducing any such amendments as he may recommend in his message, and when a Bill

is so returned, the House shall reconsider the Bill accordingly, and if the Bill is passed again by the House with or without amendment and presented to the President for assent, the President shall not withhold assent therefrom". ಆದ್ದರಿಂದ, ಆತನ ಅಧಿಕಾರವನ್ನು ಸಂಪೂರ್ಣವಾಗಿ ಮೊಟಕು ಗೊಳಿಸಲ್ಪಟ್ಟಿದೆ. ಅವರು ಇದನ್ನು ತಿರಸ್ಕರಿಸಿಲ್ಲ. ಅದನ್ನು ವಾಪಸ್ಸು ಕಳುಹಿಸಿದ್ದಾರೆ. ವಾಪಸ್ಸು ಕಳುಹಿಸಿದಾಗ ಈಗ ಕಾಂಗ್ರೆಸ್ಸಿನ ಅಲ್ಲಿಯ U.P.A. ಸರ್ಕಾರದವರು ಏನು ಯೋಚನೆ ಮಾಡುತ್ತಿದ್ದಾರೆ? ಬಿ.ಜೆ.ಪಿಯವರು ಏಕೆ ವಿರೋಧ ಮಾಡಿದರೆಂದರೆ, ಎಡಪಕ್ಷದವರೂ ಕೂಡ ಅದನ್ನು ಪ್ರಸ್ತಾಪ ಮಾಡಿದ್ದಾರೆ. ಒಬ್ಬ ರಾಷ್ಟ್ರಪತಿ ಇದರ desirbilityವಿಚಾರದಲ್ಲಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದಾಗ ಅದಕ್ಕೆ ಕೊಡಬೇಕಾಗಿತಕ್ಕಂಥ ಮಾನ್ಯತೆ ಮತ್ತು ಘನತೆಯನ್ನು ಕೊಡಬೇಕಾಗುತ್ತದೆ. ಆದ್ದರಿಂದ ಅದನ್ನು ಯೋಚನೆ ಮಾಡಿ ಎನ್ನುವ ಮಾತನ್ನು ಹೇಳಿದರು. ಇಲ್ಲದೇ ಹೋದರೂ ಕೂಡ U.P.Aನ ಶ್ರೀ ಭಾರದ್ವಾಜ್ ರವರು he has gone on record as a Law Minister of union Government saying that he will present it under Article 111. Then the president has no other option to except give assent to that.ಈ ಎಲ್ಲಾ ಹಿನ್ನಲೆಯ ಕಾರಣಕ್ಕಾಗಿಯೇ ಅವರೂ ಕೂಡ ಒಪ್ಪಿರತಕ್ಕಂಥದ್ದು.

SHRI K.R. RAMESHKUMAR : Other, wise which other provision of the Constitution is there under 13 which the Union Law Minister can present the Bill? There is no alternative but for Article 111. Either way he has to present the Bill only under Article 111, Whatever the Honble Union Law Minister has said and gone on record is a matter of fact, There is other alternative. Whether the president sends it back not, in a given situation like this, there is no option.

SHRI M.P. PARKASH : There is an alternative. Whatever advice is tendered by the president, he can withdraw the Bill. If he wants to insist upon that the particular Bill as passed by the parliament, it should be accepted or assent has to be given, then Article 111 is left open. There is another alternative. If he wants to give respect to the presidents opinion or viwe, he can withdraw that

Bill. In accordance with the suggestions made by the president, he can incorporate those auggestions in the Bill and present it before the Parliament afresh denovo for discussion.

SHRI K.R. RAMESH KUMAR : Let me put it right again. If the Union Government which had piloted the Bill on the floor of the Lok Sabha intends to get the Bill through, then there is no option for them other than Article 111.

SHRI M.P. PRAKASH : They can withdraw.

SHRI K.R. RAMESH KUMAR : Withdrawal is a different thing I said if he intends getting the Bill passed, the only recourse..... is Article 111. With the observation of the Hon'ble President they would.... the observations and send it back.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಗವರ್ನರ್ ರವರು ಏನಾದರೂ reject comply ಮಾಡಿದರೆ ಅಥವಾ ವಾಪಸ್ಸು ಕಳುಹಿಸಿದರೆ ನೀವು withdraw ಮಾಡಿಕೊಳ್ಳುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ಹಾಗಲ್ಲ ಸರ್.

(ಅಡಚಣೆ)

SRI M. MALLIKARJUNA KHARGE : No, No, similar situation ಅಲ್ಲವೇ? Government of India ದವರು President of India ದವರಿಗೆ ಕಳುಹಿಸಿ......

ಶ್ರೀ ಬಿ.ಎಸ್. ಹೊರಟ್ಟಿ : ದಯಮಾಡಿ clarification ಕೇಳಿ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ವೇಳೆ ಈ Governor ರವರೂ ಕೂಡ examine ಮಾಡಿ ಜಾರ್ಖಂಡ್‌ನಲ್ಲಿ ಹೇಗೆ refuse ಮಾಡಿ ವಾಪಸ್ಸು ಕಳುಹಿಸಿದ್ದಾರೋ, ಹಾಗೇನಾದರೂ ಆ Bill ಅನ್ನು ಮಾಡಿ refuse ಪುನಃ ಅದನ್ನು ತರಬೇಕೆಂದು ಹೇಳಿದರೆ, ಏನಾದರೂ Withdraw ಮಾಡಿಕೊಳ್ಳುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್ : ನೀವು ಹೇಳಿದಂಥ insinuation ನಮಗೆ ಅರ್ಥವಾಗುತ್ತಿದೆ ಸರ್ ದಯಮಾಡಿ ನಾವು ಒಪ್ಪಿಕೊಳ್ಳುತ್ತೇವೆ. Governorರವರು ಏನು ಮಾಡಿಕೊಡುತ್ತಾರೆ ಎನ್ನವುದು ಮುಂದಿನ ವಿಷಯ ಒಂದು ವೇಳೆ ಹಾಗೆ ಬರುವುದಾಗಿದ್ದರೂ ಕೂಡ......

XX (ಅಡಚಣೆ)

SHRI M.P. PRAKASH : Sir I seriousely object There is explicit provision in our own procedure that the conduct or action of the Governor should not be discussed in this house.

(ಅಡಚಣೆ)

SHRI K.R. RAMESH KUMAR : Whether it is the action of the Governor or the conduct of a Judge, we don't disscuss the judgement. We are with our Leader and we are all of the same opinion.

ಶ್ರೀ ಎಂ.ಪಿ. ಪ್ರಕಾಶ್ : ನೋಡಿ, ಸತ್ಸಂಪ್ರದಾಯವನ್ನು ಪಾಲಿಸಿಕೊಂಡು ಬಂದಿದ್ದೇವೆ.

(ಅಡಚಣೆ)

SHRI K.R. RAMESH KUMAR : No question.

(ಅಡಚಣೆ)

ಶ್ರೀ ಎಂ.ಪಿ. ಪ್ರಕಾಶ್ : ಅಂಥ ಬಹಳ ಘನತೆವೆತ್ತಂಥ ಸ್ಥಾನಗಳ ಬಗ್ಗೆ ನಾವು ಇಲ್ಲಿ ಚರ್ಚೆ ಮಾಡಬಾರದು.

(ಅಡಚಣೆ)

ಶ್ರೀ ವೈಜನಾಥ ಪಾಟೀಲ್ : ..... ನಾವು ಇಲ್ಲಿ Governor ರವರ

(ಅಡಚಣೆ)

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಅಷ್ಟು ದೊಡ್ಡ ಸ್ಥಾನಮಾನದಲ್ಲಿತಕ್ಕಂಥವರು ಆ ಸ್ಥಾನಕ್ಕೆ ತಕ್ಕಂತೆ ಅವರು ನಡೆದುಕೊಳ್ಳದಿದ್ದಾಗ ಸಹಿಸಿಕೊಳ್ಳಬೇಕೆಂದೇನೂ ಇಲ್ಲ. ನಮ್ಮ ಅಭಿಪ್ರಾಯ ವ್ಯಕ್ತಪಡಿಸತಕ್ಕಂಥ ಸ್ವಾತಂತ್ರ್ಯ ನಮಗಿದೆ. ಈ ಸದನದ ಸದಸ್ಯರಾಗಿ ನಮ್ಮ ಅಭಿಪ್ರಾಯವನ್ನು ನಾವು ಹೇಳಿದ್ದೇವೆ. ಅದನ್ನು ಕಡತದಲ್ಲಿ ಬಿಡುತ್ತೇವೆ. ಅದರಿಂದ ಆಗಬಹುದಾದಂಥ ಪರಿಣಾಮಗಳನ್ನು ಎದುರಿಸುವುದಕ್ಕೂ ಕೂಡ ನಮ್ಮಲ್ಲಿ ನೈತಿಕ ಬಲ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ತಾವೇ Speaker ಆಗಿದ್ದಂಥ ಸಂದರ್ಭದಲ್ಲಿ ಕಾವೇರಿ ನ್ಯಾಯಾಧಿಕರಣ ತೆಗೆದುಕೊಂಡಿರತಕ್ಕಂಥ ವಿಚಾರದಲ್ಲಿ ತಮಿಳುನಾಡಿನಲ್ಲಿ ಇದ್ದಂಥ ಸರ್ಕಾರದವರು

(xx ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿರುತ್ತದೆ)

ಸದಸ್ಯರು ಅವರಿಗೆ ಕೆಲವು ಉಡುಗೊರೆಗಳನ್ನು ಕೊಟ್ಟರು ಎನ್ನುವ ವಿಷಯ ಬಂದಾಗ ಅವರು ನಡೆದುಕೊಂಡಿರತಕ್ಕಂಥ ನಡವಳಿಕೆಗಳ ಬಗ್ಗೆ ಮಾತ್ರ ಮಾತನಾಡಿ, ಉಡುಗೊರೆಗಳನ್ನು ಕೊಟ್ಟರು ಎಂದು you cannot attribute insinuation or motives to that particular person' ಎನ್ನತಕ್ಕಂಥದ್ದನ್ನು ತಾವೂ ಕೂಡ ಹೇಳಿದ್ದೀರಿ. ಆ ಕಾರಣಕ್ಕಾಗಿಯೇ ಈ ಸಂದರ್ಭದಲ್ಲಿ conduct of a person ವಿಚಾರವಾಗಿ ಮಾತನಾಡುವಾಗ ಅವರು ಸರಿಯಾದಂಥ ರೀತಿಯಲ್ಲಿ ಈ ತೀರ್ಮಾನಕ್ಕೆ ಬರಲಿಲ್ಲ, ಇಂಥ issue ನಲ್ಲಿ contradictory statement ಕೊಟ್ಟಿದ್ದಾರೆ, ಈ issue ಬೇರೆ, ಆ issue ಬೇರೆ, ಅದನ್ನು ಹೇಳಿ ಆದರೆ you cannot attribute, motives.

SRI K.R. RAMESH KUMAR : I was sitting in the Chair ಇದೇ ಸದನದಲ್ಲಿ ನಾವು Justice Saldhana ರವರು ಬೆಳಗಾಂನಲ್ಲಿ ಮಾಡಿದಂಥ ವ್ಯಾಖ್ಯಾನವನ್ನು ಮೊದಲ್ಗೊಂಡು ಅನೇಕ ವಿಚಾರಗಳನ್ನು ಮೂರು ದಿವಸಗಳ ಕಾಲ ಪುಂಖಾನುಪುಂಖವಾಗಿ ಚರ್ಚೆ ಮಾಡಿದ್ದೇವೆ. ಆ ಸಂದರ್ಭದಲ್ಲಿ ಶ್ರೀಮತಿ ಪ್ರಮೀಳಾ ನೇಸರ್ಗಿ was there. ಶ್ರೀ ಖರ್ಗೆಯವರು opposition leader ಆಗಿದ್ದರು ವಾಟಾಳ್ ನಾಗರಾಜ್‌ರವರು ಇದ್ದರು, ಶ್ರೀ ನಂಜೇಗೌಡರು ಇಲ್ಲಿದ್ದರು. We have asserted our right as Members of the House by taking care to see that the dignity of the judiciary was not affected. We did not make any efforts to forego our rights.

ಶ್ರೀ ಎಂ.ಪಿ. ಪ್ರಕಾಶ್ : ತಾವು ರೆಕಾರ್ಡ್ ತೆಗೆಯಿರಿ ಸರ್. ಶ್ರೀ ನಂಜೇಗೌಡರು ಈ ವಿಚಾರದಲ್ಲಿ ಚರ್ಚೆ ಮಾಡಿದಾಗ ಮಾನ್ಯ ಜೆ.ಹೆಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ನಿಮಗೆ ಈ ವಿಚಾರದಲ್ಲಿ Justice Ramaswamy ಯವರು Supreme court ನಲ್ಲಿ ಅವರ ಮೇಲೆ ಆಗಿರತಕ್ಕಂಥ ಅವ್ಯವಹಾರ ಮತ್ತು ಹಣಕಾಸಿನ ದುರುಪಯೋಗದ ಬಗ್ಗೆ ಆರೋಪ ಮಾಡಿದಾಗ 100 ಜನ parliament ಸದಸ್ಯರು ದಕ್ಷಿಣ ಭಾರತ ಉತ್ತರ ಭಾರತ ಎಂದು President of India ರವರಿಗೆ petition ಕೊಟ್ಟು impeachment ಕೊಟ್ಟು ಮಾಡಬೇಡಿ ಎಂದು ತೆಗೆದುಕೊಂಡಿರತಕ್ಕಂಥದ್ದೂ ಕೂಡ ತಮಗೆ ಗೊತ್ತಿದೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಯಾರು ಇಲ್ಲ ಎಂದವರು?

ಶ್ರೀ ಎಂ.ಪಿ. ಪ್ರಕಾಶ್ : ಅದಕ್ಕಾಗಿಯೇ ಹೇಳುತ್ತಿರುವುದು. ಈ ದೇಶದಲ್ಲಿ ಇಂಥ ಮಾತುಗಳನ್ನು ಹೇಳತಕ್ಕಂಥದ್ದು ಬಹಳ ಸುಲಭ. ಭ್ರಷ್ಟಾಚಾರಿಯಾಗಿರತಕ್ಕಂಥವರು ದಕ್ಷಿಣ ಭಾರತದವರು ಎನ್ನುವ

ಕಾರಣಕ್ಕಾಗಿಯೇ ಆತನನ್ನು impeachment ಮಾಡಬೇಡಿ ಎಂದು ಕೊಟ್ಟಿರತಕ್ಕಂಥ ಬಿಲ್ ಅನ್ನು ವಾಪಸ್ಸು ತೆಗೆದುಕೊಂಡಿರತಕ್ಕಂಥ ಉದಾಹರಣೆ ಕೂಡ ಈ Parliament ನಲ್ಲಿದೆ. ಆಗ ಮಾನ್ಯ ಜೆ.ಹೆಚ್. ಪಟೇಲರು ಉತ್ತರ ಕೊಟ್ಟಿರತಕ್ಕಂಥದ್ದು ಏನೆಂಬುದನ್ನು ಹೇಳಿದರೆ ಇಲ್ಲಿ ಅನೇಕ ಜನರಿಗೆ ಸ್ವಲ್ಪ ಮಟ್ಟಿಗೆ ಅಸಂತೋಷ ಆಗಬಹುದು. ಆ ಸಂದರ್ಭದಲ್ಲಿ ಅಂಥ ಭಾಷೆ ಬಳಸಬಾರದೆಂದು ಹೇಳಿದರು. ನೀವು ಇಂಥ ವಿಚಾರಗಳಲ್ಲಿ ಚಡ್ಡಿ ಹಿಡಿದು ಕುಸ್ತಿ ಮಾಡುತ್ತಿದ್ದೀರಿ ಎನ್ನುವ ಮಾತನ್ನು ಶ್ರೀ ನಂಜೇಗೌಡರು ಹೇಳಿದರು ಹೌದು ಚಡ್ಡಿ ಹಿಡಿದು ಮಾಡತಕ್ಕಂಥದ್ದು ಕುಸ್ತಿಯ ಅಖಾಡದಲ್ಲಿ ಅದು ಸರಿಯಾದುದ್ದಲ್ಲ ಅದು ಆಟಕ್ಕೆ ಸರಿಯಾದುದ್ದಲ್ಲ ಆದರೆ ನಿಮಗೆ ಚಡ್ಡಿಯೇ ಇಲ್ಲವಲ್ಲಾ ಇನ್ನೇನನ್ನು ಹಿಡಿಯಬೇಕು ಎಂದು ಹೇಳಿದರು. ಆದ್ದರಿಂದ ದಯವಿಟ್ಟು ಈ ಸದನದಲ್ಲಿ ಇಂಥ ಅನೇಕ ಪ್ರಸಂಗಗಳು ನಡೆದುಹೋಗಿವೆ. ಆ ಕಾರಣಕ್ಕಾಗಿ ಇಲ್ಲಿ ಇರುವ ಸೀಮಿತ ಉದ್ದೇಶ ಇರತಕ್ಕಂಥದ್ದು ಇಷ್ಟೇ ನಾವೇನು ಈ ಕಾನೂನನ್ನು ತಂದಿದ್ದೇವೆ. ಇದು ಬಹಳ ಸದುದ್ದೇಶದಿಂದ ತಂದಿರತಕ್ಕಂಥ ಕಾನೂನು ಆಗಿರುವುದರಿಂದ, ದಯವಿಟ್ಟು ಇದಕ್ಕೆ ಒಪ್ಪಿಗೆ ಕೊಡಬೇಕೆಂದು ನಾನು ವಿನಂತಿಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್) : ಮಾನ್ಯ ಉಪಾಧ್ಯಕ್ಷರೆ, ಈಗ ಈ bill ಅನ್ನು ಏನು urgent ಆಗಿ ತೆಗೆದುಕೊಂಡು ಬಂದಿದ್ದಾರೆ, ನಿಜವಾಗಿಯೂ ನನಗೆ ಬಹಳ ಸಂತೋಷವಾಗಿದೆ. ಏತಕ್ಕೆಂದರೆ. MLAಗಳೆಲ್ಲಾ ಬಹಳ Tension ಆಗಿಬಿಟ್ಟಿದ್ದರು. ಅಯ್ಯೋ ಸ್ವಾಮಿ. ನಮಗೆ Corporation board ಸಹ ಸಿಗುವುದಿಲ್ಲ. ಮಂತ್ರಿಗಳಂತೂ ಆಗುವ ಅವಕಾಸ ಸಿಕ್ಕಿಲ್ಲ. ಇದೂ ಸಹ ಹೋಗಿದೆ ಎನ್ನುವ ಒಂದು tension ನಲ್ಲಿದ್ದರು. So, tension ಎಲ್ಲಾ ಸ್ವಲ್ಪ relax ಆಗಿದೆ. ಇವರ tension ನಮ್ಮ ಮೇಲೆ ಬಂದಿದೆ. ನಮ್ಮ ಕ್ಷೇತ್ರದಲ್ಲಿ ಏನು ಹೇಳುತ್ತಾರೆಂದರೆ, ಅಷ್ಟೆ ಇವನು ಹೋಗುತ್ತಾನೆ next ಬರುವುದಿಲ್ಲ, Disqualify ಆಗಿಬಿಡುತ್ತಾನೆ, ಅದನ್ನು safety ಮಾಡಿಕೊಳ್ಳುವುದಕ್ಕೆ ಹೋಗಿದ್ದಾನೆಂದು ಜನ ಮಾತನಾಡಿಕೊಳ್ಳುತ್ತಾರೆ. ಮಾನ್ಯ ಎಂ.ಪಿ. ಪ್ರಕಾಶ್ ರವರು ಸರಿಯಾಗಿ ಮಾತನಾಡಿದರು. ಒಂದು ಕಡೆ ಬಹಳ ಗಂಭಿರವಾಗಿ ಇವರೆಲ್ಲಾ ಮಾಡುವುದೆಲ್ಲಾ ಕರೆಕ್ಟ್ ನಾವು ಇದೆಲ್ಲಾ ಮಾಡಲೇ ಬೇಕೆಂದು ಎಂದು ಹೇಳುತ್ತಾರೆ. ಇನ್ನೊಂದು ಕಡೆ, "The consequence of disqualification of members of legislatur on the ground of their holding an office of profit results in unnecessary expenditure and unforeseen financial burden upon the

state exchequer. In view of the recent developments in this regard.. ಇವರು ಪೋಸ್ಟ್‌ಗಳನ್ನಿಟ್ಟುಕೊಳ್ಳುವುದಕ್ಕೆಲ್ಲಾ ವೇಸ್ಟ್, ದುಡ್ಡು ವೇಸ್ಟ್, ಅನ್‌ವಾಂಟೆಡ್. ಎಲ್ಲಾ ಇದೆ. ಇದ್ದರೇನು? ರೀಸೆಂಟ್ ಡೆವಲಪ್‌ಮೆಂಟಿಗೋಸ್ಕರ ನಾವು ತಿದ್ದುಪಡಿ ಮಾಡಿ ಇವರಿಗೆ ಸೌಲಭ್ಯಗಳನ್ನು ಮಾಡೋಣವೆನ್ನುತ್ತಾರೆ. This is the reason what they have given here. ಅಂದಮೇಲೆ, ಇವರೇನೂ ಹೇಳುತ್ತಾರೆಂದರೆ, The proposed amendment will not only assist the Government in avoiding unforeseen expenditure but also will helf in having the rich experiace.. ಇಲ್ಲವೆಂದರೆ, ಇವರಿಗೆ ಎಕ್ಸ್‌ಪೀರಿಯನ್ಸ್ ಇರುವುದಿಲ್ಲವೆಂದು ಅರ್ಥ. ಅದಕ್ಕೇ ಇಷ್ಟು ಕೂಗಾಡುವುದು. ಆ ಪೋಸ್ಟೇ ಸಿಗಲಿಲ್ಲವೆಂದರೆ ರಿಚ್ ಎಕ್ಸ್ ಪೀರಿಯನ್ಸ್ ಹೇಗೆ ಸಿಗುತ್ತದೆ? ತಾವು ಪಾರ್ಲಿಮೆಂಟರಿ ಅಫೇರ್ಸ್ ಮಿನಿಸ್ಟರ್ ಆಗಿದ್ದೀರಿ, ಸ್ವಲ್ಪ ನೋಡಬೇಕು. ಅದು ಸಿಕ್ಕಿದರೆ ತಾನೇ ರಿಚ್ ಎಕ್ಸ್ ಪೀರಿಯನ್ಸ್ ಸಿಗುವುದು. ಇಲ್ಲವೆಂದರೆ, ಪೂರ್ ಎಕ್ಸ್‌ಪೀರಿಯನ್ಸ್ ಕೂಗಾಡುತ್ತಾರೆ ನೋಡಿ ಹೇಗೆ. ಹೇಗೆ ಹೇಗೆ ಕೂಗಾಡುತ್ತಾರೆ. ನೋಡಿ. ಇದು ಹೇಗಿದೆ ಎಂದರೆ, ಒಳ್ಳೆಯ ಹೆಸರು ತೆಗೆದುಕೊಳ್ಳಬೇಕೆಂದರೆ ಅದಕ್ಕೆ ಒಂದು ಗಾದೆ ಇದೆ. ಒಬ್ಬ ರಾಜ ಏನು ಮಾಡಿದ ಎಂದರೆ, ಆ ರಾಜ್ಯದಲ್ಲಿರುವ ಜನರೆಲ್ಲಾ ಏನೇನೂ ಬೆಳೆಯುತ್ತಾರೆ, ಪ್ಯಾಡಿ ಬೆಳೆದರೆ ಅದರ "ಅರ್ಧ ಸರ್ಕಾರಕ್ಕೆ ಕೊಡಬೇಕು, ಅರ್ಧ ನೀವು ತೆಗೆದುಕೊಳ್ಳಬೇಕು" ಎಂದು ಹೇಳಿದ. ಒಂದು ಬ್ಯಾಗ ಪ್ಯಾಡಿ ತೆಗೆದುಕೊಂಡು ಬಂದರೆ ಅರ್ಧ ಪ್ಯಾಡಿ ಇವರು ತೆಗೆದುಕೊಳ್ಳುವುದು, ಅರ್ಧ ಪ್ಯಾಡಿಯನ್ನು ಅವರಿಗೆ ಕೊಡುವುದು. ಜನರೆಲ್ಲಾ ನೋಡಿದರು. ಎಂತಹ ಜಿಪುಣ ಈ ರಾಜ, ನಾವು ಕಷ್ಟಪಟ್ಟು ದುಡಿದು ಎಲ್ಲಾ ಬೆಳೆದು ತಂದರೆ, ಅರ್ಧ ಭಾಗವನ್ನು ಇವನೇ ತೆಗೆದುಕೊಳ್ಳುತ್ತಾನೆ. ಅರ್ಧ ಭಾಗ ಇಟ್ಟುಕೊಂಡು ಏನು ಮಾಡುವುದು ಎಂದು ನೋವು ಪಟ್ಟರು. ಕೊನೆಗೆ ಆ ರಾಜನಿಗೆ ವಯಸ್ಸಾದ ತಕ್ಷಣ ಅವನು ಏನು ಮಾಡಿದನೆಂದರೆ, ಮಗನನ್ನು ಕರೆದು, ಮಗನೇ ನೀನು ಈ ರಾಜ್ಯವನ್ನು ಪರಿಪಾಲನೆ ಮಾಡು, ಸ್ವಲ್ಪ ಒಳ್ಳೆಯ ಹೆಸರು ನನಗೆ ಬರುವ ತರಹ ನೀನು ರಾಜ್ಯಭಾರ ಮಾಡಬೇಕು ಇಲ್ಲವೆಂದರೆ ನನ್ನ ಆತ್ಮಕ್ಕೆ ಅಲ್ಲಿ ಶಾಂತಿಯಾಗುವುದಿಲ್ಲವೆಂದು ಹೇಳಿದ. ಮಗ ಏನು ಮಾಡಿದನೆಂದರೆ, ಎಲ್ಲಾ ಕಡೆ ಪಾಪ ನನ್ನ ತಂದೆಯನ್ನೇ ಬಯ್ಯುತ್ತಿದ್ದಾರೆ, ಅರ್ಧ ಅರ್ಧ ತೆಗೆದುಕೊಳ್ಳುತ್ತಾನೆಂದು ಊರಿಗೆ ಊರೇ ಹೇಳುತ್ತಿದೆ. ಅವರಿಗೆ ಒಳ್ಳೆಯ ಹೆಸರು ಬರಬೇಕೆಂದರೆ, ಈಗ ನಾನು ಒಳ್ಳೆಯ ಕೆಲಸ ಮಾಡಬೇಕೆಂದು ತೀರ್ಮಾನಿಸಿ, ಮಿನಿಸ್ಟರ್ಸ್ ಎಲ್ಲರನ್ನೂ ಕರೆದು ಇಮ್ಮೀಡಿಯಾಟ್ ಆಗಿ ಒಂದು

ಬಿಲ್ ಪಾಸ್ ಮಾಡಿದ. ಏನೆಂದರೆ, ನನ್ನ ತಂದೆ ಹೇಗೆ ಅರ್ಧ ಕೊಡಿ ಎಂದು ಹೇಳುತ್ತಿದ್ದರು ಆಗೆ ನಾನೂ ಅರ್ಧ ಅರ್ಧ ಭಾಗ ಕೊಡಿ ಎಂದು ಹೇಳಬೇಕು? ಇನ್ನು ಎಕ್ಸ್ಟ್ರಾ ನಾನು ಏನೂ ಮಾಡುವುದಿಲ್ಲ ಎಂದು ಹೇಳಿ ಒಂದು ಬಿಲ್ ಪಾಸ್ ಮಾಡಿ ಎಂದು ಹೇಳಿದ. ಅವರು ಒಂದು ಬ್ಯಾಗ್ ಅಕ್ಕಿ ಕೊಟ್ಟರೆ ಅದನ್ನು ಕ್ಲೀನ್ ಮಾಡಿ ಅರ್ಧ ಅಕ್ಕಿಯನ್ನು ಇವನು ತೆಗೆದುಕೊಳ್ಳುವುದು. ಅರ್ಧ ವೇಸ್ಟನ್ನು ಅವರಿಗೆ ಕೊಡುವುದು. ಮೊದಲು ರಾಜನ ಕಾಲದಲ್ಲಿ ಪ್ಯಾಡಿಯಲ್ಲಿ ಅರ್ಧ ಅರ್ಧ ತೆಗೆದುಕೊಂಡರು. ಈಗ ಕ್ಲೀನ್ ಮಾಡಿ ಅಕ್ಕಿಯಲ್ಲಿ ಅರ್ಧ ಮಾತ್ರ ಇವನು ತೆಗೆದುಕೊಳ್ಳುವುದು. ಉಳಿದ ವೇಸ್ಟ್ ಅನ್ನು ಮಾತ್ರ ಜನರು ತೆಗೆದುಕೊಳ್ಳುವುದು. ಜನರಿಗೆ ಬಹಳ ನೋವಾಯಿತು.ಇದೇನಪ್ಪ, ಇವನ ತಂದೆಯೇ ಬೆಟರ್. ಅವರು ಅರ್ಧ ಭಾಗವಾದರೂ ಕೊಟ್ಟರು.ಮಗ ಅಕ್ಕಿ ಮಾತ್ರ ತೆಗೆದುಕೊಂಡು ವೇಸ್ಟ್ ಮಾತ್ರ ನಮಗೆ ಕೊಡುತ್ತಿದ್ದಾನೆ.ಇವನ ತಂದೆಯೇ ಬೆಟರ್ ಎಂದು ಊರೇ ಮಾತನಾಡಿಕೊಂಡಿತು. ಆ ರಾಜನ ಮಗನಿಗೆ ತುಂಬಾ ಸಂತೋಷ ಅಬ್ಬಾ, ನನ್ನ ತಂದೆಗೆ ಬಂದ ಕೆಟ್ಟ ಹೆಸರು ಹೋಗಿ, ಈಗ ಒಳ್ಳೆಯ ಹೆಸರು ಬಂದಿದೆ ಎಂದುಕೊಂಡ. ಹೇಗಿದೆ ನೋಡಿ? ಒಳ್ಳೆಯದು ಮಾಡಿ ಇವನು ಒಳ್ಳೆಯ ಹೆಸರು ಮಾಡಿಲ್ಲ. ಇವನು ಕೆಟ್ಟದು ಮಾಡಿ ತಂದೆಗೆ ಒಳ್ಳೆಯ ಹೆಸರು ತಂದಿದ್ದಾನೆ. ಆ ತರಹ ನೀವು ತಂದ ಬಿಲ್ ಹೇಗಿದೆ ಎಂದರೆ, ಹೌದು ಹೌದು ನಮ್ಮ ಎಂಎಲ್ಎಗಳಿಗೆಲ್ಲಾ ಕಷ್ಟವಾಗುತ್ತದೆ, ಸ್ಪೀಕರ್‌ಗೆ, ಡೆಪ್ಯೂಟಿ ಸ್ಪೀಕರ್‌ಗೆ ಕಷ್ಟವಾಗುತ್ತದೆ, ಇವರಿಗೇನಾದರೂ ಒಂದು ಮಾಡಬೇಕು ಎಂದು ಮಾಡಿದ್ದಾರೆ. Already it is there. ಅಷ್ಟು ಆತುರವಾಗಿ ಕರೆದು, ಈಗ ನಿಮಗೆಲ್ಲಾ ನಾವು ಒಳ್ಳೆಯದು ಮಾಡುತ್ತೇವೆ.ಎಂದು ಹೇಳಿ,ಅವರ ಮೆಂಬರ್‌ಗಳಿಗೆ ಸ್ಯಾಟಿಸ್‌ಫ್ಯಾಕ್ಷನ್ ಮಾಡುವುದಕ್ಕೆ ತಂದಿದ್ದೀರಿ "ನೋಡಪ್ಪ ಎಮರ್‌ಜೆನ್ಸಿಯಾಗಿ ನಾವು ಬಿಲ್ ತಂದು ನಿಮಗೋಸ್ಕರ ನಾವು ಇವೆಲ್ಲಾ ಮಾಡಿದ್ದೇವೆ. ನಿಮಗೆಲ್ಲಾ ಬೋರ್ಡ್ ಛೇರ್ಮನ್ ಹುದ್ದೆ ಕೊಡುತ್ತೇವೆ. ಸೈಲೆಂಟ್ ಆಗಿರಬೇಕು, ಏನೂ ಟೆನಷನ್ ಆಗಬಾರದು" ಎಂದು ಸ್ಯಾಟಿಸ್‌ಫೈ ಮಾಡುವುದಕ್ಕೆ ಇದನ್ನು ತಂದಿರುವುದು. otherwise it is not useful. ಇದು ಹೇಗೆ ಯೂಸ್‌ಫುಲ್ ಆಗುತ್ತದೆ? Already you are holding the same Again, urgently. ಕರೆದು, ಇದನ್ನು ಮಾಡುವ ಅವಶ್ಯಕತೆಯೇ ಇರಲಿಲ್ಲ ಈಗ ಸ್ಪೀಕರ್ ಆಗಿ ತಾವು ಇದ್ದೀರಿ. ಮಿನಿಸ್ಟರ್‌ಗೊಂದು ಪೋಸ್ಟ್ ಒನ್ ಪೋಸ್ಟ್ ಎಂದರೆ ಎಂಎಲ್ಎ ಮಾತ್ರ ಇರಬೇಕು, ಮಿನಿಸ್ಟರ್ ಆಗಬಾರದು, ಮಿನಿಸ್ಟರ್ ಒಂದು ಪೋಸ್ಟ್ ಆಗುತ್ತದಲ್ಲವೇ? ನಿಮ್ಮ ಊರಿನ ಶಾಸಕರು ಯಾರೆಂದರೆ,

ಅವರು ಎಂಎಲ್ಎ ಹೆಸರು ಹೇಳುತ್ತಾರೆ. ನಿಮ್ಮ ಊರಿನ ಮಂತ್ರಿ ಯಾರು ಎಂದರೆ, ಅವರ ಹೆಸರೇ ಹೇಳುತ್ತಾರೆ. ಒನ್ ಮ್ಯಾನ್ ಒನ್ ಪೋಸ್ಟ್ ಎಂಎಲ್ಎಗಳು ಯಾರೂ ಮಂತ್ರಿಯಾಗಬಾರದು. ಎಲ್ಲಾ ಐಎಎಸ್ ಆಫೀಸರ್‌ಗಳಿಗೆ ಮಂತ್ರಿಗಿರಿ ಕೊಟ್ಟುಬಿಡಿ. ಇಲ್ಲವೆಂದರೆ, ನಿಮ್ಮ ಪಾರ್ಟಿಯಲ್ಲಿ ಕೆಲಸ ಮಾಡುವವರಿಗೆ ಮಂತ್ರಿಗಿರಿ ಕೊಟ್ಟುಬಿಡಿ. ಹೇಗೆ ಸಾರ್ ಕಾನೂನು? Where is the law? ಒನ್ ಮ್ಯಾನ್ ಒನ್ ಪೋಸ್ಟ್ ಎಂದರೆ ಮಿನಿಸ್ಟರ್ ಆಗಬಾರದು. ಹೇಗೆ ಆಗುವುದಕ್ಕಾಗುತ್ತದೆ? ತಂದೆಯೂ ಅವರೇ, ಅಂಕಲ್ ಎಂದರೂ ಅವರೇ ಬರುತ್ತಾರೆಯೇ? ಎಂಎಲ್ಎ ಎಂದರೆ ಇವರ ಹೆಸರನ್ನು ಹೇಳುತ್ತಾರೆ, ಮಂತ್ರಿ ಎಂದರೂ ಹೆಸರು ಹೇಳುತ್ತಾರೆ. ಟು ಪೋಸ್ಟ್ ಆಗುತ್ತದೆ. ಆದುದರಿಂದ ನೀವೇನು ಬಿಲ್ ತಂದಿದ್ದೀರಿ, let it be useful to all our members. ನಮಗೇನೂ ಬೋರ್ಡ್ ಛೇರ್ಮನ್‌ಗಿರಿ ಸಿಗುವುದಿಲ್ಲ. ನಾನು ತೆಗೆದುಕೊಳ್ಳುವುದಿಲ್ಲ. ಮಾಧುಸ್ವಾಮಿಯವರು ಪಾಪ ಮಂತ್ರಿಯಾಗಬಹುದೇನೋ ಎಂದು ಟ್ರೈ ಮಾಡಿದರು. ನಮ್ಮ ಮಾಧುಸ್ವಾಮಿಯವರು ಒಬ್ಬರು ಆ ಕಡೆ ಹೋಗುತ್ತಾರೆ, ಎನು ನಮ್ಮ ಗತಿ ನಮಗೆ ಯಾರೂ ಫ್ರೆಂಡ್ ಇಲ್ಲವಲ್ಲಾ ಎಂದು ಅಂದುಕೊಂಡೆ. ಕೊನೆಗೆ ನೋಡಿದರೆ, ಅವರನ್ನೇ ಕೈ ಬಿಟ್ಟಿದ್ದಾರೆ. ಮಾಧುಸ್ವಾಮಿಯವರನ್ನೇ ಕೈ ಬಿಟ್ಟಿರುವವರು ಶ್ರೀರಾಮರೆಡ್ಡಿ, ವಾಟಾಳ್ ರವರಿಗೆ ಕೊಡುತ್ತಾರೆಯೇ?ಕೊಟ್ಟರೆ ನಾವು ತೆಗೆದುಕೊಳ್ಳುತ್ತೇವೆಯೇ? ಇಲ್ಲ ಕೊಡುವುದಿಲ್ಲ. ಆದುದರಿಂದ, ನಿಮಗೆಲ್ಲಾ ಆಶೀರ್ವಾದ ಆಗಲಿ, ನಮ್ಮ ಕಡೆ ಇರುವವರಿಗೆಲ್ಲಾ ಒಳ್ಳೆಯ ಬೋರ್ಡ್ ಛೇರ್ಮನ್ ಸ್ಥಾನ ಸಿಗಲಿ ನಮ್ಮ ಕೊಲೀಗ್ ಇರಲಿ ಎಲ್ಲಾ ಎಂಎಲ್ಎಗಳಿಗೂ ಬೋರ್ಡ್ ಛೇರ್ಮನ್ ಸ್ಥಾನ ಸಿಗಬೇಕು. ಆ ಕಡೆ ಕುಳಿತಿರುವವರೂ ನಮ್ಮ ಕೊಲೀಗ್ಸ್ ತಾನೇ? ಅವರು ಛೇರ್ಮನ್ ಇದ್ದರೆ, ನಾವು ಹೋಗಿ ಏನು ಅಣ್ಣಾವರೆ ಹೇಗಿದ್ದೀರಿ? ಸ್ವಲ್ಪ ಕೆಲಸ ಮಾಡಿ ಸಂತೋಷವಾಗಿ ಹೇಳಬಹುದು. ಈ ಬ್ಯೂರೋಕ್ರಾಟ್ಸ್ ಗಳಿಗೇನಾದರೂ ಛೇರ್ಮನ್ ಸ್ಥಾನ ಕೊಟ್ಟು ಬಿಟ್ಟರೆ ಈ ದೇಶವನ್ನೇ, ಈ ರಾಜ್ಯವನ್ನೇ ಹಾಳು ಮಾಡಿಬಿಡುತ್ತಾರೆ. ಈ ಅಸೆಂಬ್ಲಿಯನ್ನೇ ಹಾಳು ಮಾಡಿ ಬಿಡುತ್ತಾರೆ. ಕಾರಣವೇನೆಂದರೆ, ಛೇರ್ಮನ್ ಇದ್ದಾರೆಯೇ ಎಂದು ಹೋಗಿ ಕೇಳಿ He has gone to meeting ಅನ್ನುತ್ತಾರೆ. ಎಲ್ಲಿ? ಲೀಲಾ ಪ್ಯಾರಡೈಸ್, ಎಲ್ಲಿ ವಿಂಡ್ಸರ್ ಮ್ಯಾನರ್ ಎಂದು ಹೇಳುತ್ತಾರೆ. ವಿಧಾನಸೌಧದಲ್ಲಿ ಆಫೀಸ್‌ಗಳಿಲ್ಲವೇ? ಈಗ ಹೊಸ ಹೊಸ ಬಿಲ್ಡಿಂಗ್ ಕಟ್ಟಿದ್ದೀರಿ,ಅಲ್ಲಿ ಇಲ್ಲ ಆದುದರಿಂದ ಎಂಎಲ್ಎಗಳಿಗೆ ಬೋರ್ಡ್ ಛೇರ್ಮನ್ ಸ್ಥಾನ, ಡಬಲ್ ಪ್ರಾಫಿಟ್‌ಸಿಗಬೇಕು. ಎಲ್ಲಾ ಚಪ್ಪಾಳೆ ಹೊಡೆಯಿರಿ.ಸಂತೋಷವಾಗಿ

ಚಪ್ಪಾಳೆ ಹೊಡೆಯಿರಿ. ಆದುದರಿಂದ, ನೀವು ತಂದಿರುವ ಬಿಲ್‌ಗೆ ನನ್ನ ಸಂಪೂರ್ಣ ಬೆಂಬಲವಿದೆ. ಅದು ಒಳ್ಳೆಯದೋ, ಕೆಟ್ಟದೋ ನೀವು ಅರ್ಜೆನ್ಸಿಯಾಗಿ ಮಾಡಿದ್ದೀರೋ ಇಲ್ಲ ಎಮರ್‌ಜೆನ್ಸಿಯಾಗಿ ಮಾಡಿದ್ದೀರೋ ಅದು ಬೇರೆ Really, it is good for the MLAS. ನನಗೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಅಬ್ಜೆಕ್ಟೀವ್ ಅನ್ನೇ ಓದಿದರೆ ಇದನ್ನು ವಿಡ್ರಾ ಮಾಡಬೇಕು. ಏನು ಇರುವುದು, "The consequences of disqualification of members of legisature on the ground of their holding an office of profit results in unnecessary expenditure and unforeseen financial burden," ಅಂದರೆ, ಇವರು ಹೇಳಿರುವುದು ಕೇವಲ ಶಾಸಕರಿಗೆ ಎಂದು elected representatives ಎಂದು ಹೇಳಿಲ್ಲ. ಆಕ್ಟ್‌ನಲ್ಲಿ ಅದೆಲ್ಲಾ ಬರುತ್ತದೆ. ಉಳಿದಿದ್ದು ನಮ್ಮ ಕೋಆಪರೇಟೀವ್ಸ್ ಬಾಡೀಸ್, ಮುನಿಸಿಪಾಲಿಟಿ ಎಲ್ಲ ಬರುತ್ತವೆ. ಇವರು object ನಲ್ಲಿ ಹೇಳಿರುವುದು ಕೇವಲ ಶಾಸಕರಿಗೆ ಎಂದು. ಒಂದು ಭಾಗವಾದರೆ ಇನ್ನೊಂದೇನು ಹೇಳುತ್ತಾರೆ. "The Government of India has reconsidered the issue regarding the consequences of the member of the Parliament holding office of profit and passed the parliament (Prevention of Disqualification) (Amendment) Bill, 2006, In view of the same, it is proposed to amend the Karnataka Legislature (Prevention of Disqualification) Act. 1956," ಎಂದು ಹೇಳುತ್ತೀರಿ. Now, the president has returned the Bill. ನೀವು ಡೆಫರ್ ಮಾಡಬೇಕಾಗಿತ್ತು. Atleast, in view of this ನಾವು ರೆಗ್ಯೂಲರ್ ಸೆಷನ್‌ನಲ್ಲಾದರೂ ಮಾಡುತ್ತೇವೆ. ಪಾರ್ಲಿಮೆಂಟ್‌ನಲ್ಲಿ ಏನಾಗುತ್ತದೆಂದು ನೋಡಿ ಮಾಡುತ್ತೇವೆ ಎಂದು ಹೇಳಬೇಕಾಗಿತ್ತು ಏಕೆಂದರೆ, ನೀವು ಐಆವ ಉದ್ದೇಶಕ್ಕಾಗಿ ಇದನ್ನು ತಂದಿದ್ದೀರಿ, ಆ ಉದ್ದೇಶದ ಕೆಳಗೆ ಇದನ್ನು ಮಾಡುತ್ತಿಲ್ಲ.ಇದು ಒಂದು ಭಾಗವಾದರೆ ಮತ್ತೆ, ಮಾಧುಸ್ವಾಮಿಯವರು ಹೇಳಿದರು.ಹಿಂದಿನ ಒರಿಜಿನಲ್ ಆಕ್ಟ್‌ನಲ್ಲಿ ಹೆಚ್ಚು ಕಡಿಮೆ ಎಲ್ಲಾ ಇದೆ. "Committee means any Committee, Commission. Council, Board or any other body of one or more persons whether statutory or not. set up by the Governement of India or the Government of any state;" ಎಂದು ಇರುವಾಗ ಅದರಲ್ಲಿ ಎಲ್ಲವೂ ಬಂತು ಆಮೇಲೆ ಪುನಃ ನಲ್ಲಿ ಎಕ್ಸ್‌ಪ್ಲೇನ್

ಮಾಡುತ್ತಾರೆ. "Statutory body means any corporation. board, company, society or any other body of one or more persons, whether incorporated or not, established, registered or formed by or under the Central Law or the law of any state for the time being in force or exercising powers and functions under any such law." ಎಲ್ಲಾ ಸ್ಟಡ್ಯೂಟರಿ ಬಾಡಿ ಬಂತು, ಎಲ್ಲಾ ಕೋ ಆಪರೇಟಿವ್ ಬಾಡೀಸ್ ಬಂತು. ಆದರೆ, ನೀವು ಪುನಃ ಇದನ್ನು ಡೀಟೇಲ್ ಆಗಿ ಎಕ್ಸ್‌ಪ್ಲೈನ್ ಮಾಡುವಂಥ ಅವಶ್ಯಕತೆ ಇಲ್ಲ.ಏಕೆಂದರೆ, ನೀವು ರೂಲ್ಸ್‌ನಲ್ಲಿ ಅಥವಾ ಬೇರೆ ವಿಧದಲ್ಲಿ ಮಾಡಿಕೊಳ್ಳಬೇಕಾಗಿತ್ತು. ಇಷ್ಟು ತುರ್ತು ಸಭೆಯನ್ನು ಕರೆದು ಜನರಿಗೆ "ಏನಪ್ಪ ಶಾಸಕರಿಗೆ ಛೇರ್ಮನ್‌ಗಿರಿ ಕೊಡಲಿಕ್ಕೋಸ್ಕರ ಸದನವನ್ನು ಕರೆದಿದ್ದಾರೆ " ಎನ್ನುವಂಥ ಬಾವನೆ ಬರುತ್ತದೆ. ಕುಡಿಯುವ ನೀರಿನ ವಿಷಯಕ್ಕೆ ಅಲ್ಲ. ಫ್ಲಡ್ ಡ್ಯಾಮೇಜಾಗಿದೆ ಎಂದು ಕರೆದಿಲ್ಲ. ಏಕೆ ಅಗತ್ಯವಿತ್ತು ಎಂಬುದು ನನಗೆ ಗೊತ್ತಿಲ್ಲ. ಅದರ ಜೊತೆಗೆ ಮಾನ್ಯ ಪ್ರಕಾಶ್‌ರವರು 2–3 ವಿಷಯಗಳ ಬಗ್ಗೆ ಎಕ್ಸ್ ಪ್ಲೈನ್ ಮಾಡಿದರು. ರಾಮಕೃಷ್ಣ ಹೆಗಡೆಯವರು ವಿಧಾನ ಸಭಾ ಸದಸ್ಯರಾಗಿದ್ದಾಗ, ಪ್ಲಾನಿಂಗ್ ಕಮಿಷನ್ ಡೆಪ್ಯೂಟಿ ಛೇರ್ಮನ್ ಆದ ಬಗ್ಗೆ ಮಾನ್ಯ ಮಾಧುಸ್ವಾಮಿಯವರು ಹೇಳಿದರು. ಅವರು ಸಂಬಳವನ್ನು ತೆಗೆದುಕೊಂಡಿರಲಿಲ್ಲ. ಅದನ್ನೇ ಇಲ್ಲಿಯೂ ಮಾಡಬಹುದಿತ್ತು. " ನನಗೆ ಸಂಬಳ ಬೇಡ, ನನಗೆ ಛೇರ್ಮನ್‌ಗಿರಿ ಕೊಡಿ" ಎಂದು ಹೇಳಬಹುದಿತ್ತು. ಆ ಪೋಸ್ಟ್‌ಗೆ ಸಂಬಳವಿದ್ದರೆ, ಇಟ್ ಅಟ್ರಾಕ್ಟ್ಸ್ ಎಂದು ಆಗುತ್ತದೆ. ಅದನ್ನು ಹಾನರರಿ ಮಾಡಬಹುದಿತ್ತು. ತಿದ್ದುಪಡಿಯನ್ನು ತಂದು ಹಾನರರಿ ಪೋಸ್ಟ್ ಎಂದು ಮಾಡಿ.

ಶ್ರೀ ಎಂ.ಪಿ. ಪ್ರಕಾಶ್ : ಜಯಾಬಚ್ಚನ್ ಕೇಸ್‌ನಲ್ಲಿ ಸುಪ್ರೀಂಕೋಟ್ ಏನು ಹೇಳುತ್ತ ದೆಂದರೆ......

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅಟ್ರಾಕ್ಟ್ ಆಗಬಾರದು. ಸ್ಯಾಲರಿ ಇದ್ದರೂ ತೆಗೆದು ಕೊಳ್ಳಲಿಲ್ಲ. ಅದು ಗೊತ್ತಿದೆ. ಆಫೀಸ್ ಆಫ್ ಪ್ರಾಫಿಟ್ ಆಗುತ್ತದೆ.

6.00 ಪಿ.ಎಂ

ಡಾ: ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ, ಯಾವುದೇ ಸಾರಿಗೆ ಸಂಬಳ ಭತ್ಯೆ ತೆಗೆದುಕೊಳ್ಳದಿದ್ದರೂ ಆ ಪೋಸ್ಟ್‌ಗೆ entitlement- ಇದ್ದರೆ disqualification attract ಆಗುತ್ತದೆ. That is why this Bill.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಮಾನ್ಯ ಪ್ರಕಾಶ್‌ರವರು ಹೇಳಿದರು. ಆಗ ರಾಮಕೃಷ್ಣ ಹೆಗ್ಡೆಯವರ ಬಗ್ಗೆ ಚರ್ಚೆಯಾಯಿತು. ಅಂದು ಈ ಪರಿಸ್ಥಿತಿ ಇರಲಿಲ್ಲ.

ಡಾ: ವಿ.ಆರ್. ಆಚಾರ್ಯ : ರಾಮಕೃಷ್ಣ ಹೆಗಡೆಯವರು ಸಂಬಳ ತೆಗೆದುಕೊಂಡಿ ರಲಿಲ್ಲ.

SHI M.P. PRAKASH : As vice chairman of the Planning Commission, he took one rupee. ಆದರೆ ಆವಾಗ ಏನಾಗಿತ್ತು, ಎಂದರೆ, ಯಾರು ಅವರ ವಿರುದ್ಧವಾಗಿ ಅರ್ಜಿ ಕೊಡಲಿಲ್ಲ. ಈಗ ಯಾರಾದರೂ ಅರ್ಜಿಕೊಟ್ಟರೆ ತೊಂದರೆಯಾಗುತ್ತೆ ಅಂತ ಅಷ್ಟೇ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಇದರಲ್ಲಿ ಸ್ಪೀಕರ್ ಮುಂತಾದ ಹುದ್ದೆಗಳನ್ನು ತಂದುಬಿಟ್ಟಿದ್ದೀರಿ. They are constitutional bodies statutory ಬಾಡಿಯಲ್ಲ ಬೇರೆ ಯಾವುದೂ ಅಲ್ಲ. ಶಾಸಕನಾಗಿರದೆ ಅಧ್ಯಕ್ಷ ಅಥವಾ ಉಪಾಧ್ಯಕ್ಷನಾಗಿರುವುದಕ್ಕೆ ಸಾಧ್ಯವಿಲ್ಲ. ತಾವೇ ಹೇಳಿದಿರಿ. ಹೌಸ್ ಡಿಸಾಲ್ವ್ ಆದಾಗ, ಅಧ್ಯಕ್ಷರಾಗಿ ಮುಂದುವರೆಯುತ್ತಾರೆ. ಅವರು ಎಂಎಲ್‌ಎ ಆಗದೇ ಅಧ್ಯಕ್ಷನಾಗುವುದಕ್ಕೆ ಆಗುವುದಿಲ್ಲ.ಹೌಸ್ ಆಮೇಲೆ ಡಿಸಾಲ್ವ್ ಆದಾಗ, he can continue. Straightaway ಅವರನ್ನು ಅಧ್ಯಕ್ಷರನ್ನಾಗಿ ಕೂರಿಸಲು ಆಗುವುದಿಲ್ಲ. The position is, unless he becomes an MLA, ಅಧ್ಯಕ್ಷನಾಗುವುದಕ್ಕೆ ಆಗುವುದಿಲ್ಲ. ಅಧ್ಯಕ್ಷನಾದ ಮೇಲೆ ಹೌಸ್ ಡಿಸಾಲ್ವ್ ಆದಾಗ he can continue not otherwise.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ ಸೋಮನಾಥ್ ಚಟರ್ಜಿಯವರದ್ದು ಏನು ಹೇಳುತ್ತೀರಿ?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಸೋಮನಾಥ್ ಚಟರ್ಜಿಯವರದ್ದು ಅವರು ಎಂಪಿ ಯಾಗಿ ಸಭಾಧ್ಯಕ್ಷರಾಗಿರುವುದಕ್ಕೆ ಸಮಸ್ಯೆ ಬಂದಿದ್ದಲ್ಲ. ಅವರು ಶಾಂತಿನಿಕೇತನದ ಅಧ್ಯಕ್ಷರಾ ಗಿದ್ದಕ್ಕಾಗಿ that attracts office of profit. ಅವರು ಅಧ್ಯಕ್ಷರಾಗಿರುವುದರಿಂದ ಅಲ್ಲ

SRI M.P. PARKASH : His membership attracts the provision of disqualification. ಆಗ ಅವರ ಮೆಂಬರ್‌ಶಿಪ್ ಡಿಸ್‌ಕ್ವಾಲಿಫೈ ಆಗುತ್ತದೆ.

SRI K. JAYAPRAKASH HEGDE : As a member, not as Speaker.

SRI M.P. PRAKASH : But what about his Speakership?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅವರ ಮೆಂಬರ್‌ಶಿಫ್ ಹೋಗುತ್ತದೆ.

ಶ್ರೀ ಹೆಚ್.ಡಿ. ಬಸವರಾಜು : ಅವರು ಮೆಂಬರ್ ಆದರೆ ತಾನೇ ಸ್ಪೀಕರ್ ಆಗುವುದು ಸಾರ್.

SRI M.P. PRAKASH : If he becomes a Speaker.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಅದನ್ನೇ ಹೇಳಿದ್ದು ಅವರು ಮೆಂಬರ್ ಆಗಿ ಸ್ಪೀಕರ್ ಆಗುವುದು. ಅವರ ಮೆಂಬರ್‌ಶೀಫ್ ಡಿಸ್‌ಕ್ವಾಲಿಫೈ ಆದಾಗ ಆಟೋಮ್ಯಾಟಿಕ್ ಆಗಿ Speaker ship ಹೋಗುತ್ತದೆ. ಅದರ ಶಾಂತಿನಿಕೇತನದ ಮೆಂಬರ್‌ಶಿಫ್ ಹೋದದ್ದರಿಂದ ಅಧ್ಯಕ್ಷಗಿರಿಯೂ ಕೂಡ ಡಿಸ್ ಕ್ವಾಲಿಫೈ ಆದರೆ ಉಳಿಯುವುದಿಲ್ಲ. ಪಾರ್ಲಿಮೆಂಟ್ ಸದಸ್ಯತ್ವ ಹೋಗಿದ್ದರಿಂದ ಅಧ್ಯಕ್ಷರಗಿರಿ ಹೋಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ನಾಳೆ ನಮ್ಮ ಉಪಾಧ್ಯಕ್ಷರಿಗೆ ಒಂದು ಹುದ್ದೆಯನ್ನು ಕೊಟ್ಟಾಗ ಅವರು ಡಿಸ್‌ಕ್ವಾಲಿಫೈ ಆಗುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ನಾನು ಪುನಃ ವಿವರಿಸುತ್ತೇನೆ. ಶಾಂತಿನಿಕೇತನದ ಅಧ್ಯಕ್ಷರಾಗಿದ್ದರಿಂದ ಅವರ ಸದಸ್ಯತ್ವ ಹೋಗುತ್ತದೆ. ಅವರ ಸದಸ್ಯತ್ವ ಹೋಗಿದ್ದರಿಂದ ಅಧ್ಯಕ್ಷಗಿರಿ ಹೋಗುತ್ತದೆ. ಅದು ಬಿಟ್ಟರೆ ಅವರು ಶಾಂತಿನಿಕೇತನದ ಅಧ್ಯಕ್ಷರಾಗದೇ ಕೇವಲ ಲೋಕಸಭೆಯ ಅಧ್ಯಕ್ಷರಾಗಿ ಉಳಿಯದಿದ್ದರೆ ಅದು ಆಫೀಸ್ ಆಫ್ ಪ್ರಾಫಿಟ್ ಆಗುವುದಿಲ್ಲ ಹೀಗಾಗಿ ಇದನ್ನು ತರುವಂಥ ಅವಶ್ಯಕತೆ ಇರಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಹಾಗಾದರೆ ಈ ಬಿಲ್ ತರುವಂತಹ ಪ್ರಶ್ನೆ ಉದ್ಭವಿಸುವುದಿಲ್ಲ. **ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ :** ಇದು ಅವಶ್ಯಕತೆ ಇರಲಿಲ್ಲ. ಏಕೆಂದರೆ ನೀವು ಅದನ್ನೆಲ್ಲಾ ತಂದಾಯಿತು. ಎಲ್ಲಾ Statutory bodies, co-operative bodies ಎಂದು ಹೇಳಿದ್ದೀರಿ ರಂದ ಮೇಲೆ ಪುನಃ ಅಧ್ಯಕ್ಷ: ಉಪಾಧ್ಯಕ್ಷರನ್ನು ಸೇರಿಸುವ ಅವಶ್ಯಕತೆ ಇರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ಈಗ ಮಾನ್ಯ ಕೃಷ್ಣರವರು ಅಧ್ಯಕ್ಷರಾಗಿದ್ದಾರೆ. ನಾನು ಆಗಲೇ ಹೇಳಿದೆ, ಅದು ಏಕೆ ಸ್ಪೀಕರ್‌ರವರಿಗೆ ಬರುವುದಿಲ್ಲವೆಂದು ಈಗ ನಾಳೆ ಬೆಳಿಗ್ಗೆ ಅವರ ಪಾರ್ಟಿಯಲ್ಲಿ ಒಂದು ತೀರ್ಮಾನ ಬರುತ್ತದೆ. ಹೆಚ್.ಡಿ. ರೇವಣ್ಣನವರನ್ನು ಸ್ಪೀಕರ್‌ನ್ನಾಗಿ ಮಾಡುತ್ತಾರೆಂದು ಉದಾಹರಣೆ ತೆಗೆದುಕೊಳ್ಳುವುದಾದರೆ, ಶ್ರೀಕೃಷ್ಣರವರನ್ನು ಒಬ್ಬ ಮಂತ್ರಿಯನ್ನಾಗಿ ಮಾಡುತ್ತಾರೆ. ರೇವಣ್ಣನವರು ನಮ್ಮ ಮಿಲ್ಕ್ ಯೂನಿಯನ್ ನಲ್ಲಿ ಅಧ್ಯಕ್ಷರಾಗಿದ್ದಾರೆ. ಡಿಸ್ ಕ್ವಾಲಿಫಿಕೇಷನ್ ಕ್ಲಾಸ್ ಬರುತ್ತದೆ. ಅವರು ಎಂಎಲ್ಎ ಆಗಿದ್ದಾರೆ, ಇದನ್ನು

ಮುಂದೆ ಕೂಡ ಬಾರದ ಹಾಗೆ ತರಲಿಕ್ಕೆ ಹೇಳಿದ್ದಾರೆಯೇ ಎಂಬುದು ನನ್ನ ಭಾವನೆ....

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸ್ಪೀಕರ್ ಪೋಸ್ಟ್‌ನ್ನು ಆಫೀಸ್ ಆಫ್ ಪ್ರಾಫಿಟ್‌ನಲ್ಲಿ ತರುವ ಅವಶ್ಯಕತೆ ಇರಲಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ನಾನು ಉದಾಹರಣೆಗೆ ಹೇಳಿದೆ. ರೇವಣ್ಣನವರನ್ನು ಸ್ಪೀಕರ್ ಮಾಡಬೇಕೆಂದು ತೀರ್ಮಾನವಾಗುತ್ತದೆ, ತೀರ್ಮಾನವಾಗಿ ಅವರು ಅಲ್ಲಿ ಕುಳಿತಾಗ it attracts the disqualification. ಇದು ನನ್ನ ವಾದ.

ಶ್ರೀ ಜೆ.ಸಿ. ಮಾಧುಸ್ವಾಮಿ : ಇಲ್ಲ ನಿಮ್ಮ ವಾದ ಸರಿ. ಸ್ಪೀಕರ್ ಅಂಡ್ ಡೆಪ್ಯೂಟಿ ಸ್ಪೀಕರ್ ಅಂಡ್ ಚೀಫ್ ವಿಪ್‌ನ್ನು office of profit ಬಿಟ್ಟು ಈಗ ಎಕ್ಸ್ ಂಮ್ಟ್ ಮಾಡುತ್ತಿದ್ದೇವೆಂದು ಅವರು ಹೇಳುತ್ತಿರುವುದು. ಆ ಪೋಸ್ಟ್ office of profit ನಲ್ಲಿ ಇಟ್ಟುಬಿಟ್ಟಿದ್ದೇವೆ, ಅದನ್ನು ಎಕ್ಸ್ ಂಮ್ಟ್ ಮಾಡಲಿಕ್ಕೆ ಬಿಲ್ ತಂದಿದ್ದೇವೆಂದು ಈ ಡೆಫನೇಷನ್ The definition of the Bills is like that. ಆ ಪೋಸ್ಟ್‌ನಲ್ಲಿ ಕುಳಿತಿರತಕ್ಕಂಥವರನ್ನು ಕೂಡ ಎಕ್ಸ್‌ಂಮ್ಸ್ ಮಾಡುತ್ತಿದ್ದೇವೆ. It is a constitutional body.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಸ್ಪೀಕರ್ ಪೋಸ್ಟ್ ಮತ್ತು ಡೆಪ್ಯೋಟಿ ಸ್ಪೀಕರ್ ಪೋಸ್ಟ್‌ಗಳನ್ನು ಆಫೀಸ್ ಆಫ್ ಪ್ರಾಫಿಟ್ ಎಂದು ನಾವು ಅಂದುಕೊಳ್ಳಬಾರದು. ಏಕೆಂದರೆ, ಈಗ ತಾನೇ ನಮ್ಮ ಮಾನ್ಯ ಎಂ.ಪಿ. ಪ್ರಕಾಶ್ ರವರು ಹೇಳಿದರು. ಈಗ ಸೋಮನಾಥ್ ಚಟರ್ಜಿಯವರು ಅನರ್ಹ ಆಗಬಹುದು ಎಂದು ಏಕೆ ಭಾವಿಸುತ್ತಾರೆಂದರೆ, ಈ ಶಾಂತಿನಿಕೇತನ ಅಧ್ಯಕ್ಷ ಸ್ಥಾನ ಏನು ಇದೆ, ಆ ಒಂದು ಸ್ಥಾನ ಅಫೀಸ್ ಪ್ರಾಫಿಟ್‌ನಲ್ಲಿ ಬರುತ್ತದೆ. ಅದನ್ನು ಹೊರತರಲು ಅವರು ಈ ಬಿಲ್‌ನಲ್ಲಿ ಇನ್‌ಕಾರ್ಪೋರೇಟ್ ಮಾಡಿದ್ದಾರೆ. ಆದರೆ ಸ್ಪೀಕರ್ ಪೋಸ್ಟ್ ನ್ನು ಅದು ಅಫೀಸ್ ಆಫ್ ಪ್ರಾಫಿಟ್ ಎಂದು ಯಾರೂ ಅಂದುಕೊಳ್ಳಬಾರದು, ಅದು ಅಫೀಸ್ ಆಫ್ ಪ್ರಾಫಿಟ್ ಆಗುವುದಿಲ್ಲ/ ಆ್ಯಕ್ಚುವಲಿ ಅದನ್ನು ಈ ಬಿಲ್‌ನಲ್ಲಿ ಇನ್‌ಕಾರ್ಪೋರೇಟ್ ಮಾಡುವಂಥ nesessity ಇಲ್ಲ Speaker post is not an office of profit. ಏಕೆಂದರೆ,

SRI M.P. PRAKASH : Somebody says; The hen comes out of the egg and egg comes out of the hen. Therefore the egg comes out of the egg. ಆ ರೀತಿ ಆಗುತ್ತದೆ. ಇಲ್ಲಿ ನಾವು ಸ್ಪೀಕರ್‌ಅನ್ನು ಆಫೀಸ್ ಆಫ್ ಪ್ರಾಫಿಟ್ ಎಂದು ಹೇಳಿಲ್ಲ. ಸ್ಪೀಕರ್ ಅಕಸ್ಮಾತ್ತಾಗಿ ಯಾವುದಾದರೂ ಮತ್ತೊಂದು

ಹುದ್ದೆಯನ್ನು ನಿರ್ವಹಿಸಿದರೆ, ಆಗ ಅವರು ಅನರ್ಹರಾಗುತ್ತಾರೆ ಎನ್ನುವ ಕಾರಣಕ್ಕಾಗಿಯೇ ಅವರನ್ನು ಇದರಲ್ಲಿ ತಂದಿದ್ದೇವೆ.

ಡಾ : ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ : ಆದರೆ ಅಲ್ಲಿ ಆ ಪೋಸ್ಟ್‌ನ್ನು ಆಫೀಸ್ ಆಫ್ ಪ್ರಾಫಿಟ್ ಕೆಟಗರಿಯಿಂದ ಹೊರಗೆ ತರಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ಈಗ ಸ್ಪೀಕರ್‌ರವರು ಬೇರೆ ಹುದ್ದೆಯನ್ನು ಅಲಂಕ ರಿಸಿದಾಗ ಶಾಸಕಸ್ಥಾನಕ್ಕೆ ಅನರ್ಹರಾಗುತ್ತಾರೆ. ಸ್ಪೀಕರ್ ಶಿಫ್ ಆಟೋಮಿಟಕ್ ಆಗಿ ಹೋಗುತ್ತದೆ. ಸ್ಪೀಕರ್‌ರವರು ಬೇರೆ ಸ್ಥಾನವನ್ನು ಅಲಂಕರಿಸಿ ಅನರ್ಹರಾದರೆ, ಶಾಸಕನಾಗದಿದ್ದರೆ ಈ ಸ್ಥಾನವನ್ನು ಉಳಿಸಿಕೊಳ್ಳಲಿಕ್ಕೆ ಆಗುವುದಿಲ್ಲ. you should understand this point ಈಗ ಸ್ಪೀಕರ್ ಬೇರೆ ಸ್ಥಾನವನ್ನು ಅಲಂಕರಿಸಿದಾಗ ಅದರ ಶಾಸಕ ಹುದ್ದೆಯು ಅನರ್ಹತೆಯಾದಾಗ ಸ್ಪೀಕರ್ ಸ್ಥಾನ ಹೋಗುತ್ತದೆ. ಶಾಸಕರಾಗಿರದೆ ಸ್ಪೀಕರ್ ಆಗಲಿಕ್ಕೆ ಆಗುವುದಿಲ್ಲ. ಆದರೆ ಹೌಸ್ ಡಿಸಾಸ್ಟ್ ಆದಾಗ he shall continue. ಅವರು ಮುಂದಿನ ವಿಧಾನ ಸಭೆ ರಚನೆ ಆಗಿ ಅಧ್ಯಕ್ಷರು ಆಯ್ಕೆಯಾಗುವವರೆವಿಗೂ ಮುಂದುವರಿಯುತ್ತಾರೆ. ಹೌಸ್ ಡಿಸಾಲ್ವ್ ಆದಾಗ ಬಿಟ್ಟರೆ ಅವರಿಗೆ ಬೇರೆ ಸಮಯದಲ್ಲಿ ಕಂಟಿನ್ಯೂ ಆಗಲಿಕ್ಕೆ ಆಗುವುದಿಲ್ಲ. ಆದರೆ ತಾವು ಯಾವ ಸ್ಟೇಜಿಗೆ ತಂದು ಇಡುತ್ತೀರಿ ಎಂದರೆ, ಎಲ್ಲಾ ಹುದ್ದೆಗಳನ್ನು ಸೇರಿಸಿ ಆರ್ಟಿಕಲ್ 102 ಏನು ಇದೆ ಡಿಸ್ ಕ್ವಾಲಿಫಿಕೇಷನ್ ಆಫ್ ಮೆಂಬರ್. ಕ್ಲಾಸ್ (1) ಅದರ ಅಗತ್ಯವೇ ಇಲ್ಲವೆಂದು ಇವತ್ತು ಕಾಣುತ್ತಿದೆ. ಅರ್ಟಿಕಲ್ 102 ಕ್ಲಾಸ್ (1) ರಿಫಿಲ್ ಮಾಡಬಹುದು. ಏಕೆಂದರೆ ಅದು ಕ್ಲಿಯರ್ ಆಗಿ ಇದೆ. If he holds any office under the Government of India or the Government of any State other than an office declared by parliament by law not to disqualify its holder. ಇವತ್ತು ಎಲ್ಲಾ ಹುದ್ದೆಗಳನ್ನು ಸೇರಿಸಿ ಸೇರಿಸಿ ಯಾವ ಸ್ಥಿತಿಗೆ ತಂದು ಇಡುತ್ತೇವೆ ಎಂದರೆ ಅದನ್ನು ರಿಪೀಲ್ ಮಾಡಿಬಿಟ್ಟರೆ ಎಲ್ಲಾ ಸಮಸ್ಯೆ ಪರಿಹಾರವಾಗುತ್ತದೆ. ಈಗ ಎಲ್ಲಾ ಹುದ್ದೆಗಳನ್ನು ಸೇರಿಸಿದಾಗ ಆ ಒಂದು ಕ್ಲಾಸ್‌ನ ಅಗತ್ಯವಿಲ್ಲ. ಅದರ ಶಕ್ತಿಯೇ ಹೋಯಿತು. ನನಗೆ ಶಾಸಕರು ಅಧ್ಯಕ್ಷರಾಗುವ ಬಗ್ಗೆ ಏನೂ ಇಲ್ಲ ನನಗೆ ಈ ಶಾಸಕ ಸ್ಥಾನಕ್ಕಿಂತ ಯಾವ ಅಧ್ಯಕ್ಷ ಹುದ್ದೆಯೂ ದೊಡ್ಡದು ಎಂದು ನಾನು ಅಂದುಕೊಳ್ಳುವುದಿಲ್ಲ. It is not a bigger post than the Member of Legislative Assembly. ಶಾಸಕ ಸ್ಥಾನ ಯಾವ ಅಧ್ಯಕ್ಷ ಸ್ಥಾನಕ್ಕಿಂತ ದೊಡ್ಡ ಹುದ್ದೆ ಎಂದು ನನ್ನ ಮನಸ್ಸಿನಲ್ಲಿದೆ. ಆದುದರಿಂದ ನೀವು ಯಾವುದೇ ಕಾರಣಕ್ಕೆ ಶಾಸಕ ಹುದ್ದೆಗಿಂತ ಯಾವ ದೊಡ್ಡ ಹುದ್ದೆ

ಕೊಡುತ್ತೇವೆಂದು ಭಾವಿಸುವುದು ತಪ್ಪು. ಒಂದು ವೇಳೆ ನಿಮಗೆ ಕೊಡಬೇಕೆಂದು ಇದ್ದರೆ ಇದು ತಿದ್ದುಪಡಿ ಆಗುವ ಅವಶ್ಯಕತೆ ಇರಲಿಲ್ಲ. ಅವಶ್ಯಕತೆ ಇದ್ದರೆ ನಾಡಿದ್ದು ಸದನದಲ್ಲಿ ತರಬಹುದು ಎಂದು ಹೇಳುತ್ತಾ ನನಗೆ ಅವಕಾಸ ಕೊಟ್ಟಿದ್ದಕ್ಕೆ ಮಾನ್ಯ ಉಪಾಧ್ಯಕ್ಷರಿಗೆ ವಂದಿಸುತ್ತಾ ಈ ಬಿಲ್‌ನ ಅವಶ್ಯಕತೆ ಇಲ್ಲವೆಂದು ಪುನರುಚ್ಚರಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) : ಮಾನ್ಯ ಉಪಾಧ್ಯಕ್ಷರೇ, ನಾನು ಹೆಚ್ಚಾಗಿ ವಿಧೇಯಕಕ್ಕೆ ಸಂಬಂಧಿಸಿದಂತೆ ಮಾತನಾಡಲಿಕ್ಕೆ ಇಷ್ಟಪಡುವುದಿಲ್ಲ ಜನರಲ್ಲಾಗಿ ಕೆಲವು ವಿಷಯಗಳನ್ನು ಮಾತನಾಡಿ ರೆಕಾರ್ಡ್‌ನಲ್ಲಿ ಇಡುವುದಕ್ಕೆ ಅವಕಾಶ ಮಾಡಿಕೊಡೋಣ ಎನ್ನತಕ್ಕಂಥ ಭಾವನೆಯಿಂದ ನಿಂತಿದ್ದೇನೆ. ಲೋಕಾಯುಕ್ತದವರು ನಮಗೆಲ್ಲಾ ಪ್ರತಿ ವರ್ಷ ನಮ್ಮ ಆಸ್ತಿ ಪಾಸ್ತಿ–ಸಾಲ ಇವೆಲ್ಲಾ ಡಿಕ್ಲೇರ್ ಮಾಡಬೇಕೆಂದು ಒಂದು ನಿಬಂಧನೆ ಹಾಕಿದ್ದಾರೆ. ನಾವು ಅದನ್ನು ಡಿಕ್ಲೇರ್ ಮಾಡದೇ ಇದ್ದಾಗ, ಒಂದು ರಿಮೈಂಡರ್ ಕೊಟ್ಟು ಆಮೇಲೆ ನಮ್ಮ ಹೆಸರುಗಳನ್ನು ಪಬ್ಲಿಷ್ ಮಾಡುತ್ತಾರೆ. ಲೋಕಾಯುಕ್ತಕ್ಕೆ ತಮ್ಮ ಆಸ್ತಿ ಸಾಲದ ವಿವರಗಳನ್ನು ಕೊಟ್ಟಿಲ್ಲವೆಂದು ಹೆಸರುಗಳನ್ನು ಪಬ್ಲಿಷ್ ಮಾಡುತ್ತಾರೆ. ಇದಕ್ಕೆ ಬೇಸಿಸ್ ಒಂದೇ. ಸಾರ್ವಜನಿಕ ಜೀವನದಲ್ಲಿರತಕ್ಕಂಥವರು, ಚುನಾಯಿತ ಪ್ರತಿನಿಧಿಗಳು ಪಬ್ಲಿಕ್ ಸರ್ವೆಂಟ್ಸ್ ಎನ್ನತಕ್ಕಂಥ ಡೆಫನೇಷನ್‌ಗೆ ನಾವು ಬರುತ್ತಿದ್ದೇವೆ. ಈ ಪಬ್ಲಿಕ್ ಸರ್ವೆಂಟ್ ಆಕ್ಟ್ ಮೊದಲಿಗೆ 1870ರಲ್ಲಿ ಅಸ್ತಿತ್ವಕ್ಕೆ ಬಂತು. 1870ರಲ್ಲಿ ಈ ಪಬ್ಲಿಕ್ ಸರ್ವೆಂಟ್ ಆಕ್ಟ್ ಜಾರಿಗೆ ಬಂದಾಗ They had in mind only the civil servants ಬಹುಶಃ ನಮಗೆ ಸ್ವಾತಂತ್ರ್ಯ ಬಂದ ನಂತರ ಇದರ ಪೂರ್ಣ ಪ್ರಮಾಣದ ಪ್ರಯೋಗ ಯಾವಾಗ ಆಯಿತು ಅಂದರೆ ನಾವು ಪಬ್ಲಿಕ್ ಸರ್ವೆಂಟ್ ಆಕ್ಟ್ ಕೆಳಗಡೆ ಬರುತ್ತಿವೆಯೋ ಅಥವಾ ಇಲ್ಲವೊ ಎನ್ನುವ ವಾದ ಮೊದಲಿಗೆ ಬಿಜು ಪಟ್ನಾಯಕ್‌ರವರ ಮೇಲೆ ಪ್ರಾರಂಭವಾಗಿ ಅನಂತರ ಕರುಣಾನಿಧಿರವರ ವಿಷಯಕ್ಕೆ ಬಂದಾಗ Supreme Court laid down a law declaring that all of us are public servants. ಈ ಪ್ರಾಫಿಟ್ ಎನ್ನತಕ್ಕಂಥ ಪದ ಏನಿದೆ This is used only in business politics is service. Atleast, presumably the definition is ಸಾರ್ವಜನಿಕ ಜೀವನ ಎಂದರೆ ನಾವುಗಳು ಸೇವೆ ಮಾಡುವುದಕ್ಕೆ ಬಂದಿದ್ದೇವೆ ಎಂದು ಅರ್ಥ ಆದರೆ ಲಾಭ ಮಾಡುವುದಕ್ಕೆ ಬರುವುದೆಂದರೆ ಅದು ವ್ಯಾಪಾರ ಆಗುತ್ತದೆ. ಈಗ ನಾವು ಎಂಥ ಸ್ಥಿತಿಯಲ್ಲಿದ್ದೇವೆಂದರೆ ಸಾರ್ವಜನಿಕ ಜೀವನದಲ್ಲಿ ಲಾಭದ ವಿಚಾರವನ್ನು ಮಾತನಾಡುವುದಕ್ಕೆ ಬಂದು

ತಲುಪಿದೇವೆ. ತಾಂತ್ರಿಕವಾಗಿ ಇದೊಂದನ್ನು ನಾವು ಎಗ್ಜಮ್ಟ್ ಮಾಡಿಕೊಳ್ಳತಕ್ಕಂಥದ್ದು ಸಾರ್ವಜನಿಕ ಜೀವನದಲ್ಲಿ ನಾವು ಎಷ್ಟರಮಟ್ಟಿಗೆ ಕೆಳಕ್ಕೆ ಇಳಿದ್ದೇವೆಂದರೆ, ಲಾಲ್‌ಬಹುದ್ದೂರ್‌ಶಾಸ್ತ್ರೀರವರಿಂದ ಪ್ರಾರಂಭ ಮಾಡಿಕೊಂಡು ಹೇಳುವುದಾದರೆ, ಟ್ರೈನ್ ಆಕ್ಸಿಡೆಂಟ್ ಆಗುತ್ತದೆಂದರೆ, ಎಲ್ಲೋ ಒಂದು ಕಡೆ ಅಲ್ಲಿ ಆಗಿರತಕ್ಕಂಥ ಸಾವು-ನೋವಿಗೆ ಪರೋಕ್ಷವಾಗಿ ನಾನೇ ಹೊಣೆ ಇದ್ದೇನೆಂದು ಆ ಮಂತ್ರಿಗಿರಿ ಬೇಡವೆಂದು ಹೇಳುತ್ತಾರೆ. ಮತ್ತೆ ಯಶೋದಮ್ಮ ನವರೂ ಕೂಡ ಪಾನನಿರೋಧ ವಿಷಯ ಬಂದಾಗ ಮಂತ್ರಿಗಿರಿಗೆ ರಾಜೀನಾಮೆ ಕೊಡುತ್ತಾರೆ. ನಾವು ಯಶೋದಮ್ಮನವರನ್ನು ಉದಾಹರಣೆಯಾಗಿ ಇಟ್ಟುಕೊಳ್ಳಬೇಕೆಂದೂ ಮತ್ತು ನಾವುಗಳು ವಾಪಸ್ಸು ಲಾಲ್‌ಬಹುದ್ದೂರ್ ಶಾಸ್ತ್ರೀ ಯುಗಕ್ಕೆ ಹೋಗಬೇಕೆಂದು ನಾನ್ನು ಹೇಳುತ್ತಿಲ್ಲ.It is not possible ಮಾತನಾಡುವುದು ಸುಲಭ, ಆದರೆ. ಕೆಳಗೆ ಇಳಿಯತಕ್ಕಂಥದ್ದನ್ನು ಸ್ವಲ್ಪ ನಿಧಾನವಾಗಿ ಇಳಿಯೋಣ ಇಷ್ಟೊಂದು ಫಾಸ್ಟ್ ಆಗಿ ಬೇಡಬೆಂದು ನಾನು ಹೇಳುತ್ತಿದ್ದೇನಷ್ಟೇ. ನಾವು ಇವತ್ತಿನ ದಿವಸ ಎಲ್ಲಿಗೆ ಬಂದಿದ್ದೇವೆ ಎನ್ನುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ. ಇವರು ಈಗ ಕ್ಯಾಬಿನೆಟ್ ವಿಸ್ತರಣೆ ಮಾಡಬೇಕು ಕ್ಯಾಬಿನೆಟ್ ಮಾಡಬೇಕಾದರೆ ಎಲ್ಲಾ ಫ್ಯಾಕ್ಟರನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಅಂದರೆ, ಅವರು ಯಾವ ಜಿಲ್ಲೆಯವರು ಯಾವ ಕುಲದವರು ಮತ್ತು ಯಾವ ಉಪ ಪಂಗಡ ಎನ್ನತಕ್ಕಂಥದ್ದನ್ನು ತಿಳಿದುಕೊಳ್ಳಬೇಕು. ಹಾಗೆಯೇ ಯಾವ್ಯಾವ ಸಮಾಜಕ್ಕೆ ಎಷ್ಟೆಷ್ಟು ಪ್ರಾತಿನಿಧ್ಯ ಹೋಗಿದೆ ಎನ್ನತಕ್ಕಂಥದ್ದನ್ನು ನೋಡಬೇಕು. ಪೋರ್ಟ್ ಪೊಲಿಯೋ ಹಂಚತಕ್ಕಂಥ ಸಂದರ್ಭದಲ್ಲಿ ಮತ್ತೆ ಜಾಗ್ರತೆ ವಹಿಸಬೇಕು. ಒಂದು ವೇಳೆ ಒಂದೇ ಸಮಾಜದವರಿಗೆ ಹೆಚ್ಚು ಸ್ಥಾನ ಕ್ಯಾಬಿನೆಟ್‌ನಲ್ಲಿ ಕೊಡುವುದಕ್ಕೆ ಆಗದೆ ಇದ್ದರೆ, ಅಂಥವರನ್ನು ಇಂಡಿಪೆಂಡೆಂಟ್ ಸ್ಟೇಟ್ ಮಿನಿಸ್ಟರ್ ಮಾಡಿದಾಗ ಅವರಿಗೆ ಪವರ್ ಫುಲ್‌ಪೋರ್ಟ್ ಪೊಲಿಯೋ ಕೊಡಬೇಕಾಗುತ್ತದೆ. ಇವೆಲ್ಲವನ್ನೂ ನಾವೆಲ್ಲಾ ನೋಡಿಲ್ವ? ಇದನ್ನು ಈ ಸರ್ಕಾರಕ್ಕೆ ಅನ್ವಯಿಸಿ ನಾನು ಹೇಳುತ್ತಿಲ್ಲ.ನಾನು ಪಕ್ಷದ ಸಂಕೋಲೆಯಿಂದ ಬಿಡುಗಡೆಯಾಗಿ 10 ಅಡಿ ದೂರ ಹೋಗಿ ಮತ್ತು ಈ ಸದನದ ಸದಸ್ಯನಾಗಿ ನಿರ್ವಿಚಾರವಾದ ಮನಸ್ಸಿನಿಂದ ನಾನು ಇಲ್ಲಿ ಮಾತನಾಡುತ್ತಿದ್ದೇನೆ,. ಹಿಂದಿನ ಸರ್ಕಾರ, ಮುಂದೆ ಬರತಕ್ಕಂಥ ಸರ್ಕಾರ ಮತ್ತು ಇವತ್ತು ಇರತಕ್ಕಂಥ ಸರ್ಕಾರಗಳಿಗೆಲ್ಲಾ ಬಂದಿರತಕ್ಕಂಥ ಏನೊಂದು ಈ ವ್ಯಸನದ ಕತೆ ಇದೆ ಅದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ಒಬ್ಬ ಸಬ್‌ಇನ್ಸ್‌ಪೆಕ್ಟರ್ ಬಂದು "ಸಾರ್ ನಾನು ಮೂರು ವರ್ಷಗಳಿಂದ ಸಿಆರ್‌ಇ

ಸೆಲ್ ನಲ್ಲಿ ಸಾಯುತ್ತಿದ್ದೇನೆ. ಆದ್ದರಿಂದ ನನಗೆ ಸಿಟಿ ಮಾರ್ಕೆಟ್ ಪೋಲಿಸ್ ಸ್ಟೇಷನ್ ಕೊಡಿಸಿ" ಎಂದರೆ ಅದು ಏನು ತಪ್ಪು ತಾವೇ ಹೇಳಿ? ಒಬ್ಬ ಫಾರೆಸ್ಟ್‌ರ್ ಬಂದು "ಸ್ವಾಮಿ ನನಗೆ ಚೆಕ್ ಪೋಸ್ಟ್ ಹಾಕಿಸಿ" ಎಂದು ಕೇಳುತ್ತಾನೆ. ಆತ ಏನ್ನೂ ಕನ್ಸರ್‌ವೇಟರ್ ಅಲ್ಲ. ರೇಂಜರ್ ಅಲ್ಲ, ಆತ ಒಬ್ಬ ಕೇವಲ ಫಾರೆಸ್ಟ್‌ರ್ ಆಗಿರುತ್ತಾನೆ. ಆತನಿಗೆ ಚೆಕ್ ಪೋಸ್ಟ್‌ನಲ್ಲಿ ಹಾಕಿದರೆ ನಾಲ್ಕು ಲಾರಿಗಳು ಬಂದಾಗ ನಾಲ್ಕು ಕಾಸನ್ನಾದರೂ ಕೊಡುತ್ತಾರೆ. ಆತ ನಿವೃತ್ತಿಯಾದ ಮೇಲೆ ಆತನಿಗೆ ಯಾರು ಕಾಸು ಕೊಡುತ್ತಾರೆ? ಈ ಆಫೀಸ್ ಆಫ್ ಪ್ರಾಫಿಟ್ ಎನ್ನತಕ್ಕಂಥದ್ದು, ಡಿಗ್ರೆಡೇಷನ್ ಆಫ್ ವ್ಯಾಲ್ಯುಸ್ ಎನ್ನತಕ್ಕಂಥದ್ದು ಅಲ್ಲಿಂದ ಎಲಿಮೆನೇಟ್ ಆಗಿ ಇಲ್ಲಿಗೆ ಬಂದಿದೆ. ನಾವು ಅದನ್ನು ಮಾಡಿದೆವೋ ಅಥವಾ ಅವರು ನಮ್ಮನ್ನು ಮಾಡಿದ್ದಾರೆಯೋ ಎನ್ನತಕ್ಕಂಥದ್ದು ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ನಾನು ಮಧ್ಯದಲ್ಲಿ ಇಂಟರ್‌ವೆನ್‌ಷನ್ ಆಗುತ್ತಿದ್ದೇನೆಂದು ತಾವು ದಯಮಾಡಿ ಭಾವಿಸಬಾರದೆಂದು ಕೇಳುತ್ತಾ ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಆಫೀಸ್ ಆಫ್ ಪ್ರಾಫಿಟ್ ಕಾನ್ಸೆಪ್ಟ್ ಏಕೆ ಬಂತು ಎಂದರೆ ಇಲ್ಲಿ ಸದಸ್ಯರಾಗಿರತಕ್ಕಂಥವರು ಅಂದರೆ ಲೋಕಸಭೆ ಅಥವಾ ಈ ಸದನದಲ್ಲಿ ಸದಸ್ಯರಾಗಿರ ತಕ್ಕಂಥವರು ನಿರ್ವಿಕಾರವಾಗಿ, ನಿಷ್ಪಕ್ಷಪಾತವಾಗಿ ಮಾತನಾಡಬೇಕಾಗಿರತಕ್ಕಂಥ ಅಗತ್ಯತೆ ಇರುವುದರಿಂದ ಅವರು ಈ ಕಾನೂನಿನಡಿಯಲ್ಲಿ ಹೊರತು ಪಡಿಸಿರುವ ಹುದ್ದೆಗಳನ್ನು ಬಿಟ್ಟು ಉಳಿದ ಹುದ್ದೆಗಳನ್ನು ಅಲಂಕರಿಸಬಾರದು. ಆ ಹುದ್ದೆಗಳನ್ನು ಅಲಂಕರಿಸಿದರೆ ಅವರ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕಡಿವಾಣ ಆಗುತ್ತದೆ ಎನ್ನತಕ್ಕಂಥ ಕಾರಣದಿಂದ ಆ ಕಾಲದಲ್ಲಿಯೇ ಈ ಆಫೀಸ್ ಆಫ್ ಪ್ರಾಫಿಟ್ ಎನ್ನತಕ್ಕಂಥದ್ದನ್ನು ಮಾಡಿದರು. ಲಾಭದಾಯಕವೆಂದರೆ ವ್ಯವಹಾರಿಕ ಲಾಬ ಎಂಬ ಅರ್ಥದಿಂದ ಅಲ್ಲ. ಭೌತಿಕ ನಿಯಂತ್ರಣ ಮಾಡತಕ್ಕಂಥದ್ದೂ ಕೂಡ ಅದು ಲಾಭದಾಯಕ ವಾದುದ್ದೇ The dishonesty of your thinking Dishonesty intelectually also is as equally bad as your straightway materialistic consideration. ಆ ಕಾರಣಕ್ಕಾಗಿಯೇ ಆ ಸಂಧರ್ಭದಲ್ಲಿ ಇದನ್ನು ತಂದಿದ್ದಾರೆ ವಿನಃ ಬೇರೆ ಕಾರಣ ಕ್ಕೋಸ್ಕರ ಈ ವಿಚಾರವನ್ನು ತಂದಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾಂತ್ರಿಕವಾಗಿ ಮಾನ್ಯ ಪ್ರಕಾಶ್ ರವರು ಏನೇ ಹೇಳಲಿ. ಆದರೆ, ಅದೊಂದು ದಾರಿಯಲ್ಲಿದ್ದಾರೆ. ನಾನೊಂದು ದಾರಿಯಲ್ಲಿದ್ದೇನೆ. ನನ್ನ ಹಿನ್ನಲೆಯಲ್ಲಿ ನನ್ನಂಥವನ್ನು ಇಲ್ಲಿಯವರೆಗೆ ಬರುವುದೇ ಬಹಳ ದುಸಾಧ್ಯದ ವಿಚಾರ. ಏನೋ ಬಂದು ಬಿಟ್ಟಿದ್ದೇವೆ. ಮುಂದೆ ಏನು

ಆಗುತ್ತದೆಯೋ ನನಗೆ ಗೊತ್ತಿಲ್ಲ. ಇದರಿಂದ ಏನೇ ಪರಿಣಾಮವಾದರೂ ಯಾರಿಗೆ ಯಾವುದೇ ರೀತಿಯ ಮೆಸೇಜ್ ಹೋದರೂ ಪರವಾಗಿಲ್ಲವೆಂದು ನಾನು ಹೀಗೆ ಮಾತನಾಡಬೇಕೆಂದು ಈ ರೀತಿಯಾಗಿ ಮಾತನಾಡುತ್ತಿದ್ದೇನೆ. ನಾನು ಮೊದಲೇ ಹೇಳಿದ ಹಾಗೆ ಬಿಲ್‌ಗೆ ಸಂಬಂಧಪಟ್ಟಂತೆ ನಾನು ಮಾತನಾಡುತ್ತಿಲ್ಲ. I am slightly away from all these things ಪಬ್ಲಿಕ್ ಸೆಕ್ಟ್ರರ್ ಅಂಡರ್ ಟೇಕಿಂಗ್ಸ್‌ನ್ನು ಪ್ರಾರಂಭ ಮಾಡಬೇಕೆಂದು ಗೌರ್ನಮೆಂಟ್ ಆಫ್ ಇಂಡಿಯಾದವರು ಜವಹಾರಲಾಲ್‌ನೆಹರೂರವರ ಕಾಲದಲ್ಲಿ ಮಾಡಿದಂಥ ಒಂದು ಪಾಲಿಸಿ ಆಗಿದೆ. ಮಿಕ್ಸ್‌ಡ್ ಎಕನಾಮಿ ದೃಷ್ಟಿಯಿಂದ ಪಬ್ಲಿಕ್ ಸೆಕ್ಟ್ರರ್ ಅಂಡರ್ ಟೇಕಿಂಗ್ಸ್‌ನ್ನು ಎನ್ ಕರೇಜ್ ಮಾಡಬೇಕೆಂದು ಮಾಡಿದರು. ಪಬ್ಲಿಕ್ ಸೆಕ್ಟ್ರರ್ ಅಂಡರ್ ಟೇಕಿಂಗ್ಸ್ ಅಡಿಯಲ್ಲಿ ಆಯಾ ರಾಜ್ಯ ಸರ್ಕಾರಗಳ ವ್ಯಾಪ್ತಿಯಲ್ಲಿ ಪ್ರಾರಂಭ ಮಾಡಿರತಕ್ಕಂಥ ಬೋರ್ಡ್ಸ್ ಮತ್ತು ಕಾರ್ಪೋರೇಷನ್‌ಗಳಿಗೆ ಪ್ರಾರಂಭದ ಹಂತದಲ್ಲಿ ಪರಿಣತಿ ಇರತಕ್ಕಂಥವರನ್ನು ನೇಮಕ ಮಾಡಿಕೊಳ್ಳತಕ್ಕಂಥದ್ದು, ಅಡ್ಮಿನಿಸ್ಟ್ರೇಟಿವ್ ಸೂಪರ್ ವಿಜನ್‌ಗೆ ಆಫೀಸರ್‌ಗಳನ್ನು ಹಾಕತಕ್ಕಂಥದ್ದನ್ನು ಮಾಡುತ್ತಿದ್ದೇವೆ. ಕ್ರಮೇಣ ಇದು ಎಲ್ಲಿಗೆ ಬಂತು? ಕಾಂಪ್ರಮೈಸ್ ಆಗಿ ಎಗ್ಜಮ್ಷನ್ ತಂದೆವು ಆನಂತರ ದಕ್ಷತೆ ಇರತಕ್ಕಂಥ ಕೆಲವು ಶಾಸಕರುಗಳನ್ನು ಇಂಥವುಗಳಿಗೆ ನೇಮಕ ಮಾಡಿಕೊಂಡು ಬಂದೆವು. There are some politicians, who have done excellent job. ಇಲ್ಲ ಎನ್ನತಕ್ಕಂತ ಪ್ರಶ್ನೆ ಖಂಡಿತ ಏನಿಲ್ಲ. ಆದರೆ ಮತ್ತೆ ಇಲ್ಲಿ ಅಧಿಕಾರದ ಹಂಚಿಕೆ ಪ್ರಶ್ನೆ. ಇವತ್ತು ನಾವು ಎಲ್ಲಿಗೆ ಬಂದು ತಲುಪಿದ್ದೇವೆಂದರೆ, ಮಾನ್ಯ ಯಡಿಯೂರಪ್ಪನವರು ಒಬ್ಬ ಶಾಸಕರನ್ನು ಛೇರ್ಮನ್ ಆಗಿ ನೇಮಕ ಮಾಡುತ್ತೀರಿ. ಮತ್ತೆ ಹೊಸದಾಗಿ ಐಎಎಸ್ ಫಾಸ್ ಮಾಡಿಕೊಂಡು ಬಂದಂಥವನನ್ನು ಅಲ್ಲಿಗೆ ಎಂ.ಡಿ ಮಾಡುತ್ತೀರಿ. ಆ ಆಫೀಸರ್ ಇವರ ಮಾತನ್ನೇ ಕೇಳುವುದಿಲ್ಲ. ಇವರು ಕಾರಿನಲ್ಲಿ ಓಡಾಡಬಹುದು. ಮನೆಯಲ್ಲಿದ್ದು ಸಂಬಳ ಕೂಡ ತೆಗೆದುಕೊಳ್ಳಬಹುದು. ಅವರು ಇವರಿಗೆ ಯಾವುದೇ ಫೈಲ್‌ನ್ನು ತೋರಿಸುವುದಿಲ್ಲ. ಮೀಟಿಂಗ್ ಕನ್ವೀಸ್ ಮಾಡಿದರೆ ಪ್ರಿಸೈಡ್ ಮಾಡುತ್ತಾರೆ. ಅವರು ಮಾತ್ರ ಛೇರ್ಮನ್‌ಗಾಗಿ ಕಾಯುವುದಕ್ಕೆ ಹೋಗುವುದೇ ಇಲ್ಲ. ಇಂಥ ಸಂದರ್ಭದಲ್ಲಿ ಆ ಎಂ.ಡಿ. ತೆಗೆದು ಹಾಕಿ ನಮ್ಮವರು ಯಾರನ್ನಾದರೂ ಹಾಕಿ ಎಂದು ಕೇಳಬಹುದು. ಎಕ್ಸಿಕ್ಯೂಟಿವ್ ಪವರ್ಸ್‌ನ್ನು ಛೇರ್ಮನ್ ಆಗಿರತಕ್ಕಂಥವರಿಗೆ ತಾವು ಟ್ರಾನ್ಸ್ ಫರ್ ಮಾಡದಿದ್ದರೆ, ಅವರಿಗೆ ಆ ಸಂಸ್ಥೆಯ ನೇತೃತ್ವವನ್ನು ವಹಿಸಿಕೊಂಡು ದಕ್ಷತೆಯಿಂದ ಕೆಲಸ ಮಾಡಬೇಕೆಂದು ಹೇಳಿದಾಗ

ಯಾರೇ ಎಂ.ಡಿ. ಇದ್ದರೂ ಕೂಡ ಇದಕ್ಕೆ ಅವಕಾಶ ನೀಡುವುದಿಲ್ಲ. profit is the essence of all these things ಸಾರ್ವಜನಿಕ ಜೀವನ 20 ವರ್ಷಗಳ ಕೆಳಗೆ ಹೇಗಿತ್ತೆಂದು ಮತ್ತು 40 ವರ್ಷಗಳ ಕೆಳಗೆ ಹೇಗಿತ್ತೆಂಬುದು ಹಾಗೆಯೇ ಇವತ್ತು ಹೇಗಾಗಿದೆ ಎನ್ನತಕ್ಕಂಥದರ ಬಗ್ಗೆ ನಾವು ಮಾತನಾಡಿಕೊಳ್ಳೋಣ. ಮೊದಲು ನಾವು ಬಸ್ಸಿನಲ್ಲಿ ಓಡಾಡುತ್ತಿದ್ದಾಗ ನಮ್ಮ ಜನ ನಮ್ಮನ್ನು ನೋಡಿ ಹೆಮ್ಮೆ ಪಡುತ್ತಿದ್ದರು. ಆದರೆ, ಇವತ್ತಿನ ದಿವಸ ನಾಚಿಕೆ ಪಡುತ್ತಾರೆ. ಇವನಿಗೆ ಏನು ಬಂದಿದೆ ಎಂದು ಮಾತನಾಡಿಕೊಳ್ಳುತ್ತಾರೆ. ಭ್ರಷ್ಟಾಚಾರವನ್ನು ವೈಭವೀಕರಿಸಿ ಅದೊಂದು virtue ಎಂದು ನೋಡತಕ್ಕಂಥ ವಾತಾವರಣಕ್ಕೆ ನಾವು ಬಂದು ತಲುಪಿದ್ದೇವೆ. ಒಂದು ವೇಳೆ ನೀವು ಭ್ರಷ್ಟರಾಗುವುದಕ್ಕೆ ಆಗದೇ ಇದ್ದರೆ ನೀವು ಇನ್ ಕಾಂಪಿಟೆಂಟ್, ನಿಮಗೆ ಚೈತನ್ಯ ಇಲ್ಲ, ಧೈರ್ಯ ಇಲ್ಲವೆಂದು ತಿಳಿದುಕೊಳ್ಳುತ್ತಾರೆಯೇ ಹೊರತು ನೀವು ಪ್ರಾಮಾಣೀಕರೆಂದು ತಿಳಿದುಕೊಳ್ಳುವುದಿಲ್ಲ. ಮಾನ್ಯ ಕುಮಾರಸ್ವಾಮಿಯವರು ಇನ್ನೂ ಚಿಕ್ಕ ವಯಸ್ಸಿನವರು. ಇವತ್ತಿನ ದಿವಸ ಯಾರಿಗೆ ಆದರ್ಶಗಳು ಇರುವುದಕ್ಕೆ ಸಾಧ್ಯ? ಈಗಲೋ ಆಗಲೋ ಪ್ರಪಂಚ ಬಿಟ್ಟು ಹೋಗುವವರಿಗೆ ಆದರ್ಶಗಳನ್ನು ಮೈಗೂಡಿಸಿಕೊಳ್ಳುವುದಕ್ಕೆ ಸಾಧ್ಯವೆ? Only it is possible for an young man like you. ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಬಿಲ್‌ನ್ನು ಪಾಸ್ ಮಾಡಿಸಿಕೊಂಡು, ಡಿಸ್ಕ್ರಿಷನ್‌ನನ್ನು ಉಪಯೋಗ ಮಾಡಿಕೊಳ್ಳಿ ಮತ್ತೆ ಟ್ಯಾಲೆಂಟ್ ಇರತಕ್ಕಂಥ ಕೆಲವರನ್ನು ನೇಮಕ ಮಾಡಿ. ಅವರಿಗೆ ಪ್ರಾಪರ್ ಪೀಪಲ್‌ನ್ನು ಕೋ-ಆರ್ಡಿನೇಟ್ ಮಾಡುವುದಕ್ಕೋಸ್ಕರ ಎಂ.ಡಿ. ಯನ್ನು ನೇಮಕ ಮಾಡಿ ಅವರಿಂದ ಏನಾದರೂ ಉಪಯೋಗವಾಗುವಂತೆ ಮಾಡಿ ಸಾರ್ವಜನಿಕರ ಮನಸ್ಸಿನಲ್ಲಿ ಇವತ್ತು ಇದೊಂದು ತಪ್ಪು ಎನ್ನತಕ್ಕಂಥ ಕಾನ್ಸೆಪ್ಟ್ ಇದೆ. ಆದ್ದರಿಂದ ಇದು ತಪ್ಪು ಎನ್ನತಕ್ಕಂಥದ್ದನ್ನು ತಾವೊಂದು ಪ್ರಯೋಗ ಮಾಡಿ ರುಜುವಾತು ಮಾಡಿದರೆ ನೀವು ಚರಿತ್ರೆಯಲ್ಲಿ ದಾಖಲೆ ಮಾಡುತ್ತೀರಿ. ಎನ್‌ಜಿಎಫ್‌ಗೆ ಛೇರ್ಮನ್ ಆಗತಕ್ಕಂಥವರು ತಕ್ಷಣ ರಿಯಲ್ ಎಸ್ಟೇಟ್ ದೃಷ್ಟಿ ಇಟ್ಟುಕೊಂಡು ಆ ಸೈಟ್‌ನ್ನು ನೋಡಿದರೆ ಹೇಗೆ? ಇವತ್ತಿನ ದಿವಸ ಜಗತ್ತೆಲ್ಲಾ ರಿಯಲ್ ಎಸ್ಟೇಟ್ ಆಗಿಬಟ್ಟಿದೆ. ಎಲ್ಲಾ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್‌ಗೆ ಇವತ್ತಿನ ದಿವಸ ಹೇರಳವಾದ ಭುಮಿ ಇದೆ. ಈಗಾಗಲೇ ಅವರೆಲ್ಲಾ ಅಲ್ಲಿ ಓಡಾಡುತ್ತಿರುತ್ತಾರೆ. ಏಕೆಂದರೆ ನಮ್ಮವರು, ನಮ್ಮ ಶಾಸಕರು ಇದಕ್ಕೆ ಛೇರ್ಮನ್ ಆಗುತ್ತಾರೆಂದು ಮತ್ತು ನಮ್ಮ ಯಜಮಾನರು ಅದಕ್ಕೆ ಆಗುತ್ತಾರೆ, ನಮ್ಮ ಫ್ರೆಂಡ್, ನಮ್ಮ ಚಿಕ್ಕಪ್ಪ ಇದಕ್ಕೆ ಛೇರ್ಮನ್ ಆಗುತ್ತಾರೆಂದು ಹೇಳಿಕೊಳ್ಳುತ್ತಾ, "ನಾನು ಇದರ ಬಗ್ಗೆ

ಮಾತನಾಡಿ ನಿಮಗೆ ರೆಡಿ ಮಾಡಿಕೊಡುತ್ತೇನೆ " ಎಂದು ಅವರೆಲ್ಲಾ ಈಗಾಗಲೇ ಬ್ಯಾಗ್ ಹಿಡಿದುಕೊಂಡು ಇಲ್ಲೆಲ್ಲಾ ತಿರುಗಾಡುತ್ತಿರುತ್ತಾರೆ.

ಶ್ರೀ ಬಿ.ಎಸ್. ಹೊರಟ್ಟಿ : ಎಲ್ಲಾ ಸರ್ಕಾರಗಳಲ್ಲಿಯೂ ಕೂಡ ಇದು ಇತ್ತು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಾನು ಈ ಸರ್ಕಾರದ ವಿಚಾರ ಹೇಳುತ್ತಿಲ್ಲವೆಂದು ಈಗಾಗಲೇ ಹೇಳಿದ್ದೇನೆ. ಇದೆಲ್ಲಾ ರಾಜಕೀಯ ವ್ಯವಸ್ಥೆ ಇವೆಲ್ಲಾ ನೀವು ತಂದಿದ್ದೀರೆಂದು ನಾನು ಹೇಳುತ್ತಿಲ್ಲ.

ಶ್ರೀ ಬಿ.ಎಸ್. ಹೊರಟ್ಟಿ : ನಮಗಷ್ಟೇ ಸಂಬಂಧ ಎನ್ನುವ ರೀತಿಯಲ್ಲಿ ತಾವು ಹೇಳುತ್ತಿದ್ದೀರಿ. ಇದು ಎಲ್ಲಾ ಸಂದರ್ಭದಲ್ಲಿತ್ತೆಂದು ತಾವು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ತಾವು ಅರ್ಥ ಮಾಡಿಕೊಳ್ಳಲಿಲ್ಲ. ನಿಮ್ಮ ಮಾನ್ಯ ಮುಖ್ಯಮಂತ್ರಿಯವರು ಕೇಳುತ್ತಿದ್ದಾರೆ. ಅಕ್ಷರ ಅಕ್ಷರ ಕೂಡ ನಾನು ಸ್ಪಷ್ಟಪಡಿಸಿ ಮಾತನಾಡುತ್ತಿದ್ದೇನೆ. ಭ್ರಷ್ಟರಾದವರು ನಿಮ್ಮಲ್ಲಿದ್ದರೆ ಕೆಟ್ಟವರು, ಇಲ್ಲಿದ್ದರೆ ಒಳ್ಳೆಯವರು ಎನ್ನತಕ್ಕಂಥ ಪ್ರಶ್ನೆ ಇಲ್ಲ. ಅಥವಾ ಒಂದೇ ಕಡೆ ಭ್ರಷ್ಟರು ಇದ್ದಾರೆ ಎನ್ನತಕ್ಕಂಥ ಪ್ರಶ್ನೆ ಇಲ್ಲ ಮತ್ತೆ ಇದು ಒಂದು ಪಕ್ಷಕ್ಕೆ ಸೀಮಿತವಾಗಿರತಕ್ಕಂಥ ಪ್ರಶ್ನೆ ಇಲ್ಲ. ನಾನು ಈಗಾಗಲೇ ಒಂದು ಮಾತನ್ನು ಹೇಳಿದೆ. ಅದೇನೆಂದರೆ ನನ್ನಂಥವರು ಇಲ್ಲಿಗೆ ಬರುವುದೇ ದೊಡ್ಡ ಕಷ್ಟ ಈಗ ಏನೋ ಬಂದು ಬಿಟ್ಟಿದ್ದೇನೆ. ಮುಂದೆ ಏನು ಆಗುತ್ತದೆಯೋ ಗೊತ್ತಿಲ್ಲ. ನನ್ನ ಮಾತಿನ ಪರಿಣಾಮ ಏನೇ ಆಗುವುದಾದರೂ ಚಿಂತೆ ಇಲ್ಲ. ನನ್ನ ಮನಸ್ಸಿನಲ್ಲಿರುವಂಥದ್ದು ವಾಂತಿ ಮಾಡಿಕೊಳ್ಳಬೇಕೆಂದು ನಾನು ಮಾತನಾಡುತ್ತಿದ್ದೇನೆ. ಈ ಬಿಲ್‌ಗೆ ಸಂಬಂಧಿಸಿ ನಾನು ಮಾತನಾಡುತ್ತಿಲ್ಲ. ಯಾರನ್ನೂ ದೂಷಣೆ ಮಾಡಬೇಕು ಅಥವಾ ಯಾರನ್ನಾದರೂ ಸಮರ್ಥಿಸಬೇಕೆಂದು ನಾನು ಮಾತನಾಡುತ್ತಿಲ್ಲ. ಆದರೆ ಒಂದು ಏನು ನೋವಾಗುತ್ತದೆಂದರೆ, ಯಾವ ಮನುಷ್ಯ ಪಾಪ ಕ್ಯೂನಲ್ಲಿ ನಿಂತುಕೊಂಡು ಮಳೆ ಬರಲಿ, ಗಾಳಿ ಬರಲಿ ಎಷ್ಟೇ ತೊಂದರೆ ಇರಲಿ ಭಕ್ತಿಯಿಂದ ಹೋಗಿ ಓಟನ್ನು ಹಾಕುತ್ತಾನೆ, ನಿಮಗೆ ಹಾಕಲಿ ನನಗೆ ಹಾಕಲಿ ಯಾರೋ ಒಬ್ಬರಿಗೆ ಹಾಕಲಿ ಅವನ ದಿನನಿತ್ಯದ ಜೀವನದ ಮಟ್ಟದ ಬೇಡಿಕೆಗಳು ಅವನ ಅಗತ್ಯೆಗಳ ಪೂರೈಕೆಯನ್ನು ಒಂದೆ ಒಂದು ಕ್ಷಣ ಫ್ರ್ಯಾಕ್ಷನ್ ಆಫ್ ದಿ ಸೆಕೆಂಡ್ ನಾವು ಇಮ್ಯಾಜಿನ್ ಮಾಡಿಕೊಂಡು ಅದನ್ನು ಏನಾದರು ಸರಿದೂಗಿಸುವುದರಲ್ಲಿ ನಮ್ಮ ಎಫರ್ಟ್ ಇಲ್ಲಿಂದ ಆಗಿದೆಯಾ ಎಂದು ಹೇಳಿ ಆ ಪ್ರಶ್ನೆಯನ್ನು ನಮಗೆ ನಾವು

ಹಾಕಿಕೊಂಡಾಗ ಮನಸ್ಸಿಗೆ ಬಹಳ ನಾಚಿಕೆಯಾಗಿ ಬಿಡುತ್ತದೆ. ಒಂದು ತರಹ: ಲಜ್ಜೆಯಾಗುತ್ತದೆ. ನಾವು ನಿಜವಾಗಲೂ ಕೂಡ ಎಂತಹ ಕೆಲಸವನ್ನು ಮಾಡುತ್ತಿದ್ದೇವೆ ಎಂದು ಅನ್ನಿಸುತ್ತದೆ. ಯಾವ ಸ್ಥಿತಿಗೆ ನಾವು ತಲುಪಿದ್ದೇವೆಂದರೆ, It is alright, individually if I am not a party to something, let me have the satisfaction. ಎನ್ನತಕ್ಕಂಥ ಒಂದು ಸ್ಥಿತಿಗೆ ನಾವು ಕಾಂಪ್ರೋಮೈಸ್ ಆಗಿ ಬಿಟ್ಟಿದ್ದೇವೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ವನಂತಿ ಮಾಡಿಕೊಳ್ಳುವುದು ಇಷ್ಟೆ. ಇಲ್ಲಿ ನೀವು ಹೇಳುತ್ತೀರಿ. in statement of objects and Reasons-The proposed amendment will not only assist the Government in avoiding unforeseen expenditure but also will help in having the rich experience of the peoples representatives in managing the affairs of different Boards and Corporations. This is the Bill. If it is chariot to the logical in spirit, we salute you. There is nothing like that, but if it results ultimately in political expediency... ನಾನೇನೂ ಅದಕ್ಕೆ ವ್ಯಾಖ್ಯಾನ ಮಾಡುವುದಿಲ್ಲ. ಎಷ್ಟೋ ಜನ ನಿಮ್ಮ ಹಿಂದೆ ಇದ್ದವರು ಹೋದಂತೆ ನೀವೂ ಒಬ್ಬರು ಆಗಿ ಹೋಗುತ್ತೀರಿ. ಮತ್ತೊಬ್ಬರು ಯಾರೋ ಬರುತ್ತಾರೆ. ಚರಿತ್ರೆಯಲ್ಲಿ ವಿಶಿಷ್ಟವಾದ ಸ್ಥಾನ ಏನೂ ಇರುವುದಿಲ್ಲ. ಎಲ್ಲಿಯಾದರೂ ಒಂದೆರಡು ಪೇಜ್ ನಿಮಗಾಗಿ ಚರಿತ್ರೆಯಲ್ಲಿ ದಾಖಲಿಸಿಕೊಳ್ಳಬೇಕು ಎನ್ನುವ ಚಪಲ ನಿಮಗೆ ಇದ್ದರೆ, ಆದರ್ಶ ನಿಮಗೆ ಇದ್ದರೆ ದಯಮಾಡಿ ಬೇರೆ ದಿಕ್ಕಿನಲ್ಲಿ ವಿಚಾರವನ್ನು ಮಾಡಿ. ಇದಕ್ಕಿಂತ ನಾವು ಹೆಚ್ಚಿಗೆ ಏನ್ನೂ ಹೇಳುವುದಕ್ಕಾಗುತ್ತದೆ. ಮಾನ್ಯ ಎಂ.ಪಿ. ಪ್ರಕಾಶ್‌ರವರಿಗೆ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಜವಾಹರಲಾಲ್ ನೆಹರುರವರು ಪ್ರಧಾನ ಮಂತ್ರಿಗಳಾಗಿದ್ದಾಗ ಆಚಾರ್ಯ ಕೃಪಲಾನಿಯವರು ವಿರೋಧಪಕ್ಷದಲ್ಲಿ ಕುಳಿತಿದ್ದರು. ಅಚಾರ್ಯ ಕೃಪಲಾನಿಯವರು ಪಂಡಿತ್ ಜಿಯವರಿಗೆ ಡಿಫೆನ್ಸ್ ಇಲಾಖೆಯವರು ಖರೀದಿ ಮಾಡಿರತಕ್ಕಂಥ ಕೆಲವು ಐಟಂಗಳು ಗುಣಮಟ್ಟ ಸರಿಯಿಲ್ಲ ಎನ್ನತಕ್ಕಂಥ ಮಾತು ಕೇಳಿ ಬಂದಿದೆ ಎಂದು ಹೇಳುತ್ತಾರೆ. It was even an allegation. ನೆಹರೂರವರು ಸೀಟ್‌ನಲ್ಲಿ ಸ್ಟ್ರಿಂಗ್ ಆಗುತ್ತಾರೆ. "ಆಚಾರ್ಯಜಿ ಈ ದೇಶ ಬಿಡುಗಡೆಯಾಗುವುದಕ್ಕೆ ನನ್ನಷ್ಟೇ ಶ್ರಮವನ್ನು ನೀವು ಪಟ್ಟಿದ್ದಿರಿ. Destiny ದೇಶ ನನ್ನ ಪರವಾಗಿ ಇತ್ತು ನಾನು ಇಲ್ಲಿದ್ದೇನೆ. ನೀವು ವಿರೋಧ ಪಕ್ಷದಲ್ಲಿದ್ದೀರಿ. ಯಾವ ಮರು ವಿಚಾರಣೆಯ ಮಾತು ಇಲ್ಲ I am cancelling the order ಎಂದು ಹೇಳುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ : ಈ ಸಂದರ್ಭ ಬಂದಿದೆ ಎಂದು ನಾನು ಹೇಳುತ್ತೇನೆ. ಲೋಕಸಭೆ ಎಲೆಕ್ಷನ್‌ನಲ್ಲಿ ಆಚಾರ್ಯ ಕೃಪಲಾನಿಯವರ ವಿರುದ್ಧ ಕೃಷ್ಣ ಮೆನನ್‌ರವರನ್ನು ನಿಲ್ಲಿಸಿ ಅವರಿಗೆ ಸಪೋರ್ಟ್ ಮಾಡಿದರು, ಆದ್ದರಿಂದ ಇದೇ ಸತ್ಯವೆಂದು ಭಾವಿಸಿಕೊಳ್ಳಬಾರದು.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಸ್ವಾತಂತ್ರ್ಯ ಹೋರಾಟಗಾರರಾಗಿ ಬೇರೆ, ಸದನದ ಸದಸ್ಯರಾಗಿ ಚುನಾವಣೆಗೆ ನಿಂತಾಗ ಪಕ್ಷದ ವತಿಯಿಂದ ಆ ಪಕ್ಷದ ಅಧ್ಯಕ್ಷರಾದವರು ಪಕ್ಷದಿಂದ ಅವರಿಗೆ ಮಾನ್ಯ ಬೆಂಬಲಿಸಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ : ತಮ್ಮ ಮಾತಿನಂತೆ, ಬಂಕಾಪುರ ಲೋಕಸಭಾ ಕ್ಷೇತ್ರದಲ್ಲಿ ರಾಮ್ ಮನೋಹರ ಲೋಹಿಯವರು ನಿಂತಾಗ ಅವರ ವಿರುದ್ಧ ಇದೇ ನೆಹರೂರವರು ಯಾವುದೇ ಅಭ್ಯರ್ಥಿಯನ್ನು ಕಾಂಗ್ರೆಸ್ ಪಕ್ಷದಿಂದ ನಿಲ್ಲಿಸುವುದಿಲ್ಲವೆಂದು ಹೇಳಿದರು. ಇವರಿಗೆ ಇಲ್ಲಿ ತೋರಿಸಿದ ಉದಾರತೆಯನ್ನು ಆಚಾರ್ಯ ಕೃಪಲಾನಿಯವರಿಗೆ ಏಕೆ ತೋರಿಸಲಿಲ್ಲ? ಸಮಯಕ್ಕೆ ತಕ್ಕಂತೆ ಬೇರೆ ಬೇರೆ ರೀತಿ ಮಾತನಾಡಿರುತ್ತಾರೆ, ಇದನ್ನೂ ಕೂಡ ತಾವು ಗಮನಿಸಬೇಕು.

6.30 ಪಿ.ಎಂ

ಶ್ರೀ ಕೆ.ಆರ್. ರಮೇಶ್ ಕುಮಾರ್ : ನನ್ನದೇನೂ ಆಕ್ಷೇಪಣೆ ಇಲ್ಲ I will accept it as a fact. Because ನೆಹರೂರವರು ಇಲ್ಲವಲ್ಲಾ ಡಿಫೆಂಡ್ ಮಾಡಿಕೊಳ್ಳುವುದಕ್ಕೆ. I can only quote from the events. I am not here to argue for Nehru. I am helpless. He is in a better position to do that. I will not contest.ವ್ಯಾಪಾರದ ಮೂಲ ಉದ್ದೇಶ "ವ್ಯಾಪಾರಂ ದ್ರೋಹ ಚಿಂತನಂ" ವ್ಯಾಪಾರದಲ್ಲಿ ಯಾರೂ ನಷ್ಟ ಮಾಡುವುದಿಲ್ಲ. ಲಾಭ ಮಾಡುವುದಕ್ಕಾಗಿಯೇ ವ್ಯಾಪಾರ ಮಾಡುತ್ತಾರೆ. ಈ ಲಾಭ ಎನ್ನುವಂತಹ ಅನಿಷ್ಟ ಪದ ವ್ಯಾಪಾರಕ್ಕೆ ಸಂಬಂಧಿಸಿರುವುದು, ನೀವುಗಳು ಕುಳಿತುಕೊಳ್ಳುವುದಕ್ಕೆ ಮೊದಲು ನಾನು ಒಂದು ಸೂಚನೆಯನ್ನು ಕೊಡುತ್ತೇನೆ. ಇನ್ನೊಂದು ತಿದ್ದುಪಡಿಯನ್ನು ತಂದರೂ ಚಿಂತೆಯಿಲ್ಲ. ಈ ಪ್ರಾಫಿಟ್ ಲಾಭ ಎನ್ನುವಂತಹ ಪದವನ್ನು ತೆಗೆಯಿರಿ ಮಾನ್ಯ ಮಾಧುಸ್ವಾಮಿಯವರೇ ಬೇರೆ ಯಾವುದಾದರೂ ಸೂಚನೆಯನ್ನು ಕೊಡಿ. ಅಟ್‌ಲಿಸ್ಟ್ ಎಷ್ಟು ಹೊಲಸು ಆಗಿದ್ದರೂ ಕೂಡ ಇನ್ನೊಂದಷ್ಟು ಗೌರವವಾಗಿ ಬದುಕುವುದಕ್ಕೆ ಅನುಕೂಲವಾಗುತ್ತದೆ. ನಮ್ಮಲ್ಲಿ ಇದನ್ನು ಮಾಡಿ ಕಳೂಹಿಸೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಮಾನ್ಯ ರಮೇಶ್‌ಕುಮಾರ್‌ರವರೆ aprofit cannot be considered as monetary consideration for

profiteer.ಯಾವುದೇ ಒಂದು ಒಳ್ಳೆಯದಾಗುವಂತಹ ಸ್ಥಿತಿಯಲ್ಲಿದ್ದು. ಎರಡು ಕಡೆ ಆಫೀಸ್ ಇರಬಾರದು, ಆ ಆಫೀಸನ್ನು ದುರುಪಯೋಗ ಮಾಡಿಕೊಳ್ಳಬಾರದು ಎನ್ನುವಂತಹ ಕಾರಣಕ್ಕಾಗಿಯೇ Office of profit ಎಂಬುದನ್ನು ಬಿಟ್ಟರೆ, cthis is not for monetary benefit.

SRI D.K. SHIVAKUMAR: sitting in an office and influencing the subject is also a profit.

SRI K.R. RAMESH KUMAR : You have got my point. I am thnkful to you. - - - -
ಮಾನಿಟರಿ ಟರ್ಮ್‌ನಲ್ಲಿ ಇಲ್ಲದಿರುವ ಕಾರಣಕ್ಕಾಗಿಯೇ ಆ ಪದ ಇರುವುದು ಬೇಡ, ಪ್ರಾಫಿಟ್ ಎನ್ನತಕ್ಕಂಥದ್ದು it relates to a business language ಇಷ್ಟನ್ನೂ ಹೇಳಿ, ನಮ್ಮ ಪಕ್ಷದ ಮುಖಂಡರೆಲ್ಲರೂ ಅವರ ಅಭಿಪ್ರಾಯಗಳನ್ನು ಹೇಳಿದ್ದಾರೆ. Infructuous ಆಯಿತು ಎನ್ನುವುದರ ಬಗ್ಗೆ ತಮಗೆ ಇಷ್ಟನ್ನೇ ಮಾನ್ಯ ಪ್ರಕಾಶ್‌ರವರೇ ಶ್ರೀಮತಿ ಸೋನಿಯಾಗಾಂಧಿಯವರು ಲೋಕಸಭೆಯ ಸದಸ್ಯರಾಗಿದ್ದು ಮತ್ತೊಂದು ಸಂಸ್ಥೆಗೆ Chair person ಆಗಿದ್ದರಿಂದ ಅದು ಅಫೀಸ್ ಅಫ್ ಪ್ರಾಫಿಟ್‌ಗೆ ಒಳಪಡುವುದರಿಂದ ಅವರು ಇಮ್ಮೀಡಿಯೇಟಾಗಿ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತಾರೆ. ಯಾವುದರ ಅಗತ್ಯವಾಗಿರಬೇಕಾಗಿತ್ತೇಂದರೆ, ಲೋಕಸಭಾ ಸದಸ್ಯತ್ವ ರದ್ದತಿಯಾಗಬೇಕಾಗಿತ್ತು. ಯಾವ ಸ್ಥಾನವನ್ನು ಅವರು ಕಳೆದುಕೊಳ್ಳಬೇಕ್ಕಾಗಿತ್ತೋ ಆ ಸ್ಥಾನಕ್ಕೆ ಅವರು ರಾಜೀನಾಮೆಯನ್ನು ಕೊಟ್ಟಾಗ, unnaturally infructuous ಆಗುತ್ತದೆ. ಅವರು ಅಲ್ಲಿಯವರೆವಿಗೂ ಅನುಭವಿಸಿದಂತಹ ಫಲ ಏನಾದರೂ ಇದ್ದಿದ್ದರೆ anybody can question Any citizen of this country can call in question by way of a public interest litigation and say if it is not retrospective, "you have drawn all these perks and other things, you are liable to cough up." ಎಂದು ಹೇಳಬಹುದು. in fructuous ಏಕೆ ಆಯಿತು ಎಂದರೆ. because she has already given up the Membership. And ಅವರಿಗೆ ಎಲ್ಲೋ ಒಂದು ಕಡೆ ಪಾಪ ಸೌಜನ್ಯ ಇತ್ತು. ಇಮ್ಮಿಡಿಯೇಟಾಗಿ ಅದಕ್ಕೆ ತಲೆಬಾಗಿ ರಿಸೈನ್ ಮಾಡಿ ಪುನ: ಮತ್ತೆ ಬೈ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡಿ ಜನರ ಮ್ಯಾನೆಡೇಟನ್ನು ತೆಗೆದು ಕೊಂಡು ಬಂದರು. And there is another occasion, when you see office of the Prime Ministership being offered to her and she had the humility to say'no.

ಶ್ರೀ ಎಂ.ಪಿ. ಪ್ರಕಾಶ್: ಸ್ಪೀಕರ್ ಆದಿಯಾಗಿ ಸೋನಿಯಾಗಾಂಧಿಯವರ ಆದರ್ಶವನ್ನು ಪರಿಪಾಲಿಸಿ ರಾಜೀನಾಮೆಯನ್ನು ಕೊಟ್ಟಿದ್ದರೆ ಲೋಕಸಭೆಯು ಇವತ್ತು ಯಾವ ಸ್ಥಿತಿಯಲ್ಲಿರುತ್ತಿತ್ತು, ಅದರ ಬಗ್ಗೆ ತಾವು ಯೋಚಿಸಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ನಮಗೆ ಅಷ್ಟೆಲ್ಲಾ ವಿಚಾರಗಳನ್ನು ವ್ಯಾಖ್ಯಾನ ಮಾಡುವಷ್ಟು ಅನುಭವ ಬರುವುದಕ್ಕೆ ಬಹುಶಃ ನಿಮ್ಮಷ್ಟು ಏಜ್ ಆಗಬೇಕು. ನಾನು ಏನು ಹೇಳುತ್ತೇನೆಂದರೆ ನಾನು ಏನು ಅವರನ್ನು ಇಲ್ಲಿ ಹಾಡಿ ಹೊಗಳುವುದಕ್ಕೆ ಆ ಪಕ್ಷಕ್ಕೆ ಹೋಗಲಿಲ್ಲ. ಮೊನ್ನೆ ಮೊನ್ನೆ ನಾನು 21 ವರ್ಷಗಳ ಕಾಲ ಹೊರಗಡೆ ಇದ್ದೆ. ನನಗೆ ಏನೂ ಅವರನ್ನು ಹಾಡಿ ಹೊಗಳಬೇಕೆಂದು ಇಲ್ಲ. I am only tolking about facts. See it is a fact that the Prime Ministership was offered to her and she declined is with all humility. Immediately in this connection, the moment it was mentioned, she resigned from her Membership as Loksabha and sought the mandate of the people. ಅವರು ಒಳ್ಳೆಯವರಲ್ಲಾ ಅಂದರೂ ಕೂಡ ಅವರಲ್ಲಿರುವಂತಹ ಕೆಲವು ಒಳ್ಳೆಯ ಗುಣಗಳನ್ನು ನಾವುಗಳು ತೆಗೆದುಕೊಂಡರೆ ಒಳ್ಳೆಯದಾಗುತ್ತದೆ. ತೀರಾ ನಾಚಿಗೆ ಹೇಸಿಗೆ ಬಿಟ್ಟು ಹೇಗಾದರೂ ಸರಿ ಏನು ಸಿಕ್ಕಿದರೂ ಸರಿ ಎಂಜಲು ತಿನ್ನುವುದಕ್ಕೆ ಆದರೆ ಸರಿ ಎಂಬ ಮನೋಭಾವ ಸರಿ ಅಲ್ಲ. ನಮ್ಮ ಸಿಸ್ಟಮ್ ಏನು ಬೇಕಾದರೂ ಜೀರ್ಣಿಸಿಕೊಳ್ಳುತ್ತದೆ. ಎಲ್ಲವನ್ನೂ ಹಾಳು ಮಾಡುವುದರ ಬದಲು ಒಂದು ಚೂರು ಮಾನಮರ್ಯಾದೆಯನ್ನು ಇಟ್ಟುಕೊಂಡಿದ್ದರೆ. ದೇಶಕ್ಕೆ ಒಳ್ಳೆಯದಾಗುತ್ತದೆಂದು ಹೇಳಿ ನನಗೆ ಈ ಮಾತುಗಳನ್ನು ಹೇಳುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ. ಮಾನ್ಯ ಮುಖ್ಯಮಂತ್ರಿಗಳು ಚಿಕ್ಕವಯಸ್ಸಿನವರು ಸ್ವಲ್ಪ ಆದರ್ಶಪ್ರಾಯವಾಗಿ ಇವುಗಳನ್ನು ಮುಂದೆ ಉಪಯೋಗವಾಗುವಂತೆ ಮಾಡಲಿ ಅವರ ಮುಖಾಂತರ ಈ ರಾಜ್ಯಕ್ಕೆ ಒಳ್ಳೆಯದಾಗಲಿ ಎಂದು ಹಾರೈಸುತ್ತೇನೆ.

ಉಪಾಧ್ಯಕ್ಷರು: ಈಗ ಲೇಟಾಯಿತು, ಸರ್ಕಾರದವರು ಮುಗಿಸುತ್ತಾರೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಎರಡು ನಿಮಿಷಕ್ಕಿಂತ ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ.

ಉಪಾಧ್ಯಕ್ಷರು : ಆಯಿತು. ಬಹಳ ಲೇಟಾಯಿತು.

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು): ಮಾನ್ಯ ಉಪಾಧ್ಯಕ್ಷರೆ ತರಾತುರಿಯಲ್ಲಿ ತಂದಿರುವಂತಹ ಈ ಬಿಲ್ಲಿಗೆ ಅನೇಕರು ಅವರವರ ಅಭಿಪ್ರಾಯಗಳನ್ನು ವ್ಯಾಖ್ಯಾನ ಮಾಡಿದ್ದಾರೆ. ಇದಕ್ಕೆ ಬೆಂಬಲವನ್ನು

ಕೊಡಬೇಕೋ ವಿರೋಧ ಮಾಡಬೇಕೋ ಎನ್ನುವುದನ್ನು ನಮ್ಮ ವಿರೋಧಪಕ್ಷದ ನಾಯಕರು ಅವರ ಪ್ರಸ್ತಾವನೆಯನ್ನು, ಬೆಂಬಲ ಹಾಗೂ ವಿರೋಧದ ವಿಚಾರವನ್ನು, ಎರಡನ್ನೂ ಹೇಳಿದ್ದಾರೆ. ನನ್ನ ಪ್ರಕಾರ ಈ ಬಿಲ್ ವೇಸ್ಟ್. ಇದರಿಂದ ಏನೂ ಪ್ರಯೋಜನ ನಿಮಗೆ ಆಗುವುದಿಲ್ಲ. ಏಕೆಂದರೆ ನಮ್ಮ ರಾಜ್ಯದಲ್ಲಿ ನಾವು ಬಹಳ ಮುಂದೆ ಹೋಗಿದ್ದೇವೆ. ಹಿಂದೆ 56,91,99,83 ಈ ವಿಚಾರದಲ್ಲಿ ಅಮೆಂಡ್‌ಮೆಂಟ್‌ಆಗಿ. ನಮ್ಮ ಕೋ ಆಪರೇಟೀವ್ ಇನ್‌ಸ್ಟಿಟ್ಯೂಷನ್‌ಕೂಡ ನಾವು ಅಮೆಂಡ್‌ಮೆಂಟ್ ಮಾಡಿ ಯಾವುದ್ಯಾವುದು ಇರುವುದಕ್ಕೆ ಸಾಧ್ಯ ಯಾವ್ಯಾವುದು ಇಲ್ಲವೆನ್ನುವುದೂ ಕೂಡ ನಾವು ಸ್ಪೆಸಿಫಿಕ್ಕಾಗಿ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳನ್ನು ನಿಗದಿ ಮಾಡಿ, ದೆಹಲಿಗೆ ಕಳೂಹಿಸಿರುವಂತಹ ದಾಖಲೆಗಳು ನಿಮ್ಮ ಹತ್ತಿರ ಇವೆ, ನಮ್ಮ ಹತ್ತಿರವು ಕೂಡ ಇದೆ. ಈಗಾಗಲೇ ಬೇಕಾದಷ್ಟು ಜನರು ಸ್ಥಾನಮಾನಗಳಲ್ಲಿ ಇದ್ದಾರೆ. ಬಹುಶ: ಯಾರೂ ತೆಗೆಯುವುದಕ್ಕೆ ಆಗುತ್ತಿರಲಿಲ್ಲ. ಈ ಸಂದರ್ಭದಲ್ಲಿ ಶಾಸಕರಾಗಿ ಈ ಅವಧಿಯಲ್ಲಿ ಯಾರ್ಯಾರಿಗೆ ಆಯಿತು, ಅವರು ಎರಡು ದಿನ ಇರಲಿ ಇಲ್ಲದೇ ಇರಲಿ ಅವರೆಲ್ಲರಿಗೂ ಕೂಡ ಇದು ಅನ್ವಯಿಸುತ್ತದೆ. ಇವತ್ತು ಟ್ರಾನ್ಸ್‌ಪೋರ್ಟ್ ಮಿನಿಸ್ಟರ್ ರವರು ಛೇರ್ಮನ್‌ರಾಗಿದ್ದಾರೆ. He is enjoying ಅದು ಪ್ರಾಫೀಟ್ ಎಂದು ಹೇಳಿ ನಾವು ತೆಗೆದುಹಾಕಬಹುದಲ್ಲಾ? ನಮ್ಮಲ್ಲೂ ಅ ಪ್ರಾವಿಜನ್ ಇದೆ. He can hold it... ಇಂತಹ ಸಂದರ್ಭದಲ್ಲಿ ಈ ಬಿಲ್ಲನ್ನು ತೆಗೆದುಕೊಂಡು ಬಂದು ಕೆಲವರನ್ನು ರಕ್ಷಣೆ ಮಾಡುವಂತಹ ಸಂದರ್ಭವೇನೂ ಇಲ್ಲ. The Chief Minister has every liberty. From the day one, he can appoint any one office of profit ಬರುವಂತಹ ಸಂದರ್ಭ ಇಲ್ಲಿ ಇಲ್ಲವೇ ಇಲ್ಲ. ಇಲ್ಲಿ ಸ್ಪೀಕರ್ ಡೆಪ್ಯುಟಿ ಸ್ಪೀಕರ್ ಏಕೆ ಸೇರಿಸಿದ್ದಾರೆ ನನಗೆ ಗೊತ್ತಿಲ್ಲ. ಬಹುಶ: ತಾವು ಇಲ್ಲಿಂದ ಹೊರಗಡೆಗೆ ಹೋದ ಮೇಲೆ ನಿಮಗೆ ಯಾರು ಆಫೀಸರ್ಸ್ ಗೈಡ್ ಮಾಡಿದ್ದಾರೆ. ಅವರನ್ನೂ ಕರೆಸಿ ಈ ಬಿಲ್ಲನ್ನು ವಿತ್‌ಡ್ರಾ ಮಾಡುತ್ತೀರೋ ಅಥವಾ ಇದಕ್ಕೆ ತಿದ್ದುಪಡಿಯನ್ನು ತರುತ್ತಿರೋ ಏನು ಎನ್ನುವುದನ್ನು ತಮ್ಮದೇ ಆದಂತಹ ರೀತಿಯಲ್ಲಿ ತಾವು ವ್ಯಾಖ್ಯಾನ ಮಾಡುವುದಾದರೆ ಅದನ್ನು ತಾವು ದಯವಿಟ್ಟು ಮಾಡಬಹುದು. ಇನ್ನೊಂದು ವಿಚಾರವೇನೆಂದರೆ. "The offices of the Chairman, the speaker, the Deputy Chairman, the Deputy Speaker, the Minister of State, the Deputy Minister, the Parliamentary Secretary, the leaders of the opposition ...." ಎಲ್ಲಾ ಈ ಬಿಲ್‌ನಲ್ಲಿ ಇದೆ. ನನಗೆ I Want a clarification ಕ್ಯಾಬಿನೆಟ್ ಮಿನಿಸ್ಟರ್‌ರವರನ್ನು ಮಿನಿಸ್ಟರ್ ಆಫ್ ದಿ ಸ್ಟೇಟ್ ಎಂದರೆ ಏನರ್ಥ ಇಲ್ಲವೆಂದರೆ ಬರೀ ಮಿನಿಸ್ಟರ್ ಎಂದರೆ ಏನರ್ಥ

ಎಂದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ even some of the cabinet ministers also enjoy this office. ಮಿನಿಸ್ಟರ್ ಆಫ್ ದಿ ಸ್ಟೇಟ್ ಎಂದರೆ, ಬರೀ State Minister can hold an office. ಅದೂ ಕೂಡ ಇಲ್ಲಿ ವ್ಯಾಖ್ಯಾನಕ್ಕೆ ಬರುತ್ತದೆ. ನಾವು ಯಾವ ರೀತಿಯಾಗಿ ಸ್ಪೀಕರ್ ವಿಚಾರದಲ್ಲಿ ವ್ಯಾಖ್ಯಾನ ಮಾಡುತ್ತಿದ್ದೇವೆ. ಅದೇ ರೀತಿ ಇಲ್ಲೂ ಆಗುತ್ತದೆ. ಬರೀ ಮಿನಿಸ್ಟರ್ ಎಂದರೆ ಸಾಕಾಗುತ್ತಿತ್ತು. ಮಿನಿಸ್ಟರ್ ಆಫ್ ದಿ ಸ್ಟೇಟ್ ಇದೆ. ಇಲ್ಲಿ ಡೆಪ್ಯುಟಿ ಮಿನಿಸ್ಟರ್ ಅಂತ ಇದೆ. Why a,Deputy Minister'has been used here? Why a'Minister for State'is used here? Why' Cabinet Minister'has not been used? or a'Minister'has not been specified there? ಈ ತರಹ ತಾರತಮ್ಯಗಳು ಒಳಗಡೆ ಏನಾದರೂ ಇದೆಯಾ? ಇದರ ಬಗ್ಗೆ ಬೈಫರೆಕೇಷನ್ ಏನಾದರೂ ಇದೆಯಾ? ಅದಕ್ಕೋಸ್ಕರವೇ technically. better you tell that even a 'Minister' a 'Cabinet Minister'. Let hiom also enjoy the privilege. Why should'nt he?

ಶ್ರೀ ಎಂ.ಪಿ. ಪ್ರಕಾಶ್: ಅದು ತಪ್ಪಾಗುತ್ತದೆ, ಸಾರ್. Minister of State is not a Cabinet Minister Suppose if you say only a Cabinet Minister' then the 'Minister of State' will not come within that purview. ಆ ಕಾರಣಕ್ಕಾಗಿಯೇ ಸ್ಪೆಸಿಫಿಕ್ಕಾಗಿ ಹೇಳಿದ್ದೇವೆ.

SRI D.K. SHIVAKUMAR: Is he not eligible? Is the Cabinet Minister not eligible to hold this office?

SRI M.P. PRAKASH: He is There are three categories, Deputy Ministers. ಅವರಿಗೆ ಫೈಲ್ ಹೋದರೆ ಹೋಗಬಹುದು ಹೋಗದೆ ಇರಬಹುದು.

ಶ್ರೀ ಡಿ.ಕೆ. ಶಿವಕುಮಾರ್: ನನಗೆ ಅದು ಬೇಡ That is a different question. ಈಗ ಚೆಲುವರಾಯಸ್ವಾಮಿಯವರು ಕ್ಯಾಬಿನೆಟ್ ಮಿನಿಸ್ಟರ್ ಆಗಿದ್ದಾರೆ. Whether he enjoys the benefit of this bill or not?

ಶ್ರೀ ಎಂ.ಪಿ. ಪ್ರಕಾಶ್: ಹೌದು ಅದಕ್ಕಾಗಿಯೇ, ಇದೆ.

SRI D.K. SHIVAKUMAR: Whether with this bill he has been protected or not? This has to be clasified.

SRI M.P. PRAKASH: He is protected.

SRI D.K. SHIVAKUMAR: It is not clear here.ನೀವು ಕೊಟ್ಟಿರುವಂತಹ ಬಿಲ್‌ನಲ್ಲಿ ಏನು ಹೇಳಿದ್ದೀರಿ. "the offices of the Chairman,

the Speaker, the Deputy Chairman, the Deputy Speaker, the Minister of State, the Deputy Minister.." So, I think some lacuna is there. ಇದರಲ್ಲಿ ಸ್ವಲ್ಪ ಏನೋ ತಪ್ಪು ಇದೆ. You have to kindly look into this.ಈ ಒಂದು ಅಧಿವೇಶನವನ್ನು ಏನು ಕರೆದಿದ್ದೀರಿ ಇದನ್ನು ಕರೆಯದೆ ತಾವು ಛೇರ್ಮನ್‌ರವನ್ನು ನೇಮಕಾತಿ ಮಾಡಬಹುದಾಗಿತ್ತು. ಯಾರೂ ಕೂಡ ನಿಮಗೆ ಅಬ್ಜಕ್ಷನ್ ಕೂಡ ಮಾಡುತ್ತಿರಲಿಲ್ಲ. ಇದನ್ನು ಮಾಡಿದರೂ ಕೂಡ ಆ ಹೌಸ್‌ಗೆ ಹೋಗಬೇಕು. ಆ ಹೌಸ್‌ನಲ್ಲಿ ಇದು ಪಾಸಾಗಿ ಗೌರ್ನರ್ ಒಪ್ಪಲಿಲ್ಲವೆಂದರೆ, will you see that the Members will wait till that time? ಇದರ ನೆಪದಲ್ಲಿ, ಇದಕ್ಕೆ ಗೌರ್ನರ್ ಸಹಿ ಹಾಕಲಿಲ್ಲ ಎಂದು ಹೇಳಬೇಡಿ. Let some worker enjoy. let some party MLA enjoy. ಇವರು ಹೇಳಿದ ಹಾಗೆ ಇದರ ಜೊತೆಗೆ ಸ್ಪೆಸಿಫಿಕ್ಕಾಗಿ ಮಾಡಿಬಿಡಿ. ಯಾರ್‍ಯಾರು ಯಾವ ಯಾವ ಬೋರ್ಡ್ ಯಾವ ಕಾರ್ಪೊರೇಷನ್, ಕೆಎಸ್‌ಆರ್‌ಟಿಸಿ. ಹೌಸಿಂಗ್ ಬೋರ್ಡ್, ಮತ್ತೊಂದು ಏನೇನು ಇದೆ. ಇಂತಿಂತಹವುಗಳು ಬರುತ್ತದೆ ಪಂಚಾಯತ್ ಛೇರ್ಮನ್ ಸಿಎಂಸಿ ಎಂದು ಏನೇನು ಇದೆ ಆ ಪ್ರಕಾರ ಮಾಡಿಬಿಡಿ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಉಪಾಧ್ಯಕ್ಷರೆ ಇವರು ಸಚಿವರಾಗಿದ್ದಾಗ ಏನೇ ಬೇಕಾಗಿದೆಯೋ ಅವೆಲ್ಲವನ್ನೂ ಮಾಡಿಬಿಟ್ಟಿದ್ದಾರೆ. ನಾವು ಕಾನೂನೆಲ್ಲವನ್ನೂ ನೋಡುತ್ತಿದ್ದೇವೆ.

ಶ್ರೀ ಡಿ.ಕೆ. ಶಿವಕುಮಾರ್: ಆಯಿತು ಬಿಡಪ್ಪಾ. ನಿನಗೇನೂ ಛೇರ್ಮನ್ ಕೊಡುವುದಿಲ್ಲ. ನೀವು ಸುಮ್ಮನಿರಿ.

ಶ್ರೀ ಎಂ.ಪಿ. ವೆಂಕಟೇಶ್: ನಿಮ್ಮ ಮಂತ್ರಿ ದರ್ಬಾರಿನಲ್ಲಿ ಏನು ಬೇಕಾದರೂ ಮಾಡಿ ಆಗಿ ಹೋಯಿತು.

ಶ್ರೀ ಡಿ.ಕೆ. ಶಿವಕುಮಾರ್: ನಿಮ್ಮನ್ನು ಛೇರ್ಮನ್ ಮಾಡುವುದಿಲ್ಲ ತಾವು ದಯವಿಟ್ಟು ಈ ತರಾತುರಿಯನ್ನು ಬಿಟ್ಟು ಕ್ಲಿಯರ್ ಆಗಿ, ದೆಹಲಿಯಿಂದ ಅಂಗೀಕಾರ ಬಂದ ಮೇಲೆ ಮಾಡುವುದು ಒಳ್ಳೆಯದು ಏಕೆಂದರೆ ನಮ್ಮಲ್ಲಿ ಶಕ್ತಿ ಇದೆ. ಇದನ್ನು ವಿತ್‌ಡ್ರಾ ಮಾಡುವುದು ಬೆಟರ್ ತಮಗೆ ಇರುವಂತಹ ಪವರ್ಸ್‌ನಲ್ಲಿ ತಾವು ಯಾರನ್ನು ಬೇಕಾದರೂ ತಮ್ಮ ಪ್ರಭುತ್ವದಲ್ಲಿ ನೇಮಕಾತಿ ಮಾಡಿ ಜೊತೆಗೆ ಎಕ್ಸಿಕ್ಯೂಟೀವ್ ಪವರ್ಸ್ ಉಪಯೋಗಿಸಿ ನೀವು ಯಾರನ್ನು ಎಂಎಲ್‌ಎಗಳನ್ನು ಮಾಡುತ್ತಿರೋ ವರ್ಕರ್ಸ್‌ಗಳನ್ನು ಮಾಡುತ್ತಿರೋ ಅವರಿಗೆ ಎಕ್ಸಿಕ್ಯೂಟೀವ್ ಪವರ್ಸ್‌ನ್ನುಕೊಡಿ. ಸುಮ್ಮನೆ ಆಫೀಸರ್ಸ್ ಕೈ ಕೆಳಗಡೆ ಬರೀ, ಛೇರ್ಮನ್ ಪ್ರಿಸೈಡ್ ಎಂದು ಮಾಡಿದರೆ ಸಾಲದು ನಾಳೇ ಬೆಳಿಗ್ಗೆ ಪಾಪ ಅವರು ಏನೋ ಒಂದು ಆಸೆಯಿಂದ ಛೇರ್ಮನ್ ಆಗುವುದಕ್ಕೆ ಹೋರಡುತ್ತಾರೆ.

ಅದನ್ನು ನಾವೂ ಕೂಡ ನೋಡಿದ್ದೇವೆ. ಈ ಆಫೀಸರ್ಸ್ ಏನೂ ನಡೆಸುವುದಕ್ಕೆ ಬಿಡುವುದಿಲ್ಲ. ಅವರಿಗೆ ಹೇಗೆ ಬೇಕೋ ಆ ರೀತಿಯಾಗಿ ಕಾನೂನುಗಳನ್ನು ಮಾಡಿಕೊಂಡಿರುತ್ತಾರೆ. ನಮಗೆ ಹಾಗೂ ಜನಗಳಿಗೆ ಅನುಕೂಲವಾಗುವಂತಹ ಕಾನೂನುಗಳನ್ನು ಅಫೀಸರ್ಸ್‌ಗಳು ಮಾಡುವುದೇ ಇಲ್ಲ. ಅವರಿಗೆ ಹೇಗೆ ಬೇಕೋ ಆ ರೀತಿಯಾಗಿ ಅವರು ಮಾಡಿಕೊಂಡಿರುತ್ತಾರೆ. ಆದ್ದರಿಂದ ಅವರಿಗೆ ಒಂದಿಷ್ಟು ಅಧಿಕಾರವನ್ನು ಕೊಟ್ಟು ಈ ಬಿಲ್ಲನ್ನು ವಿತ್‌ಡ್ರಾ ಮಾಡುವುದು ಬೆಟರ್ ಎಂದು ಹೇಳಿ ನನ್ನ ಸಲಹೆಯನ್ನು ಸ್ಪೀಕರ್ ಮುಖಾಂತರ ತಮಗೆ ನೀಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್(ಗದಗ): ಮಾನ್ಯ ಉಪಾಧ್ಯಕ್ಷರೇ, ಈಗ ಇರುವಂತಹ ಕಾನೂನಿನೊಳಗಡೆ ನೀವು ಏನೇನು ತಂದಿರುತ್ತೀರಿ, ಅವೆಲ್ಲವೂ ಇದೆ. ಒಂದು ತಾವು ಮಾಡಬೇಕಾಗಿರುವುದು ಏನೆಂದರೆ ಈ ಪ್ರಾವಿಜನ್ ಏನು ಇದೆಯಲ್ಲಾ. "Provided that the holder of any such office is not in receipt.."ಈ proviso ಒಂದನ್ನು ಡಿಲೀಟ್ ಮಾಡಿಬಿಟ್ಟಿದ್ದರೆ ಯಾವ ಅಮೆಂಡ್‌ಮೆಂಟ್ ಅವಶ್ಯಕತೆ ಇರುತ್ತಿರಲಿಲ್ಲ. ಏತಕ್ಕಾಗಿ ತಮಗೆ ಅಧಿಕಾರಿಗಳು ಸರಿಯಾಗಿ ಮಾಹಿತಿಯನ್ನು ಕೊಡಲಿಲ್ಲವೋ ಗೊತ್ತಾಗಲಿಲ್ಲ. ಬಹಳ redumdant ಎಂದು ಅನಿಸುತ್ತದೆ. ದಯವಿಟ್ಟು ಈ ರೀತಿಯಾಗಿ ತಪ್ಪು ಆಗಲಾರದ ಹಾಗೆ ಮುಂದೆ ನೋಡಿಕೊಳ್ಳಿ. ಡೆಫನೇಷನ್‌ನೊಳಗಡೆ ನೀವು ಆ ಪ್ರಾವಿಜನ್‌ನ್ನು ತೆಗೆದ ಮೇಲೆ ಡೆಪನೇಷನ್ ನೊಳಗಡೆ ಕಾಂಪನ್‌ಸೇಟರಿ ಅಲೋಯೆನ್ಸ್ ಎಂಬ ಪದದ ಡೆಫನೇಷನ್ ಕೊಡವ ಅವಶ್ಯಕತೆ ಬರುವುದಿಲ್ಲ. ಅದನ್ನು ಡಿಲೀಟ್ ಮಾಡಿಸಬೇಕಾಗುತ್ತದೆ. ಆ proviso ಅನ್ನು ತೆಗೆದುಬಿಟ್ಟಿದ್ದೇವೆ ಇದರಿಂದ ನೀವು ತಂದಿದ್ದು ಅಕ್ಸ್‌ಫ್ಟ್ ಆದ ಮೇಲೆ legislators can hold any office. ಯಾರಿಗೂ ಏನೂ ತೊಂದರೆಯಾಗುವುದಿಲ್ಲ. ಇದು ಮಾಡಿರುವುದು ಒಳ್ಳೆಯದೇ ಆದರೆ ಅಮೆಂಡ್‌ಮೆಂಟ್ ಈ ರೂಪದಲ್ಲಿ ಬರುವಂತಹ ಅವಶ್ಯಕತೆ ಇರಲಿಲ್ಲ. ದಯವಿಟ್ಟು ಆ ರೀತಿಯಾಗಿ ತಪ್ಪು ಆಗಲಾರದ ಹಾಗೆ ನೀವು ಕ್ಯಾಬಿನೆಟ್‌ನಲ್ಲಾಗಲಿ ಅಥವಾ ವೈಯಕ್ತಿಕವಾಗಿ ಲಾ ಮಿನಿಸ್ಟರ್ ಆಗಲಿ ಸ್ವಲ್ಪ ಟೈಮ್‌ನ್ನು ವಿನಿಯೋಗ ಮಾಡಿದ್ದರೆ, ಈ ತಪ್ಪು ಇನ್ನು ಮುಂದೆ ಆಗಲಾರದ ಹಾಗೆ ನೀವು ನೋಡಿಕೊಳ್ಳಬಹುದು ಎಂದು ಒಂದು ಸಲಹೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು: ಇದಕ್ಕೆ ಸರ್ಕಾರದಿಂದ ಉತ್ತರ ಆಗಬೇಕಾಗಿದೆ.

ಶ್ರೀ ವೈಜನಾಥ್ ಪಾಟೀಲ್(ಚಿಂಚೋಳಿ): ಅಲ್ಲಿ ಪಾರ್ಲಿಮೆಂಟ್‌ನಲ್ಲಿ ನಿಮಗೆ ಬೇಕಾಗಿತ್ತು. ಇಲ್ಲಿ ರಾಜ್ಯದಲ್ಲಿ..

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಸಪೋರ್ಟ್ ಮಾಡಿದರೂ ಕೂಡ ಇಬ್ಬರೂ ಒಂದೇ ಎಂದು ಹೇಳುತ್ತೀರಿ?

ಶ್ರೀ ವೈಜನಾಥ್ ಪಾಟೀಲ್: ಏತಕ್ಕಾಗಿ ಇಷ್ಟು ವಿರೋಧ ಮಾಡಿಕೊಳ್ಳುತ್ತಿದ್ದೀರಿ ಗೊತ್ತಿಲ್ಲ. It is a politics of conveniece. ಅಲ್ಲಿ ಅವರಿಗೆ ಕನ್ವಿನಿಯೆಂಟ್ ಆಗುವ ಹಾಗೆ ಅವರು ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಇವರು ಯಾರ್‍ಯಾರಿಗೆ ಅಡ್ಜೆಸ್ಟ್ ಮಾಡುವುದು ಇವರು ಮಾಡಿಕೊಳ್ಳುತ್ತಿದ್ದಾರೆ. ಈಗ ಹೇಳುತ್ತಾರೆ ಎಂಎಲ್ಎ, ಅವರ ಯೋಗ್ಯತೆ ಉಪಯೋಗಕ್ಕೆ ಬರುತ್ತದೆಯೋ ಮೆಂಬರ್‌ಶಿಪ್ ಹೋಗಬಾರದು ಡಿಸ್‌ಕ್ವಾಲಿಫೈ ಆಗಬಾರದು ಎಂದರೆ ಎಂಎಲ್ಎಗಳನ್ನು ಬಿಟ್ಟು ಬೇರೆ ಕಾರ್ಯಕರ್ತರುಗಳು ಇಲ್ಲವೇ ರಾಜ್ಯದಲ್ಲಿ? ಪ್ರತಿಯೊಂದು ಪಕ್ಷದಲ್ಲಿ ಸಾಕಷ್ಟು ಕಾರ್ಯಕರ್ತರುಗಳು ಇದ್ದಾರೆ. ಅವರನ್ನು ಛೇರ್ಮನ್ ಆಗಿ ಮಾಡಿ. ಬೋರ್ಡ್ ಮತ್ತು ಕಾರ್ಪೊರೇಷನ್‌ಗೆ ಅವರನ್ನು ಛೇರ್ಮನ್ ಆಗಿ ಮಾಡಿ. ರಾಷ್ಟ್ರಮಟ್ಟದಲ್ಲಿಯೂ ಕೂಡ ಅದೇ ಪರಿಸ್ಥಿತಿ. ಅಲ್ಲಿ ಬಿಜೆಪಿಯವರನ್ನು ಇದನ್ನು ವಿರೋಧ ಮಾಡುತ್ತಿದ್ದಾರೆ. ಇಲ್ಲಿ ಅದಕ್ಕೆ ಸಪೋರ್ಟ್ ಮಾಡುತ್ತಿದ್ದಾರೆ. ಎಷ್ಟು ಕಾಂಟ್ರಡಿಕ್ಷನ್ ಇದೆ. ಅಟ್‌ಲಿಸ್ಟ್ ಅವರು ಇಲ್ಲಿ ಅದರ ಬಗ್ಗೆ ವಿರೋಧವನ್ನು ಮಾಡಬೇಕಾಗಿತ್ತು. ಬಿಜೆಪಿಯವರು ಯಡಿಯೂರಪ್ಪನವರು ಈ ಬಿಲ್ಲಿನ ಬಗ್ಗೆ ವಿರೋಧವನ್ನು ಮಾಡಬೇಕಾಗಿತ್ತು. ಈ ಬಿಲ್ಲಿನ ಬಗ್ಗೆ ವಿರೋಧವನ್ನು ಮಾಡಿ ಎಂಎಲ್ಎಗಿಂತ ಬೇರೆ ಒಳ್ಳೆಯ ಸದಸ್ಯರುಗಳು ಯಾರು ಇರುತ್ತಾರೆ, ಒಳ್ಳೆಯ ಕಾರ್ಯಕರ್ತರುಗಳಿಗೆ ಛೇರ್ಮನ್‌ಶಿಪ್ ಸಿಗಬೇಕು. ಅದನ್ನು ಬಿಟ್ಟು ಎಂಎಲ್ಎಗಳಿಗೆ ಮಂತ್ರಿಗಿರಿ ಯಾರ್‍ಯಾರಿಗೆ ಇದೆ, ಅವರಿಗೆ ಛೇರ್ಮನ್‌ಶಿಪ್ ಕೂಡ ಅವರಿಗೆ ಲಭ್ಯವಾಗುವ ಹಾಗೆ ಈ ಬಿಲ್‌ನ್ನು ತರಲಾಗಿದೆ. ಈಗ ಮಾನ್ಯ ಪ್ರಕಾಶ್‌ರವರು ಹೇಳಿದರು.

ಶ್ರೀ ಹೆಚ್.ಸಿ. **ಬಾಲಕೃಷ್ಣ(ಮಾಗಡಿ):** ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀ ವೈಜನಾಥ್‌ಪಾಟೀಲ್‌ರವರು ಮಿನಿಸ್ಟರ್ ಮಾಡಲಿಲ್ಲವೆಂದು ನಮ್ಮನ್ನು ಬಿಟ್ಟು ದೂರ ಹೋಗುತ್ತಿದ್ದಾರೆ. ಈಗ ಛೇರ್ಮನ್ ಹುದ್ದೆಗಳನ್ನು ಕಾರ್ಯಕರ್ತರಿಗೆ ಕೊಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ವೈಜನಾಥ್‌ಪಾಟೀಲ್: ಎಂಎಲ್ಎ ಯಾರೂ ಇಲ್ಲವೆಂದು ಅಂತಹ ಕಾರ್ಯಕರ್ತರಿಗೆ ಛೇರ್ಮನ್‌ಗಿರಿಯನ್ನು ಕೊಡಿ. ಆಗ ಡಿಸ್‌ಕ್ವಾಲಿಫೈ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಹೆಚ್.ಸಿ. **ಬಾಲಕೃಷ್ಣ** : ನೀವು ಇಲ್ಲೇ ಇದ್ದು ಹೇಳಿದರೆ ಸಿ.ಎಂ. ಕೇಳುತ್ತಾರೆ. ನೀವು ಇಲ್ಲಿಯೇ ಇದ್ದು ಅದರ ಬಗ್ಗೆ ಹೇಳಬೇಕಾಗಿತ್ತು.

ಶ್ರೀ ವೈಜನಾಥ್‌ಪಾಟೀಲ್: ಈಗ ಎಂಪಿ ಪ್ರಕಾಶ್‌ರವರು ಪ್ಲೀಡ್ ಮಾಡಿದರು. ಮತ್ತೆ ಕೆಲವರು ಪ್ಲೀಡ್ ಮಾಡುತ್ತಾರೆ. ಬಹುಶಃ ಮುಂದೆ ಚೇರ್‌ಮನ್ ಆಗುವ ಆಶೆಯಿದೆಯೋ ಏನೋ ಎಂಬ ಸಂಶಯ ನನಗೆ ಇದೆ. ಯಾವುದಾದರೂ ಚೇರ್‌ಮನ್‌ಶಿಫ್ ಕೊಡುವುದಾಗಿ ಎಂದು ಆಶ್ವಾಸನೆ ಕೊಟ್ಟಿದ್ದಾರೆಯೋ ಏನೋ ಎಂದು ಕಾಣುತ್ತದೆ.

ಮಾನ್ಯ ಸದಸ್ಯರೊಬ್ಬರು: ನಿಮಗೂ ಆಶ್ವಾಸನೆ ಕೊಡುತ್ತೇವೆ, ನೀವು ಮನಸ್ಸು ಮಾಡುವ ಹಾಗಿದ್ದರೆ ನೋಡಿ.

ಶ್ರೀ ವೈಜನಾಥ್ ಪಾಟೀಲ್: ಆ ಆಶೆಯಂತೂ ಹೋಗಿದೆ. ಬಹುಶ: ದೇವೆಗೌಡರು ಯಾವುದಾದರೂ ಬೋರ್ಡ್‌ಗೆ ಚೇರ್‌ಮನ್‌ಶಿಫ್ ಕೊಡುವುದಾಗಿ ಆಶ್ವಾಸನೆ ಕೊಟ್ಟಿದ್ದಾರೋ ಏನೋ ಗೊತ್ತಿಲ್ಲ. ಆ ದೃಷ್ಟಿಯಿಂದ ಅವರು ಬಹಳ ಪ್ಲೀಡ್ ಮಾಡುತ್ತಿದ್ದಾರೆ. ಈಗ ಈ ಬಿಲ್ಲಿನ ಅವಶ್ಯಕತೆಯೇ ಇಲ್ಲ. ಕರ್ನಾಟಕದಿಂದ ಅದು ಡಿಸ್‌ಕ್ವಾಲಿಫೈ ಆಗಿ ಹೋಗಲಿ. ಯಾರೂ ಬೋರ್ಡ್ ಚೇರ್‌ಮನ್ ಆಗುವುದು ಬೇಡ. ಈಗ ಮಂತ್ರಿಮಂಡಲದಲ್ಲಿ 15% ಇರಬೇಕೆಂದು ಒಂದು ಅಮೆಂಡ್‌ಮೆಂಟ್ ಆಗಿದೆ. ಹಂತಹಂತವಾಗಿ ಅದರಲ್ಲಿ ರೆವಲ್ಯೂಷನರಿ ಸ್ಟೆಪ್ ತೆಗೆದುಕೊಳ್ಳಿ. ಅದು ಕರ್ನಾಟಕದಿಂದ ಶುರುವಾಗಲಿ. ಕೇಂದ್ರದವರು ಹೇಗೆ ಮಾಡಿದ್ದಾರೋ ಅಲ್ಲಿಯ ತರಹವೇ ಇಲ್ಲಿಯೂ ಶುರು ಮಾಡುವುದು. ಅದೂ ಇಬ್ಬರೂ ಕೂಡಿ ಮಾಡುವುದು, ಇಲ್ಲಿ ಏನು ಚರ್ಚೆ ನಡೆದಿದೆ, ಅದು ಆರ್ಟೀಫಿಷಿಯಲ್ ಆಗಿ ಒಬ್ಬರಿಗೊಬ್ಬರು ವಿರೋಧ ಮಾಡುತ್ತಿದ್ದಾರೆ. ಯಾವುದಾದರೂ ಒಂದು ಪಾಯಿಂಟ್ ಬಂದರೆ ಇಬ್ಬರೂ ಒಂದೇ. ಡಿಸ್‌ಕ್ವಾಲಿಫಿಕೇಷನ್ ಪಾಯಿಂಟ್ ಬಂದರೆ ಇಬ್ಬರೂ ಒಂದೇ. ಆ ಗವರ್ನರ್ ಪ್ರಶ್ನೆ ಬಂದಾಗ ಇಬ್ಬರೂ ಒಂದೇ ಏತಕ್ಕೆ ಉಳಿದಿದ್ದಾರೆ ಗೊತ್ತಿಲ್ಲ. ಅವರು ಎರಡು ವರ್ಷ ಹದಿನೆಂಟು ತಿಂಗಳೂ ಆದರೂ ಗವರ್ನರ್ ಬಗ್ಗೆ ಆಗ ಏನೂ ವಿರೋಧ ಮಾಡಿಲ್ಲ. ಈಗ ವಿರೋಧ ಮಾಡುತ್ತಿದ್ದಾರೆ. ಈಗ ಇವರನ್ನು ಅವರು ಮುಂದುವರಿಸುತ್ತಿದ್ದಾರೆ. ಕೆಲವು ಫೈಟ್‌ಗಳಲ್ಲಿ ಇವರಿಬ್ಬರೂ ಒಂದೇ. ಅಟ್‌ಲೀಸ್ಟ್ ಕರ್ನಾಟಕದಿಂದ ಇಂತಹ ಒಂದು ಮೆಸೇಜ್ ಹೋಗಲಿ. ಪ್ರಿವೆನ್‌ಷನ್ ಆಫ್ ಡಿಸ್‌ಕ್ವಾಲಿಫಿಕೇಷನ್ ಬಿಲ್ ಅನ್ನು ಸರ್ಕಾರ ಏನು ತಂದಿದೆ, ಈ ಬಿಲ್ ಅನ್ನು ಸರ್ಕಾರ ವಾಪಾಸ್ ತೆಗೆದುಕೊಳ್ಳಬೇಕು. ನಿಮಗೆಲ್ಲರಿಗೂ ಅವಕಾಶ ಸಿಗುವುದಿಲ್ಲ. ಬಹಳ ಜೋರು ಮಾಡಿದರೆ ನಿಮ್ಮ ನಂಬರ್ ಹತ್ತುತ್ತದೆ ಎಂದು ಅಂದುಕೊಳ್ಳಬೇಡಿ. ಪ್ರಕಾಶ್ ಅಂಥವರದ್ದೇ ಬಹಳ ಮುಷ್ಕಿಲ್ ಆಗಿದೆ. ಆ ದೃಷ್ಟಿಯಿಂದ ನಿಮಗೆಲ್ಲಾ ಅವಕಾಶ ಸಿಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ: ಅವರು ನಾವು ಆರ್ಟಿಫಿಶಿಯಲಿ ಆಪೋಸ್ ಮಾಡುತ್ತಿದ್ದೇವೆ. ಆದರೆ ನೀವು ನಾವು ಒಂದಾಗಿದ್ದೇವೆ ಅಲ್ಲವೇ?

ಶ್ರೀ ವೈಜನಾಥ್ ಪಾಟೀಲ್: ಇಲ್ಲ, ಅದು ತಪ್ಪು, ಅದು ಸತ್ಯಕ್ಕೆ ದೂರವಾದುದು. ಆ ದೃಷ್ಟಿಯಿಂದ ರಾಜ್ಯದಲ್ಲಿ ಇಂಥದೊಂದು ಅಮೆಂಡ್‌ಮೆಂಟ್ ಏನು ತರುತ್ತಿದ್ದೀರಿ, ಇದನ್ನು ನಾನು ವಿರೋಧ ಮಾಡುತ್ತೇನೆ, ಇಲ್ಲಿ ಬಂದು ಇದು ಶುರುವಾಯಿತು ಅಂದರೆ ಬಹುಶ: ಇಡೀ ರಾಷ್ಟ್ರದಲ್ಲಿರಬಹುದು. ಇದರಿಂದ ನಿಮ್ಮ ಕಾರ್ಯಕರ್ತರ ವಿಶೇಷವಾಗಿ ನಿಮ್ಮ ಬಿ.ಜೆ.ಪಿ. ಯವರ ಕೇಡರ್ ಬಹಳ ದೊಡ್ಡದಿದೆ. ಆದ್ದರಿಂದ ಇದನ್ನು ಪ್ರೊಟೆಕ್ಟ್ ಮಾಡಿರಿ. ಕೇಂದ್ರದಲ್ಲಿ ಹೇಗೆ ಈ ಬಿಲ್ಲಿಗೆ ವಿರೋಧಿಸುತ್ತಿದ್ದಾರೆ, ಹಾಗೆ ಇಲ್ಲಿಯೂ ಈ ಬಿಲ್ಲಿಗೆ ವಿರೋಧಿಸಿ ಸೋಲಿಸಿರಿ. ಸೋಲಿಸಿದರೆ ನೀವು ಬಹಳಷ್ಟು ಕಾರ್ಯಕರ್ತರು ಇಲ್ಲಿ ಉಳಿದುಕೊಂಡು ಹೋಗುತ್ತಾರೆ. ಆ ದೃಷ್ಟಿಯಿಂದ ನಾನು ಈ ಬಿಲ್ಲನ್ನು ವಿರೋಧಿಸುತ್ತೇನೆ. ಮತ್ತೆ ಬಿ.ಜೆ.ಪಿ ಬಾಂಧವರು ವಿರೋಧ ಮಾಡಬೇಕು, ಏಕೆಂದರೆ ಅಲ್ಲಿ ಎಲ್.ಕೆ. ಅಡ್ವಾನಿಯವರು ಇದಕ್ಕೆ ವಿರೋಧ ಮಾಡುತ್ತಿದ್ದಾರೆ, ನೀವು ಇದಕ್ಕೆ ಸಪೋರ್ಟ್ ಮಾಡುತ್ತೇವೆಂದರೆ ಹೇಗೆ? ತಾವ್ಯೂ ಯಾರೂ ಸಹ ಮಾತನಾಡುತ್ತಲೇ ಇಲ್ಲ. ಹಾಗಾಗಿ ಈ ಬಿಲ್ಲಿನ ಬಗ್ಗೆ ಬಹಳಷ್ಟು ಜನ ಮಿನಿಸ್ಟರ್ಸ್ ಸಹಿತ ಹೇಳಿದ್ದಾರೆ. ಸ್ಪೀಕರ್, ಡೆಪ್ಯುಟಿ ಸ್ಪೀಕರ್, ಮಿನಿಸ್ಟರ್, ಈ ಎಲ್ಲಾ ಹುದ್ದೆಗಳನ್ನು ಸೇರಿಸಿದ್ದಾರೆ. ಯಾರೂ ಎಂ.ಎಲ್.ಎ., ಎಂ.ಎಲ್.ಸಿ., ಇರುವುದಿಲ್ಲ ಅವರು ಮಿನಿಸ್ಟರ್ ಆಗಲಿಕ್ಕೆ ಸಾಧ್ಯವಿಲ್ಲ. ಮ್ಯಾಕ್ಸಿಮಮ್ ಆರು ತಿಂಗಳವರೆಗೆ ಇರಬಹುದು. ಹಾಗಾಗಿ ಆ ಬಿಲ್ಲನ್ನು ತರುವ ಹಾಗೂ ಈ ಹುದ್ದೆಗಳನ್ನು ಸೇರಿಸತಕ್ಕಂಥ ಅವಶ್ಯಕತೆ ಏನಿದೆ? ಸ್ಪೀಕರ್,ಡೆಪ್ಯುಟಿ ಸ್ಪೀಕರ್, ಮಿನಿಸ್ಟರ್ ಆಫ್ ಕ್ಯಾಬಿನೆಟ್, ಮಿನಿಸ್ಟರ್ ಆಫ್ ಸ್ಟೇಟ್, ಡೆಪ್ಯುಟಿ ಮಿನಿಸ್ಟರ್ ಈ ಎಲ್ಲಾ ಹುದ್ದೆಗಳನ್ನು ಅನಾವಶ್ಯಕವಾಗಿ ಸೇರಿಸಿದ್ದಾರೆ. ಆ ದೃಷ್ಟಿಯಿಂದ ಈ ಬಿಲ್ಲನ್ನು ವಾಪಸ್ಸು ತೆಗೆದುಕೊಂಡು ರೆಕ್ಟಿಫೈ ಮಾಡಿ ಅಮೆಂಡ್‌ಮೆಂಟ್ ಮಾಡಿ ತನ್ನಿ ಎಂದು ನಾನು ಸರ್ಕಾರಕ್ಕೆ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಈ ಬಿಲ್ ಮೇಲ್ಮನೆಗೆ ಹೋಗಬೇಕು. ಇನ್ನೂ ಎಷ್ಟು ಜನ ಮಾತನಾಡುತ್ತೀರಿ? ಆ ಕಡೆಯೂ ಮಾತನಾಡಬೇಕು, ಈ ಕಡೆಯೂ ಮಾತನಾಡಬೇಕು.

ಕೆ. ಶ್ರೀನಿವಾಸಗೌಡ (ಕೋಲಾರ): ನಾನು ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಈ ಮನೆಯಲ್ಲಿ ಮೂಲತ: ಈ ಸಭೆಯನ್ನು ಕರೆಯಬೇಕೆಂದು ನಾನೇ ಹೇಳಿದ್ದು. ನೀವು ನನಗೆ ಮಾತನಾಡಲಿಕ್ಕೆ

ಬಿಡಲಿಲ್ಲವೆಂದರೆ ನಾನು ಈ ಸಭೆಯಲ್ಲಿ ಏತಕ್ಕೆ ಇರಬೇಕು, ಎರಡು ನಿಮಿಷ ಮಾತನಾಡಲಿಕ್ಕೂ ನೀವು ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಉಪಾಧ್ಯಕ್ಷರು: ಆಯಿತು, ಎರಡು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ: ಮಾನ್ಯ ಉಪಾಧ್ಯಕ್ಷರೇ, ಹೋದ ವಿಧಾನಸಭೆ ನಡೆಯುವಾಗ ಇದೊಂದು ದೊಡ್ಡ ಸುದ್ಧಿಯಾಗಿತ್ತು. ಹಾಗಾಗಿ ಈ ಸಭೆಯಲ್ಲಿ ಒಂದು ಸಾರಿ ನಾನೇ ಸ್ಪೀಕರ್‌ರವರಿಗೆ ಒಂದು ಸಾರಿ ಈ ಬಗ್ಗೆ ವಿಶೇಷವಾದ ಸಭೆಯನ್ನು ಕರೆಯಬೇಕೆಂದು ಸಜೆಸ್ಟ್ ಮಾಡಿದ್ದೆ. ಒಂದು ತುರ್ತು ಸಭೆಯನ್ನು ಕರೆದು ನಾವು ಏನೇನು ಬೆಳಕನ್ನು ಚೆಲ್ಲಲಿಕ್ಕೆ ಸಾಧ್ಯವೋ ಅದಕ್ಕೆ ಅವಕಾಶ ಮಾಡಿಕೊಡಿ ಎಂದು ಹೇಳಿದ್ದು ನಿಜ. ಅದಾದ ಮೇಲೆ ಅನೇಕ ವಿಷಯಗಳು ಪಾರ್ಲಿಮೆಂಟ್‌ನಲ್ಲಿ ಚರ್ಚೆಯಾಗಿ ಇವತ್ತು ಪ್ರೆಸಿಡೆಂಟ್‌ರವರಿಂದ ವಾಪಸ್ಸು ಬಂದು ಆ ದಿಕ್ಕಿನಲ್ಲಿ ನಿಂತಿದೆ. ಕೆಲವರ ಅಭಿಪ್ರಾಯ ಒಂದು ರೀತಿಯಿದೆ, ನನ್ನ ಅಭಿಪ್ರಾಯವೇನೆಂದರೆ ನೀವು ಅವತ್ತು ಕರೆಯಬೇಕೆಂದು ಹೇಳಿದ್ದಕ್ಕೆ ಸಭೆಯನ್ನು ಕರೆದಿದ್ದೀರಿ. ಅದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಹಾಗೂ ಉಪಾಧ್ಯಾಕ್ಷರಿಗೆ ವಂದನೆಯನ್ನು ಅರ್ಪಿಸುತ್ತೇನೆ. ಇವತ್ತು ಮಾನ್ಯ ಮಾಧುಸ್ವಾಮಿ ಹೇಳಿದಂತೆ ಸ್ಪೀಕರ್, ಡೆಪ್ಯುಟಿ ಸ್ಪೀಕರ್ ವಿಷಯದಲ್ಲಿ ಇವರು ಈ ಬಿಲ್ಲನ್ನು ತಂದಿರುವುದು ಸರಿಯೆಂದು ನಾನು ಹೇಳುತ್ತೇನೆ. ಕಾರಣವೇನೆಂದರೆ ಈಗ ಹೆಚ್.ಡಿ. ರೇವಣ್ಣನವರನ್ನು ಸ್ಪೀಕರ್ ಮಾಡಿದರೆ ನಾಳೆ ಒಂದು ತೀರ್ಮಾನಕ್ಕೆ ಈ ಪಕ್ಷದಲ್ಲಿ ಬರುತ್ತಾರೆ. ಆಗ ಮಾಡಿದರೆ ಡಿಸ್‌ಕ್ವಾಲಿಫಿಕೇಷನ್ ಎಂ.ಎಲ್.ಎ.ಗೆ ಬರುತ್ತದೆ. ಆ ರೀತಿ ಆದಾಗ ಆ ಮೆಂಬರ್ ಸ್ಪೀಕರ್ ಆಗಲಿಕ್ಕಾಗುವುದಿಲ್ಲ. ಹಾಗಾಗಿ ಈ ಬಿಲ್ಲನ್ನು ತರುವುದು ಸರಿಯೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಎರಡನೆಯದಾಗಿ ಇವತ್ತು ಬಹಳಷ್ಟು ಪತ್ರಿಕೆಗಳಲ್ಲಿ ಈ ಆಫೀಸ್ ಆಫ್ ಪ್ರಾಫಿಟ್ ಬಂದಿದ್ದರಿಂದ ಚೇರ್ಮನ್ ಮಾಡಲಿಲ್ಲ. ಮಂತ್ರಿಮಂಡಲ ವಿಸ್ತರಣೆ ಮಾಡಲಿಲ್ಲವೆಂದು ಮಾನ್ಯ ಕುಮಾರಸ್ವಾಮಿಯವರಿಗೆ ಬಹಳಷ್ಟು ಸಮಯ ಕೊಟ್ಟರು ಇದರ ಬಗ್ಗೆ ಪಬ್ಲಿಕ್ ಆಗಿ ಹೇಳಿಬಿಡಿ ಎಂದು ಹೇಳಿ, ಡಿಲೇ ಸ್ಟ್ಯಾಟಿಸ್ಟಿಕ್ಸ್ ಮಾಡಿದ್ದೀರಿ ಎನ್ನುವ ಅನಿಸಿಕೆಯಂತೂ ನನಗೆ ಇದೆ. ಆದರೂ ಪರವಾಗಿಲ್ಲ, ನಿಧಾನವಾಗಿಯಾದರೂ ಈ ಬಿಲ್ಲನ್ನು ತಂದಿದ್ದೀರಿ, ಬಹಳಷ್ಟು ಬೆಳಕನ್ನು ಚೆಲ್ಲಿದ್ದೀರಿ, ಆದರೆ ಒಂದು ವಿಷಯ ಬರೇ ಎಂ.ಎಲ್.ಎ.ಗಳಿಗೋಸ್ಕರವೇ ಈ ಸಭೆಯನ್ನು ಕರೆದಿದ್ದೀರಿ, ಹಾಗಾದರೆ ಎಂ.ಎಲ್.ಎ.ಗಳು ಬೇರೆ ಹುದ್ದೆಗಳಲ್ಲಿರಬಾರದೆ? ಬೇರೆ ಬಿಸನೆಸ್ ಮಾಡಬಾರದೇ? ಹೀಗೆ ಅನೇಕ ವಿಷಯಗಳನ್ನು ಇವತ್ತು ಚರ್ಚೆ ಮಾಡಲಾಗಿದೆ. ಅದರಲ್ಲಿಯೂ ಎಂ.ಪಿ.ಪ್ರಕಾಶ್‌ರವರು ಕೆಲವು ವಿಷಯಗಳಲ್ಲಿ ಬಹಳ ಚೆನ್ನಾಗಿ

ಮಾತನಾಡಿದ್ದಾರೆ. ಆ ಬೆಳಕನ್ನು ಚೆಲ್ಲಿದ್ದನ್ನೂ ಇಡೀ ರಾಜ್ಯ ನೋಡುತ್ತೇದೆ. ಹಾಗಾಗಿ ನಾವು ಮಾಡಿರುವುದನ್ನು ತಪ್ಪು ಅಥವಾ ನೆಪ್ಪು ಎಂದು ಹೇಳುವುದರ ಬದಲು, ಇರದ ಮೇಲೆ ಬೆಳಕು ಚೆಲ್ಲುವಂತಹ ಅವಶ್ಯಕತೆ ಈ ಸಭೆಗಿತ್ತು. ಹಾಗಾಗಿ ಈ ಸಭೆಯನ್ನು ಮಾಡಿದ್ದಾರೆಂದು ಹೇಳಿ ಮತ್ತೊಂದು ಇತ್ತೀಚಿನ ದಿನಗಳಲ್ಲಿ ಒಣಭೂಮಿ ಮರುಭೂಮಿ ಆಗುತ್ತಿದೆ. ಇದರ ಮೇಲೆ ಒಂದು ಬಾರಿ ವಿಶೇಷವಾದಂತಹ ವಿಧಾನಸಭೆಯನ್ನು ಕರೆದು ಇದರ ಬಗ್ಗೆ ಸುದೀರ್ಘವಾದ ಚರ್ಚೆಯನ್ನು ಮಾಡದಿದ್ದರೆ ನಮ್ಮಂಥ ಬಯಲು ಸೀಮೆಯವರು ಬಹಳ ಕಷ್ಟಕ್ಕೆ ಸಿಲುಕಿಹಾಕಿಕೊಳ್ಳುತ್ತೇವೆ. ಹಾಗಾಗಿ ಇದರ ಮೇಲೆ ಒಂದು ವಿಶೇಷ ಸಭೆಯನ್ನು ಕರೆಯಬೇಕೆಂದು ತಮ್ಮ ಮೂಲಕ ಹೇಳಿ ಈವತ್ತೇನು ಈ ಬಿಲ್ಲನ್ನು ತಂದಿದ್ದೀರಿ, ಇದನ್ನು ಸಾರಸಗಟಾಗಿ ಸ್ವಾಗತಿಸುತ್ತೇನೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಸವರಾಜ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೇ, ಇವತ್ತು ಅನೇಕ ಹಿರಿಯ ಸದಸ್ಯರು ಇಲ್ಲಿ ಮಾರ್ಗದರ್ಶನ ನೀಡಿದ್ದಾರೆ. ಹಿಂದಿನ ಸಭೆಯಲ್ಲಿ ಸುದೀರ್ಘವಾದ ಚರ್ಚೆಯಾಗಬೇಕೆಂದು ತೀರ್ಮಾನಿಸಲಾಗಿತ್ತು. ಆದುದರಿಂದ ನಾವು ಇವತ್ತು ತರಾತುರಿಯಲ್ಲಿ. ಅನಾವಶ್ಯಕವಾಗಿ ಈ ಬಿಲ್ಲನ್ನು ತಂದಿದ್ದೇವೆ ಎಂದು ಮಾನ್ಯ ಸದಸ್ಯರನೇಕರು ಹೇಳಿದರೂ ನಾನು ಅದನ್ನು ಒಪ್ಪುವುದಿಲ್ಲ. ಇದು ಎಲ್ಲರಿಗೂ ಸಂಬಂಧಪಡುವ ವಿಷಯ. ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಗಬೇಕೆಂದು ವಿಶೇಷ ಅಧಿವೇಶನವನ್ನು ಕರೆಯುವಂತಹ ಪ್ರಶ್ನೆ ಬಂದಿತು. ಮಾನ್ಯ ಉಪಾಧ್ಯಕ್ಷರೇ, ಈ ಅಧಿವೇಶನ ಕರೆಯುವುದಕ್ಕಿಂತ ಪೂರ್ವದಲ್ಲಿ ಸಾಕಷ್ಟು ಈ ಬಗ್ಗೆ ಚರ್ಚೆಯಾಗಿದೆ, ಎಲ್ಲಾ ಎಕ್ಸ್‌ಪರ್ಟ್ಸ್‌ಗಳನ್ನು ಕೇಳಿದ್ದೇವೆ. ಕಾನೂನು ತಜ್ಞರೊಂದಿಗೆ ಸಮಾಲೋಚಿಸಿ, ಎಲ್ಲಾ ದೃಷ್ಟಿಯಿಂದ ಈ ವಿಶೇಷ ಅಧಿವೇಶನವನ್ನು ಕರೆಯುವಂತಹ ಪರಿಸ್ಥಿತಿ ನಿರ್ಮಾಣವಾಯಿತು. ಇದರ ಅರ್ಥವೇನೆಂದರೆ, ಎಲ್ಲಾ ಮಾನ್ಯ ಸದಸ್ಯರೂ ಇದರಲ್ಲಿ ಭಾಗವಹಿಸಿ ಎಲ್ಲಾ ರೀತಿಯ ಸಲಹೆ ಸೂಚನೆಗಳನ್ನು ನೀಡಲಿ, ಇವತ್ತು ಕೇಂದ್ರ ಸರ್ಕಾರ ಅಥವಾ ಬೇರೆ ರಾಜ್ಯಸರ್ಕಾರ ಇರಬಹುದು, ಅದಕ್ಕಿಂತ ಹೆಚ್ಚು ವಿಷಯಗಳನ್ನು ಕ್ರೋಢೀಕರಿಸಿ ನಾವು ಏತಕ್ಕೆ ಮಾಡಬಾರದು ಎಂಬ ಸದುದ್ದೇಶದಿಂದ ಈ ಒಂದು ಅಧಿವೇಶನವನ್ನು ಕರೆದಿದ್ದೇವೆಯೇ ಹೊರತಾಗಿ ಅನಾವಶ್ಯಕವಾದುದು ಅಥವಾ ಮತ್ತೇನೂ ಇದರಲ್ಲಿ ಇಲ್ಲ. ಆದರೂ ಕೂಡ ಇವತ್ತು ಕೇಂದ್ರ ಸರ್ಕಾರದಲ್ಲಿ 1956, 1983, ಬೇರೆ ಬೇರೆ ಇಸವಿಯಲ್ಲಿ ಬಂದಿದೆಯೆಂದು

ಹೇಳಿದ್ದಾರೆ ಅದನ್ನು ಒಪ್ಪುತ್ತೇವೆ. ಕೇಂದ್ರ ಸರ್ಕಾರದಲ್ಲಿದ್ದರೂ ಸಹಿತ ಜಯಾಬಚ್ಚನ್ ಅವರ ಕೇಸು ಪ್ರಾರಂಭವಾದ ನಂತರ ಅನೇಕ ಹೊಸ ಹೊಸ ಸಮಸ್ಯೆಗಳು ಎಲ್ಲಾ ದೇಶಗಳಲ್ಲಿ ಹುಟ್ಟುತ್ತವೆ, ವರ್ಕ್‌ಗೆ ಬೋರ್ಡ್ ಇದೆ, ಕಲ್ಕತ್ತಾದಲ್ಲಿ ಆಫೀಸ್ ಆಫ್ ಪ್ರಾಫಿಟ್ ಇದೆ, ಇನ್ನೊಂದು ರಾಜ್ಯದಲ್ಲಿ ಆಫೀಸ್ ಆಫ್ ಫ್ರಾಫಿಟ್ ಇಲ್ಲ. ಇವತ್ತು ಯಾವುದಾದರೂ ಸಣ್ಣ ಸಣ್ಣ ಉದಾಹರಣೆಗಳು ಬರಬಹುದು. ಇದು ಬರಬಾರದೆನ್ನುವುದಕ್ಕೆ, ಇವತ್ತು ಒಂದು ಸರ್ಕಾರ ಇದೆ, ಒಂದು ಸರ್ಕಾರ ಹೋಗುತ್ತದೆ, ಒಂದು ಸರ್ಕಾರ ಬರುತ್ತದೆ. ಹಾಗಾಗಿ ಒಟ್ಟಾಭಿಪ್ರಾಯವನ್ನು ಕ್ರೋಢೀಕರಿಸಿ ಇದಕ್ಕೊಂದು ಸರಿಯಾದಂತಹ ಕಾನೂನನ್ನು ಮಾಡೋಣ ಎನ್ನುವ ದೃಷ್ಟಿಯಿಂದ ಇದನ್ನು ತಂದಿದ್ದೇವೆ. ಇವತ್ತು ಸ್ಪೀಕರ್, ಡೆಪ್ಯುಟಿ ಸ್ಪೀಕರ್ ಹುದ್ದೆಗಳನ್ನು ಏತಕ್ಕ ಸೇರಿಸಿದ್ದೀರಿ ಎಂದು ಕೇಳಿದರು, ಇವತ್ತು ವಿಧಾನಸಭೆ ಡಿಸಾಲ್ವ್ ಆದರೆ ಮುಂದಿನ ವಿಧಾನಸಭೆ ಬರುವವರೆಗೆ ಸ್ಪೀಕರ್ ಅವರು ಕಂಟಿನ್ಯೂ ಆಗುತ್ತಾರೆ. ಆಗ ಅವರು ಸಂಬಳವನ್ನು ತೆಗೆದುಕೊಳ್ಳುತ್ತಾರೆ. ನಾಳೆ ಆಕಸ್ಮಾತ್ ಚುನಾವಣೆಗೆ ಅವರು ನಾಮಿನೇಷನ್ ಕೊಡಲಿಕ್ಕೆ ಹೋದಾಗ ಇವರು ಸಂಬಳವನ್ನು ತೆಗೆದುಕೊಳ್ಳುತ್ತಾರೆ, ಹಾಗಾಗಿ ಆಫೀಸ್ ಆಫ್ ಪ್ರಾಫಿಟ್‌ನಲ್ಲಿ ಬರುತ್ತಾರೆಂದು ಸ್ಪೀಕರ್‌ರವರಿಗೆ ಆ ನಾಮಿನೇಷನ್ ರಿಜೆಕ್ಟ್ ಆಗುವಂತಹ ಪ್ರಶ್ನೆ ಬರಬಹುದು. ಅದಕ್ಕೆ ನಾವೆಲ್ಲಾ ಚರ್ಚೆ ಮಾಡಿ ಈ ಒಂದು ಕಾನೂನನ್ನು ತರಲಿಕ್ಕೆ ಪ್ರಯತ್ನ ಮಾಡಿದ್ದೇವೆ. ಹಲವರು ಮಿನಿಸ್ಟರ್ ಅನ್ನು ಏತಕ್ಕೆ ಹಾಕಿಲ್ಲವೆಂದು ಕೇಳಿದರು. ಆರ್ಟಿಕಲ್ 191ರ ಪ್ರಕಾರ ಮಂತ್ರಿಗಳಿಗೆ ಸಂವಿಧಾನದಲ್ಲಿ ಅವಕಾಶವಿದೆ. ಆದ್ದರಿಂದ ಮಂತ್ರಿಗಳನ್ನು ಈ ಬಿಲ್‌ನಲ್ಲಿ ಸೇರಿಸಿಲ್ಲ. ಈ ಅಧಿವೇಶನವನ್ನು ಕರೆಯಬೇಕಾದರೆ ಎಲ್ಲಾ ರೀತಿಯ ತರ್ಕವನ್ನು ನಾವು ವಿಚಾರ ಮಾಡಿರುತ್ತೇವೆ. ಮತ್ತೆ ಜನ ಹೇಳುತ್ತಾರೆಂದು ಹೇಳುತ್ತಾರೆ. ಅನೇಕಸಾರಿ ಈ ಸದನದಲ್ಲಿ 4 ತಾಸು, 5 ತಾಸು ಯಾವುದೇ ಚರ್ಚೆಯಾಗುವುದಿಲ್ಲ. ಆಗ ಜನ ನೋಡುವುದಿಲ್ಲವೇ? ಈ ಒಂದು ವಿಚಾರದಲ್ಲಿ ಸಂಪೂರ್ಣವಾಗಿ ಚರ್ಚೆಯಾಗಲಿ; ಇಷ್ಟೆಲ್ಲಾ ಸದಸ್ಯರು ಚರ್ಚೆ ಮಾಡಿ, ಅನೇಕ ಸಲಹೆ ಸೂಚನೆ ಗಳನ್ನು ಕೊಟ್ಟಿದ್ದಾರೆ. ಆ ಸಲಹೆ ಸೂಚನೆಗಳನ್ನೆಲ್ಲಾ ತೆಗೆದುಕೊಂಡು ಮುಂದೆ, ಇವುಗಳೇ ಮಾರ್ಗದರ್ಶನ ಎಂದು ತಿಳಿದುಕೊಂಡು ನಾವು ಮಾಡಬೇಕೆಂಬ ದೃಷ್ಟಿಯಿಂದಲೇ ಈ ಸಭೆಯನ್ನು ಕರೆದಿದ್ದೇವೆ. ಮಾನ್ಯ ಸದಸ್ಯರೆಲ್ಲಾ ಏನೇನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ಆ ಎಲ್ಲಾ ಸಲಹೆ ಸೂಚನೆಗಳನ್ನು ನಾವು ಚೆರ್ಚೆ ಮಾಡಿ, ಬರುವಂತಹ ದಿನಗಳಲ್ಲಿ ಇದರ ಬಗ್ಗೆ ಸೂಕ್ಷ್ಮವಾದಂತಹ ವಿಚಾರವನ್ನು ಸಹಿತ ಗ್ರಹಿಸಿಕೊಂಡು ಇದನ್ನು ನಾವು

ತರುತ್ತೇವೆಂಬ ಮಾತನ್ನು ಹೇಳಿ, ತಮ್ಮ ಮೂಲಕ ಈ ಬಿಲ್ಲನ್ನು ಅನುಮೋದಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಪರ್ಯಾಲೋಚನಾ ಪ್ರಸ್ತಾವನೆ

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ(ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು:

ಖಂಡ 2 ಮತ್ತು 3:

ಉಪಾಧ್ಯಕ್ಷರು: ಪ್ರಸ್ತಾವ ವೆನೆಂದರೆ "ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ಮತ್ತು 3, ಎರಡೂ ಸೇರಿದಂತೆ, ಈ ವಿಧೇಯಕಕ್ಕೆ ಸೇರಿಸಲ್ಪಟ್ಟಿತ್ತು)

ಖಂಡ 1 ಇತ್ಯಾದಿ:

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ.

"ಮೊದಲನೆಯ ಖಂಡ, ದೀಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮ ಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಹೊರಟ್ಟಿ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಉಪಾಧ್ಯಕ್ಷರೇ "2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ (ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ."

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ,

"2006ನೇ ಸಾಲಿನ ಕರ್ನಾಟಕ ವಿಧಾನ ಮಂಡಲ(ಅನರ್ಹತೆಯನ್ನು ತಡೆಗಟ್ಟುವ) (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.